# ಭಾರತ ಸ್ಟಾಂಪು ಅಧಿನಿಯಮ, 1899

**(1899ರ ಅಧಿನಿಯಮ ಸಂಖ್ಯೆ 2 )**

**[12-6-2003 ರ ಭಾರತ ರಾಜಪತ್ರದ IX ನೇ ಭಾಗದ, 1 ನೇ ವಿಭಾಗದ, 25 ನೇ ಸಂಪುಟದ, 1 ನೇ ಸಂಖ್ಯೆಯ ವಿಶೇಷ ಸಂಚಿಕೆಯಲ್ಲಿ 2 ರಿಂದ 49 ರ ವರೆಗಿನ ಪುಟಗಳಲ್ಲಿ ಪ್ರಕಟಿತ]**

**ವಿಷಯಾನುಕ್ರಮಣಿಕೆ**

**ಅಧ್ಯಾಯ - I**

**ಪ್ರಾರಂಭಿಕ**

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಪರಿಭಾಷೆಗಳು

**ಅಧ್ಯಾಯ-II**

**ಸ್ಟಾಂಪು ಸುಂಕಗಳು**

**ಎ. ಲಿಖಿತಗಳು ಶುಲ್ಕಕ್ಕೆ ಗುರಿಯಾಗುವುದು**

3. ಶುಲ್ಕವನ್ನು ವಿಧಿಸಬಹುದಾದ ಲಿಖಿತಗಳು
4. ಮಾರಾಟದಲ್ಲಿ, ಅಡಮಾನದಲ್ಲಿ ಅಥವಾ ವ್ಯವಸ್ಥೆಯ ಏಕ ವ್ಯವಹಾರದಲ್ಲಿ ಉಪಯೋಗಿಸಲಾದ ಹಲವು ಲಿಖಿತಗಳು
5. ಹಲವು ವಿಭಿನ್ನ ವಿಷಯಗಳಿಗೆ ಸಂಬಂಧಿಸಿದ ಲಿಖಿತಗಳು
6. Iನೇ ಅನುಸೂಚಿಯಲ್ಲಿ ಹಲವಾರು ವಿವರಣೆಗಳಲ್ಲಿ ಒಳಗೊಳ್ಳುವಂಥ ಲಿಖಿತಗಳು
7. ಸಾಗರ ವಿಮೆಯ ಪಾಲಿಸಿಗಳು
8. 1879ರ 11ನೇ ಅಧಿನಿಯಮದ ಮೇರೆಗೆ ಸಾಲಗಳ ಮೇಲೆ ನೀಡಲಾದ ಬಂಧಪತ್ರಗಳು, ಡಿಬೆಂಚರುಗಳು ಅಥವಾ ಇತರ ಭದ್ರತೆಗಳು

8ಎ. ತೇವಣಿದಾರನು ವ್ಯವಹರಿಸಿದ ಭದ್ರತಾ ಪತ್ರಗಳು ಸ್ಟಾಂಪು ಶುಲ್ಕಕ್ಕೆ ಗುರಿಯಾಗದಿರುವುದು

9. ಶುಲ್ಕಗಳನ್ನು ಕಡಿಮೆ ಮಾಡುವ, ಮಾಫಿ ಮಾಡುವ ಅಥವಾ ಅವುಗಳ ಬಗ್ಗೆ ರಾಜೀ ಮಾಡಿಕೊಳ್ಳುವ ಅಧಿಕಾರ

**ಬಿ. ಸ್ಟಾಂಪುಗಳು ಮತ್ತು ಅವುಗಳನ್ನು ಉಪಯೋಗಿಸುವ ವಿಧಾನ**

10. ಶುಲ್ಕಗಳನ್ನು ಹೇಗೆ ಸಂದಾಯ ಮಾಡುವುದು
11. ಅಂಟಿಕೊಳ್ಳುವ ಸ್ಟಾಂಪುಗಳ ಉಪಯೋಗ

12. ಅಂಟಿಕೊಳ್ಳುವ ಸ್ಟಾಂಪುಗಳ ರದ್ದಿಯಾತಿ

13. ಮುದ್ರೆ ಹಾಕಲಾದ ಸ್ಟಾಂಪುಗಳನ್ನು ಹಚ್ಚಿದ ಲಿಖಿತಗಳನ್ನು ಹೇಗೆ ಬರೆಯುವುದು

14. ಒಂದು ಸ್ಟಾಂಪಿನ ಮೇಲೆ ಒಂದೇ ಲಿಖಿತ ಇರತಕ್ಕುದು

15. 13ನೇ ಅಥವಾ 14ನೇ ಪ್ರಕರಣಕ್ಕೆ ವಿರುದ್ಧವಾಗಿ ಬರೆದ ಲಿಖಿತವನ್ನು ಸ್ಟಾಂಪು ಹಾಕದುದೆಂದು ಭಾವಿಸುವುದು.

16. ಶುಲ್ಕವನ್ನು ಸೂಚಿಸುವುದು


### ಸಿ. ಲಿಖಿತಗಳಿಗೆ ಮುದ್ರೆಯೊತ್ತುವ ಸಮಯ

17. ಭಾರತದಲ್ಲಿ ಬರೆದುಕೊಟ್ಟ ಲಿಖಿತಗಳು

18. ಭಾರತದ ಹೊರಗೆ ಬರೆದುಕೊಟ್ಟ ಬಿಲ್ಲುಗಳು ಮತ್ತು ನೋಟುಗಳಿಗೆ ಹೊರತಾದ ಲಿಖಿತಗಳು

19. ಭಾರತದ ಹೊರಗೆ ಬರೆಯಲಾದ ಬಿಲ್ಲುಗಳು ಮತ್ತು ನೋಟುಗಳು


### ಡಿ. ಶುಲ್ಕದ ಮೌಲ್ಯ ನಿರ್ಣಯ

20. ವಿದೇಶಿ ಕರೆನ್ಸಿಗಳಲ್ಲಿ ವ್ಯಕ್ತಪಡಿಸಿದ ಮೊಬಲಗಿನ ಪರಿವರ್ತನೆ

21. ಸ್ಟಾಕು ಮತ್ತು ಮಾರಾಟ ಮಾಡಬಹುದಾದ ಭದ್ರತೆಗಳನ್ನು ಹೇಗೆ ಮೌಲ್ಯ ನಿರ್ಣಯ ಮಾಡುವುದು

22. ವಿನಿಮಯ ದರದ ಅಥವಾ ಸರಾಸರಿ ಬೆಲೆಯ ವಿವರ ಪತ್ರದ ಪರಿಣಾಮ

23. ಬಡ್ಡಿಯ ಬಗ್ಗೆ ವ್ಯವಸ್ಥೆ ಇರುವ ಲಿಖಿತಗಳು

23-ಎ. ಮಾರಾಟ ಮಾಡಬಹುದಾದ ಭದ್ರತೆಗಳ ಅಡಮಾನಗಳಿಗೆ ಸಂಬಂಧಿಸಿದ ಕೆಲವು ಲಿಖಿತಗಳಿಗೆ, ಒಪ್ಪಂದಗಳಿಗೆ ವಿಧಿಸುವಂತೆ ವಿಧಿಸುವುದು

24. ಋಣಕ್ಕೆ ಪ್ರತಿಫಲವಾಗಿ ಅಥವಾ ಮುಂದಿನ ಸಂದಾಯ ಇತ್ಯಾದಿಗಳಿಗೆ ಒಳಪಟ್ಟ ವರ್ಗಾವಣೆಗೆ ವಿಧಿಸುವ ಬಗ್ಗೆ

25. ವರ್ಷಾಶನ ಇತ್ಯಾದಿಗಳ ಸಂದರ್ಭದಲ್ಲಿ ಮೌಲ್ಯ ನಿರ್ಣಯ

26. ವಸ್ತು ವಿಷಯದ ಮೌಲ್ಯವು ಅನಿರ್ಧಾರಿತವಾಗಿರುವಲ್ಲಿ ಸ್ಟಾಂಪು

27. ಲಿಖಿತದಲ್ಲಿ ನಿರೂಪಿಸತಕ್ಕ ಶುಲ್ಕದ ಮೇಲೆ ಪರಿಣಾಮ ಬೀರುವ ಸಂಗತಿಗಳು

28. ಕೆಲವು ಹಸ್ತಾಂತರಣಗಳ ಸಂದರ್ಭದಲ್ಲಿ ಶುಲ್ಕದ ಬಗ್ಗೆ ನಿರ್ದೇಶನ


### ಇ. ಶುಲ್ಕವನ್ನು ಯಾರು ಸಂದಾಯ ಮಾಡುವುದು

29. ಶುಲ್ಕಗಳನ್ನು ಯಾರು ಸಂದಾಯ ಮಾಡುವುದು

30. ಕೆಲವು ಸಂದರ್ಭಗಳಲ್ಲಿ ರಸೀದಿಯನ್ನು ಕೊಡುವ ಹೊಣೆ

## ಅಧ್ಯಾಯ-III

### ಸ್ಟಾಂಪಿನ ಬಗ್ಗೆ ನ್ಯಾಯ ನಿರ್ಣಯ


31. ಯುಕ್ತ ಸ್ಟಾಂಪಿನ ಬಗ್ಗೆ ನ್ಯಾಯ ನಿರ್ಣಯ
32. ಕಲೆಕ್ಟರನಿಂದ ಪ್ರಮಾಣ ಪತ್ರ


## ಅಧ್ಯಾಯ-IV

### ಯುಕ್ತವಾಗಿ ಸ್ಟಾಂಪು ಹಚ್ಚಿರದ ಲಿಖಿತಗಳು


33. ಲಿಖಿತಗಳನ್ನು ಪರೀಕ್ಷಿಸುವುದು ಮತ್ತು ಸ್ವಾಧೀನಕ್ಕೆ ತೆಗೆದುಕೊಳ್ಳುವುದು
34. ಸ್ಟಾಂಪು ಹಚ್ಚಿರದ ರಸೀದಿಗಳ ಬಗ್ಗೆ ವಿಶೇಷ ಉಪಬಂಧ
35. ಯುಕ್ತವಾಗಿ ಸ್ಟಾಂಪು ಹಚ್ಚಿರದ ಲಿಖಿತಗಳು ಸಾಕ್ಷ್ಯದಲ್ಲಿ ಅಂಗೀಕಾರಯೋಗ್ಯವಲ್ಲದಿರುವುದು, ಇತ್ಯಾದಿ
36. ಲಿಖಿತದ ಅಂಗೀಕಾರವನ್ನು ಎಲ್ಲಿ ಪ್ರಶ್ನಿಸತಕ್ಕುದಲ್ಲ
37. ಅನುಚಿತವಾಗಿ ಸ್ಟಾಂಪು ಹಚ್ಚಲಾದ ಲಿಖಿತಗಳ ಅಂಗೀಕಾರ
38. ಪರಿಬದ್ಧಗೊಳಿಸಿದ ಲಿಖಿತಗಳನ್ನು ಹೇಗೆ ವ್ಯವಹರಿಸುವುದು
39. 38ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಸಂದಾಯ ಮಾಡಲಾದ ದಂಡವನ್ನು ಮರುಪಾವತಿ ಮಾಡಲು ಕಲೆಕ್ಟರನ ಅಧಿಕಾರ
40. ಸ್ವಾಧೀನಕ್ಕೆ ತೆಗೆದುಕೊಂಡ ಲಿಖಿತಗಳಿಗೆ ಸ್ಟಾಂಪು ಹಚ್ಚಲು ಕಲೆಕ್ಟರನ ಅಧಿಕಾರ
41. ಆಕಸ್ಮಿಕವಾಗಿ ಯುಕ್ತವಾಗಿ ಸ್ಟಾಂಪು ಹಚ್ಚಿರದ ಲಿಖಿತಗಳು
42. 35ನೇ, 40ನೇ ಅಥವಾ 41ನೇ ಪ್ರಕರಣದ ಮೇರೆಗೆ ಯಾವ ಲಿಖಿತಗಳಿಗೆ ಶುಲ್ಕವನ್ನು ಸಂದಾಯ ಮಾಡಲಾಗಿದೆಯೋ ಅದರ ಮೇಲೆ ಹಿಂಬರಹ
43. ಸ್ಟಾಂಪು ಕಾನೂನಿನ ವಿರುದ್ಧದ ಅಪರಾಧಕ್ಕಾಗಿ ಪ್ರಾಸಿಕ್ಯೂಷನ್
44. ಶುಲ್ಕವನ್ನು ಅಥವಾ ದಂಡವನ್ನು ಸಂದಾಯ ಮಾಡುವ ವ್ಯಕ್ತಿಗಳು ಕೆಲವು ಸಂದರ್ಭಗಳಲ್ಲಿ ಅವುಗಳನ್ನು ವಾಪಸು ಪಡೆಯುವುದು
45. ಕೆಲವು ಸಂದರ್ಭಗಳಲ್ಲಿ ದಂಡವನ್ನು ಅಥವಾ ಹೆಚ್ಚಿನ ಶುಲ್ಕವನ್ನು ಮರುಪಾವತಿ ಮಾಡಲು ರೆವಿನ್ಯೂ ಅಧಿಕಾರಿಯ ಅಧಿಕಾರ
46. 38ನೇ ಪ್ರಕರಣದ ಮೇರೆಗೆ ಕಳುಹಿಸಿದ ಲಿಖಿತಗಳ ನಷ್ಟಕ್ಕಾಗಿ ಹೊಣೆಗಾರಿಕೆ ಇಲ್ಲದಿರುವುದು
47. ಸ್ವೀಕರಿಸಲಾದ ಸ್ಟಾಂಪು ಹಚ್ಚಿರದ ಬಿಲ್ಲುಗಳು ಮತ್ತು ಪ್ರಾಮಿಸರಿ ನೋಟುಗಳಿಗೆ ಸ್ಟಾಂಪು ಹಚ್ಚಲು ಸಂದಾಯಗಾರನ ಅಧಿಕಾರ
48. ಶುಲ್ಕಗಳು ಮತ್ತು ದಂಡಗಳ ವಸೂಲಿ

## ಅಧ್ಯಾಯ -V

### ಕೆಲವು ಸಂದರ್ಭಗಳಲ್ಲಿ ಸ್ಟಾಂಪುಗಳಿಗಾಗಿ ರಿಯಾಯಿತಿಗಳು


49. ಕೆಟ್ಟು ಹೋದ ಸ್ಟಾಂಪುಗಳಿಗಾಗಿ ರಿಯಾಯಿತಿ

50. 49ನೇ ಪ್ರಕರಣದ ಮೇರೆಗೆ ಪರಿಹಾರಕ್ಕಾಗಿ ಅರ್ಜಿಯನ್ನು ಯಾವಾಗ ಸಲ್ಲಿಸುವುದು

51. ಮುದ್ರಿತ ನಮೂನೆಗಳ ಸಂದರ್ಭದಲ್ಲಿ ರಿಯಾಯಿತಿಯು ನಿಗಮಗಳಿಗೆ ಇನ್ನುಮುಂದೆ ಅಗತ್ಯವಾಗಿಲ್ಲದಿರುವುದು

52. ದುರುಪಯೋಗಪಡಿಸಲಾದ ಸ್ಟಾಂಪುಗಳಿಗಾಗಿ ರಿಯಾಯಿತಿ

53. ಕೆಟ್ಟುಹೋದ ಅಥವಾ ದುರುಪಯೋಗಪಡಿಸಲಾದ ಸ್ಟಾಂಪುಗಳಿಗಾಗಿ ರಿಯಾಯಿತಿಯನ್ನು ಹೇಗೆ ಕೊಡುವುದು.

54. ಉಪಯೋಗಿಸಲು ಅಗತ್ಯವಿಲ್ಲದ ಸ್ಟಾಂಪುಗಳಿಗಾಗಿ ರಿಯಾಯಿತಿ

54-ಎ. ಆಣೆಗಳ ವರ್ಗಗಳ ಸ್ಟಾಂಪುಗಳಿಗಾಗಿ ರಿಯಾಯಿತಿಗಳು

54-ಬಿ. ನಿರಾಶ್ರಿತ ಪರಿಹಾರ ಸ್ಟಾಂಪುಗಳಿಗಾಗಿ ರಿಯಾಯಿತಿಗಳು

55. ಕೆಲವು ಡಿಬೆಂಚರುಗಳ ನವೀಕರಣದ ಮೇಲೆ ರಿಯಾಯಿತಿ


## ಅಧ್ಯಾಯ-VI

### ಉಲ್ಲೇಖ ಮತ್ತು ಪರಿಷ್ಕರಣೆ


56. ಮುಖ್ಯ ನಿಯಂತ್ರಕ ರೆವಿನ್ಯೂ ಪ್ರಾಧಿಕಾರಿಯ ನಿಯಂತ್ರಣ ಮತ್ತು ಅವನಿಗೆ ವಿಷಯದ ನಿರೂಪಣೆ

57. ಮುಖ್ಯ ನಿಯಂತ್ರಕ ರೆವಿನ್ಯೂ ಪ್ರಾಧಿಕಾರಿಯು ಉಚ್ಚ ನ್ಯಾಯಾಲಯಕ್ಕೆ ಪ್ರಕರಣದ ವಿವರಣೆಯನ್ನು ಸಲ್ಲಿಸುವುದು

58. ನಿರೂಪಿಸಲಾದ ಪ್ರಕರಣದ ಹೆಚ್ಚಿನ ವಿವರಗಳನ್ನು ತರಿಸಿಕೊಳ್ಳಲು ಉಚ್ಚ ನ್ಯಾಯಾಲಯದ ಅಧಿಕಾರ

59. ನಿರೂಪಿಸಲಾದ ಪ್ರಕರಣದ ವಿಲೆಯ ಪ್ರಕ್ರಿಯೆ

60. ಇತರ ನ್ಯಾಯಾಲಯಗಳಿಂದ ಉಚ್ಚ ನ್ಯಾಯಾಲಯಕ್ಕೆ ಪ್ರಕರಣದ ನಿರೂಪಣೆ

61. ಸ್ಟಾಂಪುಗಳು ಸಾಕಷ್ಟಾಗಿರುವ ಬಗ್ಗೆ ನ್ಯಾಯಾಲಯಗಳ ಕೆಲವು ತೀರ್ಮಾನಗಳ ಪರಿಷ್ಕರಣೆ


## ಅಧ್ಯಾಯ-VII

### ಕ್ರಿಮಿನಲ್ ಅಪರಾಧಗಳು ಮತ್ತು ಪ್ರಕ್ರಿಯೆ


62. ಯುಕ್ತವಾಗಿ ಸ್ಟಾಂಪು ಹಚ್ಚದಿರುವ ಲಿಖಿತವನ್ನು ಬರೆದುಕೊಡುವುದು ಇತ್ಯಾದಿಗಳಿಗೆ ದಂಡ

63. ಅಂಟಿಕೊಳ್ಳುವ ಸ್ಟಾಂಪನ್ನು ರದ್ದುಗೊಳಿಸಲು ತಪ್ಪಿದ್ದಕ್ಕಾಗಿ ದಂಡ

64. 27ನೇ ಪ್ರಕರಣದ ಉಪಬಂಧಗಳನ್ನು ಪಾಲಿಸಲು ತಪ್ಪಿದ್ದಕ್ಕಾಗಿ ದಂಡ

65. ರಸೀದಿಯನ್ನು ಕೊಡಲು ನಿರಾಕರಿಸಿದ್ದಕ್ಕಾಗಿ ಮತ್ತು ರಸೀದಿಗಳ ಮೇಲಿನ ಶುಲ್ಕವನ್ನು ತಪ್ಪಿಸುವ ತಂತ್ರಗಳಿಗಾಗಿ ದಂಡ
66. ಪಾಲಿಸಿಯನ್ನು ತಯಾರಿಸದಿರುವುದಕ್ಕಾಗಿ ಅಥವಾ ಯುಕ್ತವಾಗಿ ಸ್ಟಾಂಪು ಹಚ್ಚಿರದ ಪಾಲಿಸಿಯನ್ನು ತಯಾರಿಸುವುದಕ್ಕಾಗಿ ದಂಡ
67. ಸೆಟ್ಟುಗಳಲ್ಲಿವೆಯೆಂದು ತಾತ್ಪರ್ಯವಾಗುವ ಪೂರ್ಣಸಂಖ್ಯೆಯ ಬಿಲ್ಲುಗಳನ್ನು ಅಥವಾ ಸಮುದ್ರ ವಿಮಾ ಪಾಲಿಸಿಗಳನ್ನು ಬರೆಯದಿರುವುದಕ್ಕಾಗಿ ದಂಡ
68. ಮುಂದಿನ ದಿನಾಂಕದ ಬಿಲ್ಲುಗಳಿಗಾಗಿ ಮತ್ತು ರಾಜಸ್ವವನ್ನು ವಂಚಿಸುವ ಇತರ ತಂತ್ರಗಳಿಗಾಗಿ ದಂಡ
69. ಸ್ಟಾಂಪುಗಳ ಮಾರಾಟಕ್ಕೆ ಸಂಬಂಧಿಸಿದ ನಿಯಮಗಳ ಉಲ್ಲಂಘನೆಗಾಗಿ ಮತ್ತು ಅನಧಿಕೃತ ಮಾರಾಟಕ್ಕಾಗಿ ದಂಡ
70. ಪ್ರಾಸಿಕ್ಯೂಷನನ್ನು ಹೂಡುವುದು ಮತ್ತು ನಡೆಸುವುದು
71. ಮ್ಯಾಜಿಸ್ಟ್ರೇಟರ ಅಧಿಕಾರ ವ್ಯಾಪ್ತಿ
72. ಅಧಿವಿಚಾರಣೆಯ ಸ್ಥಳ

## ಅಧ್ಯಾಯ-VIII

### ಪೂರಕ ಉಪಬಂಧಗಳು

73. ಪುಸ್ತಕಗಳು ಇತ್ಯಾದಿಗಳು ಪರಿಶೀಲನೆಗೆ ತೆರೆದಿರುವುದು
74. ಸ್ಟಾಂಪುಗಳ ಮಾರಾಟಕ್ಕೆ ಸಂಬಂಧಿಸಿ ನಿಯಮ ರಚನಾಧಿಕಾರ
75. ಈ ಅಧಿನಿಯಮವನ್ನು ಸಾಮಾನ್ಯವಾಗಿ ಕಾರ್ಯಗತಗೊಳಿಸುವ ಬಗ್ಗೆ ನಿಯಮಗಳ ರಚನಾಧಿಕಾರ
76. ನಿಯಮಗಳ ಪ್ರಕಟಣೆ
76-ಎ. ಕೆಲವು ಅಧಿಕಾರಗಳ ಪ್ರತ್ಯಾಯೋಜನೆ
77. ನ್ಯಾಯಾಲಯ ಫೀಜುಗಳಿಗೆ ಸಂಬಂಧಿಸಿದಂತೆ ಉಳಿಸುವಿಕೆ
77-ಎ. ಕೆಲವು ಸ್ಟಾಂಪುಗಳಿಗೆ ಸಂಬಂಧಿಸಿದಂತೆ ಉಳಿಸುವಿಕೆ
78. ಅಧಿನಿಯಮವನ್ನು ಭಾಷಾಂತರಿಸಿ ಸುಲಭ ಬೆಲೆಗೆ ಮಾರಾಟ ಮಾಡುವುದು
79. ನಿರಸನ

**ಅನುಸೂಚಿ -I ಲಿಖಿತಗಳ ಮೇಲಿನ ಸ್ಟಾಂಪು ಶುಲ್ಕ**

**ಅನುಸೂಚಿ - II (ನಿರಸಿತ).**

# ಭಾರತ ಸ್ಟಾಂಪು ಅಧಿನಿಯಮ, 1899

## (1899ರ ಅಧಿನಿಯಮ ಸಂಖ್ಯೆ 2 )

[27ನೇ ಜನವರಿ, 1899]

ಸ್ಟಾಂಪುಗಳಿಗೆ ಸಂಬಂಧಿಸಿದ ಕಾನೂನನ್ನು ಕ್ರೋಡೀಕರಿಸುವ ಮತ್ತು ತಿದ್ದುಪಡಿ ಮಾಡುವ ಅಧಿನಿಯಮ.

ಸ್ಟಾಂಪುಗಳಿಗೆ ಸಂಬಂಧಿಸಿದ ಕಾನೂನನ್ನು ಕ್ರೋಡೀಕರಿಸುವುದು ಮತ್ತು ತಿದ್ದುಪಡಿ ಮಾಡುವುದು ವಿಹಿತವಾಗಿರುವುದರಿಂದ; ಇದು, ಈ ಮೂಲಕ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕುದು:

### ಅಧ್ಯಾಯ –I

### ಪ್ರಾರಂಭಿಕ

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.**– (1) ಈ ಅಧಿನಿಯಮವನ್ನು ಭಾರತ ಸ್ಟಾಂಪು ಅಧಿನಿಯಮ, 1899 ಎಂದು ಕರೆಯತಕ್ಕುದು.

(2) ಇದು, ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ:

ಪರಂತು, ಈ ಅಧಿನಿಯಮದ ಉಪಬಂಧಗಳು ಸಂವಿಧಾನದ ಏಳನೆಯ ಅನುಸೂಚಿಯ 1ನೆಯ ಪಟ್ಟಿಯಲ್ಲಿನ 91ನೆಯ ನಮೂದಿನಲ್ಲಿ ನಿರ್ದಿಷ್ಟಪಡಿಸಲಾದ ದಸ್ತಾವೇಜುಗಳ ಸಂಬಂಧವಾದ ಸ್ಟಾಂಪು ಶುಲ್ಕದ ದರಗಳಿಗೆ ಸಂಬಂಧಪಡುವಷ್ಟರ ಮಟ್ಟಿಗೆ ಹೊರತುಪಡಿಸಿ, ಈ ಅಧಿನಿಯಮವು, 1956ರ ನವೆಂಬರ್ ಒಂದಕ್ಕೆ ನಿಕಟಪೂರ್ವದಲ್ಲಿ (ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ) 'ಬಿ' ಭಾಗದ ರಾಜ್ಯಗಳಲ್ಲಿ ಒಳಗೊಂಡಿದ್ದಂಥ ರಾಜ್ಯ ಕ್ಷೇತ್ರಗಳಿಗೆ ಅನ್ವಯವಾಗತಕ್ಕುದಲ್ಲ.

(3) ಇದು, 1899ರ ಜುಲೈ ಮೊದಲನೇ ದಿನದಂದು ಜಾರಿಗೆ ಬರತಕ್ಕುದು.

**2. ಪರಿಭಾಷೆಗಳು.**– ಈ ಅಧಿನಿಯಮದಲ್ಲಿ, ವಿಷಯದಲ್ಲಿ ಅಥವಾ ಸಂದರ್ಭದಲ್ಲಿ ವಿರುದ್ಧವಾದುದು ಏನಾದರೂ ಇದ್ದ ಹೊರತು,–

(1) "ಬ್ಯಾಂಕರ್" ಎಂಬುದರಲ್ಲಿ ಒಂದು ಬ್ಯಾಂಕ್ ಮತ್ತು ಬ್ಯಾಂಕರನಾಗಿ ಕಾರ್ಯನಿರ್ವಹಿಸುವ ಯಾವನೇ ವ್ಯಕ್ತಿಯು ಒಳಗೊಳ್ಳುತ್ತಾನೆ;

(2) "ವಿನಿಮಯ ಪತ್ರ" ಎಂದರೆ ವರ್ಗಾವಣೀಯ ಲಿಖಿತಗಳ ಅಧಿನಿಯಮ, 1881 (1881ರ 26)ರಲ್ಲಿ ಪರಿಭಾಷಿಸಿದಂಥ ಒಂದು ವಿನಿಮಯ ಪತ್ರ, ಮತ್ತು ಇದರಲ್ಲಿ ಹುಂಡಿಯೂ ಸಹ ಒಳಗೊಳ್ಳುತ್ತದೆ, ಮತ್ತು ಯಾವನೇ ವ್ಯಕ್ತಿಯ ಹೆಸರನ್ನು ಒಳಗೊಂಡಿರುವ ಅಥವಾ ಇಲ್ಲದಿರುವ ದಸ್ತಾವೇಜಿನ ಮೂಲಕ ಆ ಯಾವನೇ ವ್ಯಕ್ತಿಗೆ ಯಾವನೇ ಇತರ ವ್ಯಕ್ತಿಯಿಂದ ಹಣದ ಯಾವುದೇ ಮೊತ್ತದ ಸಂದಾಯಕ್ಕೆ ಅಥವಾ ಹಣದ ಯಾವುದೇ ಮೊತ್ತವನ್ನು ಯಾವನೇ ಇತರ ವ್ಯಕ್ತಿಯ

ಹೆಸರಿಗೆ ಬರೆಯುವುದಕ್ಕೆ ಹಕ್ಕುದಾರನನ್ನಾಗಿ ಮಾಡುವ ಅಥವಾ ಹಕ್ಕುದಾರನನ್ನಾಗಿ ಮಾಡುವುದೆಂದು ತಾತ್ಪರ್ಯವಾಗುವ ಆ ಯಾವುದೇ ಇತರ ದಸ್ತಾವೇಜು ಒಳಗೊಳ್ಳುತ್ತದೆ;

(3) "ತಗಾದೆ ಮಾಡಿದಾಗ ಸಂದಾಯ ಮಾಡಲಾಗುವ ವಿನಿಮಯ ಪತ್ರ" –ಇದರಲ್ಲಿ –

(ಎ) ವಿನಿಮಯ ಪತ್ರದ ಅಥವಾ ಪ್ರಾಮಿಸರಿ ನೋಟಿನ ಮೂಲಕ ಹಣದ ಯಾವುದೇ ಮೊತ್ತವನ್ನು ಸಂದಾಯ ಮಾಡುವುದಕ್ಕಾಗಿ, ಅಥವಾ ಹಣದ ಯಾವುದೇ ಮೊತ್ತದ ತೀರಿಕೆಯಾದಾಗ ಯಾವುದೇ ವಿನಿಮಯ ಪತ್ರವನ್ನು ಅಥವಾ ಪ್ರಾಮಿಸರಿ ನೋಟನ್ನು ಒಪ್ಪಿಸಿಬಿಡುವುದಕ್ಕಾಗಿ, ಅಥವಾ ಲಭ್ಯವಿರುವ ಅಥವಾ ಲಭ್ಯವಿಲ್ಲದಿರುವ ಯಾವುದೇ ನಿರ್ದಿಷ್ಟ ನಿಧಿಯಿಂದ, ಅಥವಾ ಪಾಲಿಸುವ ಅಥವಾ ಪಾಲಿಸದಿರುವ ಯಾವುದೇ ಷರತ್ತಿನ ಮೇಲೆ ಅಥವಾ ಸಂಭವಿಸುವ ಅಥವಾ ಸಂಭವಿಸದಿರುವ ಆಕಸ್ಮಿಕ ಸಂದರ್ಭದಲ್ಲಿ ಹಣದ ಯಾವುದೇ ಮೊತ್ತದ ಸಂದಾಯಕ್ಕೆ ಆದೇಶ;

(ಬಿ) ಸಾಪ್ತಾಹಿಕ, ಮಾಸಿಕ ಅಥವಾ ಯಾವುದೇ ಇತರ ತಿಳಿಸಿದ ಅವಧಿಯಲ್ಲಿ ಹಣದ ಯಾವುದೇ ಮೊತ್ತದ ಸಂದಾಯಕ್ಕೆ ಆದೇಶ; ಮತ್ತು

(ಸಿ) ಸಾಲ ಪತ್ರವನ್ನು ಯಾರ ಹೆಸರಿನಲ್ಲಿ ಬರೆಯಲಾಗಿದೆಯೋ ಅಂಥ ವ್ಯಕ್ತಿಗೆ ಸಾಲಕೊಡಲು ಒಬ್ಬ ವ್ಯಕ್ತಿಯು ಮತ್ತೊಬ್ಬ ವ್ಯಕ್ತಿಯನ್ನು ಅಧಿಕೃತಗೊಳಿಸುವಂಥ ಯಾವುದೇ ಲಿಖಿತ

– ಇವುಗಳು ಒಳಗೊಳ್ಳುತ್ತವೆ.

(4) "ವಹನ ಪತ್ರ" ಎಂಬುದರಲ್ಲಿ "ನೇರ ವಹನ ಪತ್ರ" ವೂ ಒಳಗೊಳ್ಳುತ್ತದೆ, ಆದರೆ ಮೇಟನ ರಸೀದಿಯು ಒಳಗೊಳ್ಳುವುದಿಲ್ಲ;

(5) "ಬಂಧಪತ್ರವು",–

(ಎ) ಸಂದರ್ಭಾನುಸಾರ ಒಂದು ನಿರ್ದಿಷ್ಟ ಕಾರ್ಯವನ್ನು ನೆರವೇರಿಸಿದರೆ ಅಥವಾ ನೆರವೇರಿಸದಿದ್ದರೆ ಬಾಧ್ಯತೆಯು ಇಲ್ಲವಾಗತಕ್ಕುದೆಂಬ ಷರತ್ತಿನ ಮೇಲೆ, ಒಬ್ಬ ವ್ಯಕ್ತಿಯು ಯಾವ ಲಿಖಿತದ ಮೂಲಕ ಇನ್ನೊಬ್ಬ ವ್ಯಕ್ತಿಗೆ ಹಣ ಸಂದಾಯ ಮಾಡುವ ಬಾಧ್ಯತೆಗೆ ತನ್ನನ್ನು ಗುರಿಪಡಿಸಿಕೊಳ್ಳುವನೋ ಆ ಯಾವುದೇ ಲಿಖಿತ;

(ಬಿ) ಸಾಕ್ಷಿದಾರನಿಂದ ದೃಢೀಕರಿಸಲ್ಪಟ್ಟ ಮತ್ತು ಆದೇಶದ ಮೇಲೆ ಅಥವಾ ಧಾರಕನಿಗೆ ಸಂದಾಯವಾಗತಕ್ಕುದಲ್ಲದ ಯಾವ ಲಿಖಿತದ ಮೂಲಕ ಒಬ್ಬ ವ್ಯಕ್ತಿಯು ಇನ್ನೊಬ್ಬ ವ್ಯಕ್ತಿಗೆ ಹಣ ಸಂದಾಯ ಮಾಡುವ ಬಾಧ್ಯತೆಗೆ ತನ್ನನ್ನು ಗುರಿಪಡಿಸಿಕೊಳ್ಳುವನೋ ಆ ಯಾವುದೇ ಲಿಖಿತ; ಮತ್ತು

(ಸಿ) ಹಾಗೆ ಧೃಢೀಕರಿಸಲ್ಪಟ್ಟ ಯಾವ ಲಿಖಿತದ ಮೂಲಕ ಒಬ್ಬ ವ್ಯಕ್ತಿಯು ಇನ್ನೊಬ್ಬ ವ್ಯಕ್ತಿಗೆ ಧಾನ್ಯವನ್ನು ಅಥವಾ ಇತರ ಕೃಷಿ ಉತ್ಪನ್ನವನ್ನು ಒಪ್ಪಿಸಿಕೊಡುವ ಬಾಧ್ಯತೆಗೆ ತನ್ನನ್ನು ಗುರಿಪಡಿಸಿಕೊಳ್ಳುವನೋ ಆ ಯಾವುದೇ ಲಿಖಿತ

– ಇವುಗಳನ್ನು ಒಳಗೊಳ್ಳುತ್ತದೆ.

(6) "ವಿಧಿಸಬಹುದಾದ" ಎಂದರೆ, ಬರೆದುಕೊಟ್ಟಂಥ ಅಥವಾ ಈ ಅಧಿನಿಯಮದ ಪ್ರಾರಂಭದ ತರುವಾಯ ಮೊದಲು ಬರೆದು ಕೊಟ್ಟ ಲಿಖಿತಕ್ಕೆ ಅನ್ವಯವಾಗುವಂತೆ, ಈ ಅಧಿನಿಯಮದ ಮೇರೆಗೆ ವಿಧಿಸತಕ್ಕ ಎಂದು, ಮತ್ತು ಯಾವುದೇ ಇತರ ಲಿಖಿತಕ್ಕೆ ಅನ್ವಯವಾಗುವಂತೆ, ಅಂಥ ಲಿಖಿತವನ್ನು ಬರೆದುಕೊಟ್ಟಾಗ ಅಥವಾ ಹಲವಾರು ವ್ಯಕ್ತಿಗಳು ಬೇರೆ ಬೇರೆ ಸಮಯಗಳಲ್ಲಿ ಬರೆದುಕೊಟ್ಟಿರುವಲ್ಲಿ ಮೊದಲು ಬರೆದುಕೊಟ್ಟಾಗ, ಭಾರತದಲ್ಲಿ ಜಾರಿಯಲ್ಲಿರುವ ಕಾನೂನಿನ ಮೇರೆಗೆ ವಿಧಿಸತಕ್ಕ ಎಂದು ಅರ್ಥ;

(7) "ಚೆಕ್" ಎಂದರೆ, ನಿರ್ದಿಷ್ಟ ಬ್ಯಾಂಕರನ ಹೆಸರಿಗೆ ಬರೆದ ಮತ್ತು ತಗಾದೆಯ ಮೇಲಲ್ಲದೆ ಅನ್ಯಥಾ ಸಂದಾಯವಾಗತಕ್ಕುದೆಂದು ವ್ಯಕ್ತಪಡಿಸಿಲ್ಲದ ವಿನಿಮಯ ಪತ್ರ;

(8) ಂ ಂ ಂ ಂ ಂ ಂ ಂ

(9) "ಕಲೆಕ್ಟರ್" –

(ಎ) ಎಂದರೆ, ಕಲ್ಕತ್ತ, ಮದರಾಸು ಮತ್ತು ಮುಂಬಯಿ ಪಟ್ಟಣಗಳ ಪರಿಮಿತಿಗಳೊಳಗೆ ಅನುಕ್ರಮವಾಗಿ ಕಲ್ಕತ್ತ, ಮದರಾಸು, ಮತ್ತು ಮುಂಬಯಿಯ ಕಲೆಕ್ಟರ್ ಮತ್ತು ಆ ಪರಿಮಿತಿಗಳ ಹೊರಗೆ, ಜಿಲ್ಲೆಯ ಕಲೆಕ್ಟರ್, ಮತ್ತು ಇದರಲ್ಲಿ –

(ಬಿ) ಡೆಪ್ಯುಟಿ ಕಮಿಷನರು ಮತ್ತು ರಾಜ್ಯ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಬಗ್ಗೆ ನೇಮಿಸಬಹುದಾದ ಯಾವನೇ ಅಧಿಕಾರಿಯೂ ಒಳಗೊಳ್ಳುತ್ತಾನೆ.

(10) "ಹಸ್ತಾಂತರಣ" ಇದು, ಮಾರಾಟದ ಮೇಲಣ ಹಸ್ತಾಂತರಣವನ್ನು ಮತ್ತು ಯಾವ ಲಿಖಿತದಿಂದ ವ್ಯಕ್ತಿಗಳ ನಡುವೆ ಚರಾಸ್ತಿಯನ್ನಾಗಲೀ ಅಥವಾ ಸ್ಥಿರಾಸ್ತಿಯನ್ನಾಗಲೀ ವರ್ಗಾಯಿಸಲಾಗುವುದೋ ಮತ್ತು ಯಾವುದರ ಬಗ್ಗೆ Iನೇ ಅನುಸೂಚಿಯು ಅನ್ಯಥಾ ನಿರ್ದಿಷ್ಟವಾಗಿ ಉಪಬಂಧಿಸಿಲ್ಲವೋ ಅಂಥ ಪ್ರತಿಯೊಂದು ಲಿಖಿತವನ್ನು ಒಳಗೊಳ್ಳುತ್ತದೆ;

(11) ಒಂದು ಲಿಖಿತಕ್ಕೆ ಅನ್ವಯವಾಗುವಂತೆ, "ಸರಿಯಾದ ಸ್ಟಾಂಪು ಹಾಕಲಾದುದು" ಎಂದರೆ ಆ ಲಿಖಿತವು, ಯುಕ್ತ ಮೊಬಲಗಿಗೆ ಕಡಿಮೆಯಿಲ್ಲದಷ್ಟು ಅಂಟಿಸಲಾದ ಅಥವಾ ಮುದ್ರೆ ಒತ್ತಿದ ಸ್ಟಾಂಪನ್ನು ಹೊಂದಿರುವುದೆಂದು ಮತ್ತು ಅಂಥ ಸ್ಟಾಂಪನ್ನು ಭಾರತದಲ್ಲಿ ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನಿಗನುಸಾರ ಅಂಟಿಸಲಾಗಿದೆ ಎಂದು ಅಥವಾ ಬಳಸಲಾಗಿದೆ ಎಂದು ಅರ್ಥ;

(12) ಲಿಖಿತಗಳಿಗೆ ಸಂಬಂಧಿಸಿದಂತೆ ಬಳಸಿದ "ಬರೆದುಕೊಟ್ಟ" ಮತ್ತು "ಬರೆದುಕೊಡುವುದು" ಎಂದರೆ "ಸಹಿಮಾಡಿದ" ಮತ್ತು "ಸಹಿ ಮಾಡುವುದು" ಎಂದು ಅರ್ಥ;

ಂ ಂ ಂ ಂ

(13) "ಮುದ್ರೆಒತ್ತಿದ ಸ್ಟಾಂಪು" – ಇದರಲ್ಲಿ,-

(ಎ) ಸೂಕ್ತ ಅಧಿಕಾರಿಯು ಅಂಟಿಸಿದ ಮತ್ತು ಮುದ್ರೆಒತ್ತಿದ ಗುರುತು ಚಿಹ್ನೆಗಳು, ಮತ್ತು

(ಬಿ) ಛಾಪಾ ಕಾಗದದ ಮೇಲೆ ಉಬ್ಬಚ್ಚು ಮಾಡಿದ ಅಥವಾ ಕೆತ್ತಿದ ಸ್ಟಾಂಪುಗಳು

– ಇವುಗಳು ಒಳಗೊಳ್ಳುತ್ತವೆ.

(13ಎ) "ಭಾರತ" ಎಂದರೆ, ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ ಭಾರತದ ರಾಜ್ಯಕ್ಷೇತ್ರ;

(14) "ಲಿಖಿತ"ವು, ಯಾವ ದಸ್ತಾವೇಜಿನ ಮೂಲಕ ಯಾವುದೇ ಹಕ್ಕನ್ನು ಅಥವಾ ಹೊಣೆಗಾರಿಕೆಯನ್ನು ಸೃಜಿಸಲಾಗುವುದೋ, ವರ್ಗಾಯಿಸಲಾಗುವುದೋ, ಪರಿಮಿತಿಗೊಳಿಸಲಾಗುವುದೋ, ವಿಸ್ತರಿಸಲಾಗುವುದೋ, ಅಂತ್ಯಗೊಳಿಸಲಾಗುವುದೋ ಅಥವಾ ದಾಖಲು ಮಾಡಲಾಗುವುದೋ ಅಥವಾ ಹಾಗೆಂದು ತಾತ್ಪರ್ಯವಾಗುವುದೋ ಅಂಥ ಪ್ರತಿಯೊಂದು ದಸ್ತಾವೇಜನ್ನು ಒಳಗೊಳ್ಳುತ್ತದೆ;

(15) "ವಿಭಜನೆ ಲಿಖಿತ" ಎಂದರೆ, ಯಾವ ಲಿಖಿತದ ಮೂಲಕ ಯಾವುದೇ ಸ್ವತ್ತಿನ ಸಹ ಒಡೆಯರು ಪ್ರತ್ಯೇಕವಾಗಿ ಅಂಥ ಸ್ವತ್ತನ್ನು ವಿಭಜಿಸುವರೋ ಅಥವಾ ವಿಭಜಿಸಲು ಒಪ್ಪಿಕೊಳ್ಳುವರೋ ಅಂಥ ಯಾವುದೇ ಲಿಖಿತ, ಮತ್ತು ಇದರಲ್ಲಿ ಯಾವನೇ ರೆವಿನ್ಯೂ ಅಧಿಕಾರಿಯು ಅಥವಾ

ಯಾವುದೇ ಸಿವಿಲ್ ನ್ಯಾಯಾಲಯವು ವಿಭಜನೆಯನ್ನು ಜಾರಿಗೊಳಿಸಲು ಪಾಸು ಮಾಡಿದ ಅಂತಿಮ ಆದೇಶ ಮತ್ತು ವಿಭಜನೆಯನ್ನು ನಿರ್ದೇಶಿಸುವ ಮಧ್ಯಸ್ಥಗಾರನ ಐತೀರ್ಪು ಸಹ ಒಳಗೊಳ್ಳುತ್ತದೆ;

(16) "ಗುತ್ತಿಗೆ" ಎಂದರೆ, ಸ್ಥಿರ ಸ್ವತ್ತಿನ ಗುತ್ತಿಗೆ, ಮತ್ತು –

(ಎ) ಪಟ್ಟ;

(ಬಿ) ಗುತ್ತಿಗೆಯ ಸಮಾನ ಸ್ವರೂಪದ್ದಾಗಿರದ ಸ್ಥಿರ ಸ್ವತ್ತನ್ನು ಸಾಗುವಳಿ ಮಾಡಲು, ಅಧಿಭೋಗಿಸಲು, ಅಥವಾ ಅದಕ್ಕೆ ಗೇಣಿಯನ್ನು ಸಂದಾಯ ಮಾಡುವ ಅಥವಾ ಒಪ್ಪಿಸಿಕೊಡುವ ಬಗ್ಗೆ ಲಿಖಿತದಲ್ಲಿನ ಕಬೂಲಿಯತ್ ಅಥವಾ ಇತರ ಲಿಖಿತ ವಾಗ್ದಾನ;

(ಸಿ) ಯಾವುದೇ ರೀತಿಯ ಸುಂಕವನ್ನು ಗುತ್ತಿಗೆಗೆ ಕೊಡುವ ಯಾವುದೇ ಲಿಖಿತ;

(ಡಿ) ಗುತ್ತಿಗೆಗೆ ಕೋರಿದ ಯಾವುದೇ ಅರ್ಜಿಯ ಮೇಲೆ, ಆ ಅರ್ಜಿಯನ್ನು ಮಂಜೂರು ಮಾಡಲಾಗಿದೆಯೆಂದು ಸೂಚಿಸಬಯಸುವ ಯಾವುದೇ ಬರವಣಿಗೆ;

(16ಎ) "ಮಾರಾಟಮಾಡಬಹುದಾದ ಭದ್ರತೆ" ಎಂದರೆ ಭಾರತದಲ್ಲಿ ಅಥವಾ ಯುನೈಟೆಡ್ ಕಿಂಗ್‌ಡಮ್ಮಿನ ಯಾವುದೇ ಸ್ಟಾಕ್ ಮಾರ್ಕೆಟ್ಟಿನಲ್ಲಿ ಮಾರಾಟ ಮಾಡಬಹುದಾದಂಥ ಪ್ರಕಾರದ ಭದ್ರತೆ;

(17) "ಅಡಮಾನ ಪತ್ರ", ಇದು ಯಾವ ಲಿಖಿತದ ಮೂಲಕ, ಸಾಲದ ರೂಪದಲ್ಲಿ ಕೊಟ್ಟ ಅಥವಾ ಕೊಡಲಿರುವ ಹಣವನ್ನು ಅಥವಾ ಪ್ರಸ್ತುತ ಅಥವಾ ಮುಂದಿನ ಋಣವನ್ನು ಅಥವಾ ವಾಗ್ದಾನದ ಪಾಲನೆಯನ್ನು ಸುನಿಶ್ಚಿತಗೊಳಿಸುವ ಉದ್ದೇಶಕ್ಕಾಗಿ ನಿರ್ದಿಷ್ಟಪಡಿಸಿದ ಸ್ವತ್ತಿನ ಮೇಲಣ ಅಥವಾ ಅದಕ್ಕೆ ಸಂಬಂಧಿಸಿದ ಹಕ್ಕನ್ನು ಒಬ್ಬ ವ್ಯಕ್ತಿಯು ಇನ್ನೊಬ್ಬ ವ್ಯಕ್ತಿಗೆ ಅಥವಾ ಅವನ ಹೆಸರಿಗೆ ವರ್ಗಾವಣೆ ಮಾಡುವನೋ ಅಥವಾ ಸೃಜಿಸುವನೋ ಆ ಪ್ರತಿಯೊಂದು ಲಿಖಿತವನ್ನು ಒಳಗೊಳ್ಳುತ್ತದೆ;

(18) "ಕಾಗದ" ಇದು, ಚರ್ಮಪತ್ರವನ್ನು, ಚರ್ಮ ಕಾಗದವನ್ನು ಅಥವಾ ಲಿಖಿತವನ್ನು ಬರೆಯಬಹುದಾದಂಥ ಯಾವುದೇ ಇತರ ಸಾಮಗ್ರಿಗಳನ್ನು ಒಳಗೊಳ್ಳುತ್ತದೆ;

(19) "ವಿಮಾ ಪಾಲಿಸಿ" ಇದು, –

(ಎ) ಯಾವ ಲಿಖಿತದ ಮೂಲಕ ಒಬ್ಬ ವ್ಯಕ್ತಿಯು, ವಿಮಾ ಕಂತಿಗೆ ಪ್ರತಿಫಲವಾಗಿ ಅಜ್ಞಾತ ಅಥವಾ ಆಕಸ್ಮಿಕ ಘಟನೆಯಿಂದ ಉಂಟಾಗುವ ನಷ್ಟಕ್ಕೆ, ಹಾನಿಗೆ ಅಥವಾ ಹೊಣೆಗಾರಿಕೆಗೆ ಸಂಬಂಧಿಸಿದಂತೆ ಇನ್ನೊಬ್ಬ ವ್ಯಕ್ತಿಗೆ ನಷ್ಟಭರ್ತಿ ಮಾಡಿಕೊಡಲು ವಚನಬದ್ಧನಾಗುವನೋ ಆ ಯಾವುದೇ ಲಿಖಿತ;

(ಬಿ) ಜೀವ ವಿಮಾ ಪಾಲಿಸಿ, ಮತ್ತು ಅಪಘಾತ ಅಥವಾ ಖಾಯಿಲೆ ವಿರುದ್ಧ ಯಾವನೇ ವ್ಯಕ್ತಿಗೆ ವಿಮೆ ಒದಗಿಸುವ ಪಾಲಿಸಿ ಮತ್ತು ಇತರ ಯಾವುದೇ ವೈಯಕ್ತಿಕ ವಿಮೆ

– ಇವುಗಳನ್ನು ಒಳಗೊಳ್ಳುತ್ತದೆ;

(19ಎ) "ಸಾಮೂಹಿಕ ವಿಮಾ ಪಾಲಿಸಿ" ಎಂದರೆ, ಕೇಂದ್ರ ಸರ್ಕಾರವು, ಸಾಮಾನ್ಯವಾಗಿ ಅಥವಾ ಯಾವುದೇ ನಿರ್ದಿಷ್ಟ ಸಂದರ್ಭಕ್ಕೆ ಸಂಬಂಧಿಸಿ ಅನುಮೋದಿಸಬಹುದಾದಂತೆ ಐವತ್ತಕ್ಕಿಂತ ಕಡಿಮೆಯಿಲ್ಲದ ಅಥವಾ ಅದಕ್ಕಿಂತ ಕಡಿಮೆ ಸಂಖ್ಯೆಯನ್ನು ಒಳಗೊಳ್ಳುವ ಯಾವ ಲಿಖಿತದ ಮೂಲಕ ವಿಮಾಕರ್ತನು, ನಿಯೋಜಕನು ಅಥವಾ ನಿಯೋಜಕನು ಮತ್ತು ಅವನ ನೌಕರರು ಜಂಟಿಯಾಗಿ ಸಂದಾಯಮಾಡಿದ ವಿಮಾಕಂತಿಗೆ ಪ್ರತಿಫಲವಾಗಿ ವೈದ್ಯಕೀಯ ಪರೀಕ್ಷೆಯೊಂದಿಗೆ ಅಥವಾ ಅದಿಲ್ಲದೆ ಮತ್ತು ನಿಯೋಜಕನನ್ನು ಹೊರತುಪಡಿಸಿ ಕೇವಲ ಇತರ ವ್ಯಕ್ತಿಗಳ

ಪ್ರಯೋಜನಕ್ಕಾಗಿ ನಿಯೋಜನೆಗೆ ಸಂಬಂಧಿಸಿದ ಪರಿಸ್ಥಿತಿಗಳಿಂದ ನಿರ್ಧರಿತವಾದಂತೆ ಎಲ್ಲ ನೌಕರರ ಅಥವಾ ಅವರಲ್ಲಿ ಯಾವುದೇ ವರ್ಗದವರ ಜೀವಗಳನ್ನು, ವೈಯಕ್ತಿಕ ಆಯ್ಕೆಯನ್ನು ವರ್ಜಿಸುವಂಥ ಯೋಜನೆಯನ್ನು ಆಧರಿಸಿದ ವಿಮಾ ಮೊಬಲಗುಗಳ ವಿಮಾ ರಕ್ಷಣೆ ಒದಗಿಸಲು ವಚನಬದ್ಧನಾಗುವನೋ ಆ ಯಾವುದೇ ಲಿಖಿತ;

(20) "ಸಾಗರ ವಿಮಾ ಪಾಲಿಸಿ" ಅಥವಾ "ಸಾಗರ ಪಾಲಿಸಿ" ಎಂದರೆ –

(ಎ) ಯಾವುದೇ ಹಡಗಿನ ಅಥವಾ ನೌಕೆಯ (ಸಾಗರ ಅಥವಾ ಒಳನಾಡು ನೌಕಾಯಾನಕ್ಕಾಗಿರಲಿ) ಮೇಲೆ ಅಥವಾ ಯಾವುದೇ ಹಡಗಿನ ಅಥವಾ ನೌಕೆಯ ಯಂತ್ರೋಪಕರಣಗಳು, ಎತ್ತಿಗೆ ಅಥವಾ ಪೀಠೋಪಕರಣಗಳ ಮೇಲೆ ಅಥವಾ ಯಾವುದೇ ಹಡಗಿನ ಅಥವಾ ನೌಕೆಯ ಮೇಲಿನ ಯಾವುವೇ ಸರಕುಗಳ, ವಾಣಿಜ್ಯ ಸರಕುಗಳ ಅಥವಾ ಯಾವುದೇ ಬಗೆಯ ಸ್ವತ್ತಿನ ಮೇಲೆ, ಅಥವಾ ಯಾವುದೇ ಹಡಗಿನ ಅಥವಾ ನೌಕೆಯ ಸಾಗಣೆ ಬಾಡಿಗೆಯ ಮೇಲೆ, ಅಥವಾ ಯಾವುದೇ ಹಡಗಿನಲ್ಲಿನ ಅಥವಾ ನೌಕೆಯಲ್ಲಿನ ಅಥವಾ ಅದಕ್ಕೆ ಸಂಬಂಧಿಸಿ ಕಾನೂನುಬದ್ಧವಾಗಿ ವಿಮೆ ಮಾಡಬಹುದಾದ ಯಾವುದೇ ಇತರ ಹಿತಾಸಕ್ತಿಯ ಮೇಲೆ ಮಾಡಲಾದ ಯಾವುದೇ ವಿಮೆ; ಮತ್ತು

(ಬಿ) ಇದು ಸಾಗಣೆಯ ಯಾವುವೇ ಸರಕುಗಳ, ವಾಣಿಜ್ಯ ಸರಕುಗಳ ಅಥವಾ ಸ್ವತ್ತಿನ ಯಾವುದೇ ವಿಮೆಯನ್ನು ಒಳಗೊಳ್ಳುತ್ತದೆ ಮತ್ತು ಅಂಥ ವಿಮೆಯು (ಎ) ಖಂಡದ ಅರ್ಥವ್ಯಾಪ್ತಿಯಲ್ಲಿನ ಸಾಗರ ಅಪಾಯವಷ್ಟೇ ಅಲ್ಲದೆ ಸಾಗಣೆಯ ಪ್ರಾರಂಭದಿಂದ ಅದರ ಅಂತಿಮ ನೆಲೆಯವರೆಗೆ ವಿಮೆ ಒದಗಿಸಲಾದ ಸಾಗಣೆಗೆ ಆನುಷಂಗಿಕವಾದ ಯಾವುದೇ ಇತರ ಅಪಾಯವನ್ನು ಒಳಗೊಳ್ಳುತ್ತದೆ;

ಯಾವನೇ ವ್ಯಕ್ತಿಯು, ಹೆಚ್ಚಿನ ಸಾಗಣೆ ಬಾಡಿಗೆಗೆ ಅಥವಾ ಅನ್ಯಥಾ ಸಂದಾಯಮಾಡಿದ ಅಥವಾ ಸಂದಾಯ ಮಾಡಬಹುದಾದ ಹಣದ ಯಾವುದೇ ಮೊತ್ತಕ್ಕೆ ಪ್ರತಿಫಲವಾಗಿ, ಯಾವುದೇ ಹಡಗಿನ ಅಥವಾ ನೌಕೆಯ ಮೇಲೆ ಇರುವಾಗ ಸರಕುಗಳಿಗೆ, ವಾಣಿಜ್ಯ ಸರಕುಗಳಿಗೆ ಅಥವಾ ಯಾವುದೇ ಬಗೆಯ ಸ್ವತ್ತುಗಳಿಗೆ ಉಂಟಾಗುವ ಯಾವುದೇ ರೀತಿಯ ಅಪಾಯಕ್ಕೆ ಸಂಬಂಧಿಸಿದ ಹೊಣೆ ವಹಿಸಿಕೊಳ್ಳಲು ಒಪ್ಪಿಕೊಳ್ಳುವಲ್ಲಿ ಅಥವಾ ಯಾವುದೇ ಅಂಥ ಸರಕುಗಳಿಗೆ, ವಾಣಿಜ್ಯ ಸರಕುಗಳಿಗೆ ಅಥವಾ ಸ್ವತ್ತುಗಳಿಗೆ ಸಂಬಂಧಿಸಿದ ಯಾವುದೇ ಅಪಾಯದ, ನಷ್ಟದ ಅಥವಾ ಹಾನಿಯ ನಿಮಿತ್ತ ಒಡೆಯನಿಗೆ ನಷ್ಟ ಭರ್ತಿ ಮಾಡಿಕೊಡಲು ವಚನ ಬದ್ಧನಾಗುವಲ್ಲಿ, ಅಂಥ ಒಪ್ಪಂದವನ್ನು ಅಥವಾ ವಾಗ್ದಾನವನ್ನು ಸಾಗರ ವಿಮೆಯ ಕರಾರು ಎಂದು ಭಾವಿಸತಕ್ಕದ್ದು;

(21) "ಪವರ್ ಆಫ್ ಅಟಾರ್ನಿ"ಯು, ಯಾವುದೇ ಲಿಖಿತವನ್ನು ಬರೆದುಕೊಡುವ ವ್ಯಕ್ತಿಯ ಪರವಾಗಿ ಮತ್ತು ಅವನ ಹೆಸರಿನಲ್ಲಿ ಕಾರ್ಯನಿರ್ವಹಿಸಲು ನಿರ್ದಿಷ್ಟ ವ್ಯಕ್ತಿಗೆ ಅಧಿಕಾರ ನೀಡುವಂಥ (ತತ್ಕಾಲದಲ್ಲಿ ಜಾರಿಯಲ್ಲಿರುವ ನ್ಯಾಯಾಲಯ ಫೀಜಿಗೆ ಸಂಬಂಧಿಸಿದ ಕಾನೂನಿನ ಮೇರೆಗೆ ಫೀಜನ್ನು ವಿಧಿಸತಕ್ಕುದಲ್ಲದ) ಯಾವುದೇ ಲಿಖಿತವನ್ನು ಒಳಗೊಳ್ಳುತ್ತದೆ;

(22) "ಪ್ರಾಮಿಸರಿ ನೋಟ್" ಎಂದರೆ, ವರ್ಗಾವಣೀಯ ಲಿಖಿತಗಳ ಅಧಿನಿಯಮ, 1881ರಲ್ಲಿ (1881ರ 26) ಪರಿಭಾಷಿಸಿದಂತಿರುವ ಪ್ರಾಮಿಸರಿ ನೋಟ್;

ಇದು, ಲಭ್ಯವಿರುವ ಅಥವಾ ಲಭ್ಯವಿಲ್ಲದಿರುವ ಯಾವುದೇ ನಿರ್ದಿಷ್ಟ ನಿಧಿಯಿಂದ ಅಥವಾ ಪಾಲಿಸುವ ಅಥವಾ ಪಾಲಿಸದಿರುವ ಯಾವುದೇ ಷರತ್ತಿನ ಮೇಲೆ ಅಥವಾ ಸಂಭವಿಸುವ ಅಥವಾ ಸಂಭವಿಸದಿರುವ ಆಕಸ್ಮಿಕ ಸಂದರ್ಭದಲ್ಲಿ ಹಣದ ಯಾವುದೇ ಮೊತ್ತವನ್ನು ಸಂದಾಯಮಾಡಲು ವಾಗ್ದಾನ ಮಾಡುವ ಪತ್ರವನ್ನು ಸಹ ಒಳಗೊಳ್ಳುತ್ತದೆ;

(23) "ರಸೀದಿ" ಎಂಬುದರಲ್ಲಿ ಯಾವ ಪತ್ರದ ಜ್ಞಾಪನದ ಅಥವಾ ಬರವಣಿಗೆಯ ಮೂಲಕ –

(ಎ) ಯಾವುದೇ ಹಣವನ್ನು, ಅಥವಾ ಯಾವುದೇ ವಿನಿಮಯ ಪತ್ರವನ್ನು, ಚೆಕ್ಕನ್ನು ಅಥವಾ ಪ್ರಾಮಿಸರಿ ನೋಟನ್ನು ಸ್ವೀಕರಿಸಲಾಗಿದೆ ಎಂದು ತಿಳಿಸಲಾಗುವುದೋ; ಅಥವಾ

(ಬಿ) ಇತರ ಯಾವುದೇ ಚರ ಸ್ವತ್ತನ್ನು, ಋಣವನ್ನು ತೀರಿಸಿದ್ದರಿಂದಾಗಿ ಸ್ವೀಕರಿಸಲಾಗಿದೆ ಎಂದು ತಿಳಿಸಲಾಗುವುದೋ; ಅಥವಾ

(ಸಿ) ಯಾವುದೇ ಋಣವನ್ನು ಅಥವಾ ತಗಾದೆಯನ್ನು ಅಥವಾ ಋಣದ ಅಥವಾ ತಗಾದೆಯ ಯಾವುದೇ ಭಾಗದ ತೀರಿಕೆಯಾಗಿದೆ ಎಂದು ಅಥವಾ ವಿಮೋಚನೆಯಾಗಿದೆ ಎಂದು ತಿಳಿಸಲಾಗುವುದೋ, ಅಥವಾ

(ಡಿ) ಅಂಥ ಯಾವುದೇ ತಲುಪೊಪ್ಪಿಗೆಯ ಸಂಕೇತವಾಗುವುದೋ ಅಥವಾ ತಾತ್ಪರ್ಯವಾಗುವುದೋ,

– ಆ ಯಾವುದೇ ಪತ್ರವನ್ನು, ಜ್ಞಾಪನವನ್ನು ಅಥವಾ ಬರವಣಿಗೆಯನ್ನು, ಅದಕ್ಕೆ ಯಾವನೇ ವ್ಯಕ್ತಿಯ ಹೆಸರಿನ ಸಹಿ ಇರಲಿ ಅಥವಾ ಇಲ್ಲದಿರಲಿ ಒಳಗೊಳ್ಳುತ್ತದೆ;

(24) "ವ್ಯವಸ್ಥೆ ಪತ್ರ" ಎಂದರೆ,–

(ಎ) ವಿವಾಹದ ಪ್ರತಿಫಲವಾಗಿ

(ಬಿ) ವ್ಯವಸ್ಥಾಪನಕರ್ತನು ತನ್ನ ಸ್ವತ್ತನ್ನು ತನ್ನ ಕುಟುಂಬದವರಲ್ಲಿ ಅಥವಾ ಅವನು ಯಾರ ಬಗ್ಗೆ ವ್ಯವಸ್ಥೆ ಮಾಡಬಯಸುವನೋ ಅವರಲ್ಲಿ ಹಂಚುವ ಉದ್ದೇಶಕ್ಕಾಗಿ ಅಥವಾ ತನ್ನನ್ನು ಅವಲಂಬಿಸಿರುವ ಯಾವನೇ ವ್ಯಕ್ತಿಯ ಬಗ್ಗೆ ವ್ಯವಸ್ಥೆ ಮಾಡುವ ಉದ್ದೇಶಕ್ಕಾಗಿ; ಅಥವಾ

(ಸಿ) ಯಾವುದೇ ಧಾರ್ಮಿಕ ಅಥವಾ ಧರ್ಮಾರ್ಥ ಉದ್ದೇಶಕ್ಕಾಗಿ

– ಮಾಡಿದ ಚರ ಅಥವಾ ಸ್ಥಿರ ಸ್ವತ್ತಿನ ಯಾವುದೇ ಮರಣ ಶಾಸನೇತರ ಲಿಖಿತ ಇತ್ಯರ್ಥ, ಮತ್ತು ಇದರಲ್ಲಿ ಹಾಗೆ ಇತ್ಯರ್ಥ ಮಾಡುವ ಲಿಖಿತ ಒಪ್ಪಂದವನ್ನು, ಮತ್ತು ಅಂಥ ಯಾವುದೇ ಇತ್ಯರ್ಥವನ್ನು, ಲಿಖಿತದಲ್ಲಿ ಮಾಡಿರದಿದ್ದರೆ, ಅಂಥ ಯಾವುದೇ ಇತ್ಯರ್ಥದ ನಿಬಂಧನೆಗಳನ್ನು, ನ್ಯಾಸದ ಘೋಷಣೆಯ ಮೂಲಕವಾಗಲಿ ಅಥವಾ ಅನ್ಯಥಾ ಆಗಲಿ ದಾಖಲು ಮಾಡುವ ಯಾವುದೇ ಲಿಖಿತ – ಇವು ಒಳಗೊಳ್ಳುತ್ತವೆ;

(25) "ಸೈನಿಕ" ಇದರಲ್ಲಿ ಭಾರತೀಯ ಸೇನಾ ಅಧಿನಿಯಮ, 1911ರ (1911ರ 8) ಮೇರೆಗೆ ಭರ್ತಿಯಾದ ನಾನ್ ಕಮಿಷನ್ಡ್ ಅಧಿಕಾರಿಯ ದರ್ಜೆಗಿಂತ ಕಡಿಮೆ ದರ್ಜೆಯ ಯಾವನೇ ವ್ಯಕ್ತಿಯು ಒಳಗೊಳ್ಳುತ್ತಾನೆ.

## ಅಧ್ಯಾಯ –II

## ಸ್ಟಾಂಪು ಶುಲ್ಕಗಳು

### ಎ. ಲಿಖಿತಗಳು ಶುಲ್ಕಕ್ಕೆ ಗುರಿಯಾಗುವುದು

**3. ಶುಲ್ಕವನ್ನು ವಿಧಿಸಬಹುದಾದ ಲಿಖಿತಗಳು.**– ಈ ಅಧಿನಿಯಮದ ಉಪಬಂಧಗಳಿಗೆ ಮತ್ತು 1ನೇ ಅನುಸೂಚಿಯಲ್ಲಿ ಒಳಗೊಂಡ ವಿನಾಯಿತಿಗಳಿಗೆ ಒಳಪಟ್ಟು, ಈ ಕೆಳಕಂಡ ಲಿಖಿತಗಳಿಗೆ ಎಂದರೆ ,–

(ಎ) ಯಾವನೇ ವ್ಯಕ್ತಿಯು ಈ ಹಿಂದೆ ಬರೆದುಕೊಟ್ಟಿರದ, 1899ರ ಜುಲೈ ಒಂದನೇ ದಿನಾಂಕದಂದು ಅಥವಾ ಆ ತರುವಾಯ ಭಾರತದಲ್ಲಿ ಬರೆದುಕೊಟ್ಟ ಆ ಅನುಸೂಚಿಯಲ್ಲಿ ನಮೂದಿಸಲಾದ ಪ್ರತಿಯೊಂದು ಲಿಖಿತ;

(ಬಿ) ಆ ದಿನಾಂಕದಂದು ಅಥವಾ ತರುವಾಯ, ಭಾರತದ ಹೊರಗೆ ಬರೆಯಲಾದ ಅಥವಾ ಮಾಡಲಾದ ಮತ್ತು ಭಾರತದಲ್ಲಿ ಅಂಗೀಕರಿಸಿದ ಅಥವಾ ಸಂದಾಯಮಾಡಿದ ಅಥವಾ ಅಂಗೀಕಾರಕ್ಕೆ ಅಥವಾ ಸಂದಾಯಕ್ಕೆ ಹಾಜರುಪಡಿಸಿದ, ಅಥವಾ ಹಿಂಬರೆಯಲಾದ, ವರ್ಗಾಯಿಸಲಾದ ಅಥವಾ ಅನ್ಯಥಾ ವ್ಯವಹರಿಸಲಾದ, ತಗಾದೆಯ ಮೇಲಲ್ಲದೆ ಸಂದಾಯವಾಗತಕ್ಕ ಪ್ರತಿಯೊಂದು ವಿನಿಮಯ ಪತ್ರ ಅಥವಾ ಪ್ರಾಮಿಸರಿ ನೋಟು; ಮತ್ತು

(ಸಿ) ಯಾವನೇ ವ್ಯಕ್ತಿಯು, ಈ ಹಿಂದೆ ಬರೆದುಕೊಟ್ಟಿರದ, ಆ ದಿನಾಂಕದಂದು ಅಥವಾ ತರುವಾಯ ಭಾರತದ ಹೊರಗೆ ಬರೆದುಕೊಟ್ಟ, ಭಾರತದಲ್ಲಿರುವ ಯಾವುದೇ ಸ್ವತ್ತಿಗೆ ಅಥವಾ ಭಾರತದಲ್ಲಿ ಮಾಡಿದ ಅಥವಾ ಮಾಡಬೇಕಾದ ಯಾವುದೇ ವಿಷಯಕ್ಕೆ ಅಥವಾ ಸಂಗತಿಗೆ ಸಂಬಂಧಪಡುವ ಮತ್ತು ಭಾರತದಲ್ಲಿ ಸ್ವೀಕರಿಸಿದ, ಆ ಅನುಸೂಚಿಯಲ್ಲಿ ನಮೂದಿಸಿದ (ವಿನಿಮಯ ಪತ್ರವನ್ನು ಅಥವಾ ಪ್ರಾಮಿಸರಿ ನೋಟನ್ನು ಹೊರತು ಪಡಿಸಿ) ಪ್ರತಿಯೊಂದು ಲಿಖಿತ

– ಇವುಗಳಿಗೆ ಯುಕ್ತ ಸುಂಕವಾಗಿ Iನೇ ಅನುಸೂಚಿಯಲ್ಲಿ ನಮೂದಿಸಿದ ಶುಲ್ಕವನ್ನು ಅನುಕ್ರಮವಾಗಿ ವಿಧಿಸತಕ್ಕುದು:

ಪರಂತು,-

(1) ಈ ವಿನಾಯಿತಿ ಇಲ್ಲದಿದ್ದರೆ, ಯಾವ ಲಿಖಿತದ ಸಂಬಂಧದಲ್ಲಿ ವಿಧಿಸಬಹುದಾದ ಶುಲ್ಕವನ್ನು ಯಾವ ಸಂದರ್ಭಗಳಲ್ಲಿ ಸರ್ಕಾರವು ಸಂದಾಯ ಮಾಡಲು ಬದ್ಧವಾಗುತ್ತಿತ್ತೋ ಆ ಸಂದರ್ಭಗಳಲ್ಲಿ ಸರ್ಕಾರವು ಬರೆದುಕೊಟ್ಟ ಅಥವಾ ಅದರ ಪರವಾಗಿ ಅಥವಾ ಅದರ ಹೆಸರಿನಲ್ಲಿ ಬರೆದುಕೊಟ್ಟ ಯಾವುದೇ ಲಿಖಿತ;

(2) ತರುವಾಯದ ಅಧಿನಿಯಮಗಳಿಂದ ತಿದ್ದುಪಡಿಯಾದಂತೆ, ವ್ಯಾಪಾರಿ ಹಡಗು ಅಧಿನಿಯಮ, 1894ರ ಮೇರೆಗೆ, ಅಥವಾ ಅಧಿನಿಯಮ, 1838 ರ 19ರ ಅಥವಾ ಭಾರತ ಹಡಗುಗಳ ನೋಂದಣಿ ಅಧಿನಿಯಮ, 1841ರ ಮೇರೆಗೆ ನೋಂದಾಯಿತವಾದ ಯಾವುದೇ ಹಡಗಿನ ಅಥವಾ ನೌಕೆಯ, ಅಥವಾ ಯಾವುದೇ ಹಡಗಿನ ಸಾಕೇಟಿನ ಅಥವಾ ಅವುಗಳಲ್ಲಿನ ಯಾವುದೇ ಭಾಗದ, ಹಿತಾಸಕ್ತಿಯ, ಪಾಲಿನ ಅಥವಾ ಸ್ವತ್ತಿನ ನಿರುಪಾಧಿಕವಾದ ಅಥವಾ ಅಡಮಾನದ ಮೂಲಕ ಆದ ಅಥವಾ ಅನ್ಯಥಾ ಆಗಿರತಕ್ಕ ಮಾರಾಟದ, ವರ್ಗಾವಣೆಯ ಅಥವಾ ಇತರ ಇತ್ಯರ್ಥದ ಯಾವುದೇ ಲಿಖಿತ

– ಇವುಗಳ ಸಂಬಂಧದಲ್ಲಿ ಯಾವುದೇ ಶುಲ್ಕವನ್ನು ವಿಧಿಸತಕ್ಕುದಲ್ಲ.

**4. ಮಾರಾಟದಲ್ಲಿ , ಅಡಮಾನದಲ್ಲಿ ಅಥವಾ ವ್ಯವಸ್ಥೆಯ ಏಕ ವ್ಯವಹಾರದಲ್ಲಿ ಉಪಯೋಗಿಸಲಾದ ಹಲವು ಲಿಖಿತಗಳು.–** (1) ಯಾವುದೇ ಮಾರಾಟದ, ಅಡಮಾನದ ಅಥವಾ ವ್ಯವಸ್ಥೆಯ ಸಂದರ್ಭದಲ್ಲಿ ವ್ಯವಹಾರವನ್ನು ಪೂರ್ಣಗೊಳಿಸುವುದಕ್ಕಾಗಿ ಹಲವು ಲಿಖಿತಗಳನ್ನು ಬಳಸಿದ್ದಲ್ಲಿ, ಹಸ್ತಾಂತರಣಕ್ಕಾಗಿ, ಅಡಮಾನಕ್ಕಾಗಿ ಅಥವಾ ವ್ಯವಸ್ಥೆಗಾಗಿ ಪ್ರಧಾನ ಲಿಖಿತಕ್ಕೆ ಮಾತ್ರ Iನೇ ಅನುಸೂಚಿಯಲ್ಲಿ ನಿಯಮಿಸಲಾದ ಶುಲ್ಕವನ್ನು ವಿಧಿಸತಕ್ಕುದು, ಮತ್ತು ಇತರ ಪ್ರತಿಯೊಂದು ಲಿಖಿತಕ್ಕೆ, ಆ ಅನುಸೂಚಿಯಲ್ಲಿ ಅದಕ್ಕೆ ನಿಯಮಿಸಲಾದ ಶುಲ್ಕಕ್ಕೆ (ಯಾವುದಾದರೂ ಇದ್ದರೆ) ಬದಲಾಗಿ ಒಂದು ರೂಪಾಯಿಯ ಶುಲ್ಕವನ್ನು ವಿಧಿಸತಕ್ಕುದು.

(2) ಪಕ್ಷಕಾರರು, ಹಾಗೆ ಬಳಸಲಾದ ಲಿಖಿತಗಳಲ್ಲಿ ಯಾವುದನ್ನು, (1)ನೇ ಉಪಪ್ರಕರಣದ ಉದ್ದೇಶಗಳಿಗಾಗಿ, ಪ್ರಧಾನ ಲಿಖಿತವೆಂಬುದಾಗಿ ಭಾವಿಸತಕ್ಕುದೆಂದು ತಾವೇ ನಿರ್ಧರಿಸಬಹುದು:

ಪರಂತು, ಹಾಗೆ ನಿರ್ಧರಿಸಲಾದ ಲಿಖಿತದ ಮೇಲೆ ವಿಧಿಸಬಹುದಾದ ಶುಲ್ಕವು, ಬಳಸಲಾದ ಸದರಿ ಲಿಖಿತಗಳಲ್ಲಿ ಯಾವುದೇ ಒಂದರ ಸಂಬಂಧದಲ್ಲಿ ವಿಧಿಸಬಹುದಾದ ಅತ್ಯಧಿಕ ಶುಲ್ಕವಾಗಿರತಕ್ಕುದು.

**5. ಹಲವು ವಿಭಿನ್ನ ವಿಷಯಗಳಿಗೆ ಸಂಬಂಧಿಸಿದ ಲಿಖಿತಗಳು.–** ಹಲವು ವಿಭಿನ್ನ ವಿಷಯಗಳನ್ನು ಒಳಗೊಂಡ ಅಥವಾ ಅವುಗಳಿಗೆ ಸಂಬಂಧಿಸಿದ ಯಾವುದೇ ಲಿಖಿತಕ್ಕೆ, ಅಂಥ ವಿಷಯಗಳಲ್ಲಿ ಒಂದನ್ನು ಒಳಗೊಂಡ ಅಥವಾ ಒಂದಕ್ಕೆ ಸಂಬಂಧಿಸಿದ ಪ್ರತ್ಯೇಕ ಲಿಖಿತಗಳು ಆ ಅಧಿನಿಯಮದ ಮೇರೆಗೆ ಯಾವ ಶುಲ್ಕಗಳಿಗೆ ಗುರಿಯಾಗಬಹುದಾಗಿತ್ತೋ ಆ ಶುಲ್ಕಗಳ ಒಟ್ಟು ಮೊತ್ತವನ್ನು ವಿಧಿಸತಕ್ಕುದು.

**6. Iನೇ ಅನುಸೂಚಿಯಲ್ಲಿ ಹಲವಾರು ವಿವರಣೆಗಳಲ್ಲಿ ಒಳಗೊಳ್ಳುವಂಥ ಲಿಖಿತಗಳು.–** ಈ ಹಿಂದಿನ ಪ್ರಕರಣದ ಉಪಬಂಧಗಳಿಗೊಳಪಟ್ಟು, Iನೇ ಅನುಸೂಚಿಯಲ್ಲಿ ಎರಡು ಅಥವಾ ಹೆಚ್ಚಿನ ವಿವರಗಳಲ್ಲಿ ಒಳಗೊಳ್ಳುವ ಹಾಗೆ ರಚಿತವಾದಂಥ ಲಿಖಿತಕ್ಕೆ, ಅವುಗಳ ಮೇರೆಗೆ ವಿಧಿಸಬಹುದಾದ ಶುಲ್ಕಗಳು ಬೇರೆ ಬೇರೆಯಾಗಿರುವಲ್ಲಿ, ಅಂಥ ಶುಲ್ಕಗಳಲ್ಲಿ ಅತ್ಯಧಿಕ ಶುಲ್ಕವನ್ನು ಮಾತ್ರ ವಿಧಿಸತಕ್ಕುದು:

ಪರಂತು, ಈ ಅಧಿನಿಯಮದಲ್ಲಿ ಇರುವುದು ಯಾವುದೂ, ಯಾವ ಲಿಖಿತಕ್ಕೆ ಶುಲ್ಕವನ್ನು ವಿಧಿಸಬಹುದೋ ಮತ್ತು ಯಾವುದರ ಸಂಬಂಧದಲ್ಲಿ ಯುಕ್ತ ಶುಲ್ಕವನ್ನು ಸಂದಾಯ ಮಾಡಲಾಗಿದೆಯೋ ಆ ಯಾವುದೇ ಲಿಖಿತದ ಪ್ರತಿರೂಪವನ್ನು ಅಥವಾ ನಕಲನ್ನು ಒಂದು ರೂಪಾಯಿಯನ್ನು ಮೀರಿದ ಶುಲ್ಕವನ್ನು ವಿಧಿಸುವುದಕ್ಕೆ ಗುರಿಪಡಿಸತಕ್ಕುದಲ್ಲ.

**7. ಸಾಗರ ವಿಮೆಯ ಪಾಲಿಸಿಗಳು.–** [(1) ರಿಂದ (3)ರ ವರೆಗಿನ ಉಪ ಪ್ರಕರಣಗಳನ್ನು 1963 ರ 11ನೇ ಸಂಖ್ಯೆಯ ಅಧಿನಿಯಮದ ಮೂಲಕ ತೆಗೆದುಹಾಕಲಾಗಿದೆ]

(4) ಕಡಲ ಪ್ರಯಾಣಕ್ಕಾಗಿ ಅಥವಾ ಅದರ ಮೇಲೆ ಮತ್ತು ಪ್ರಯಾಣದ ಸಮಯಕ್ಕಾಗಿ ಸಹ ಅಥವಾ ಆ ಹಡಗು ಗಮ್ಯ ಸ್ಥಾನವನ್ನು ತಲುಪಿ ಲಂಗರು ಹಾಕಿದ ತರುವಾಯದ ಮೂವತ್ತು ದಿನಗಳನ್ನು ಮೀರಿದ ಯಾವುದೇ ಸಮಯಕ್ಕೆ ವ್ಯಾಪ್ತವಾಗುವುದಕ್ಕಾಗಿ ಅಥವಾ ಅದನ್ನು ಒಳಗೊಳ್ಳುವುದಕ್ಕಾಗಿ ಯಾವುದೇ ಸಾಗರ ವಿಮೆಯನ್ನು ಮಾಡಿರುವಲ್ಲಿ, ಆ ಪಾಲಿಸಿಗೆ ಕಡಲ ಪ್ರಯಾಣಕ್ಕಾಗಿ ಅಥವಾ ಅದರ ಮೇಲೆ ಶುಲ್ಕವನ್ನು ಮತ್ತು ಸಮಯದ ಪಾಲಿಸಿಯಾಗಿ ಸಹ ಶುಲ್ಕವನ್ನು ವಿಧಿಸತಕ್ಕುದು.

**8. 1879ರ 11ನೇ ಅಧಿನಿಯಮದ ಮೇರೆಗೆ ಸಾಲಗಳ ಮೇಲೆ ನೀಡಲಾದ ಬಂಧ ಪತ್ರಗಳು, ಡಿಬೆಂಚರುಗಳು ಅಥವಾ ಇತರ ಭದ್ರತೆಗಳು.–** ಈ ಅಧಿನಿಯಮದಲ್ಲಿ ಏನೇ ಇದ್ದರೂ, ಸ್ಥಳೀಯ ಪ್ರಾಧಿಕಾರಗಳ ಅಧಿನಿಯಮ, 1879ರ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಉಪಬಂಧಗಳ ಮೇರೆಗೆ ಬಂಧಪತ್ರಗಳನ್ನು, ಡಿಬೆಂಚರುಗಳನ್ನು ಅಥವಾ ಇತರ ಭದ್ರತೆಗಳನ್ನು ನೀಡುವ ಮೂಲಕ ಸಾಲವನ್ನು ಎತ್ತುವ ಯಾವುದೇ ಸ್ಥಳೀಯ ಪ್ರಾಧಿಕಾರವು, ಅಂಥ ಸಾಲದ ಸಂಬಂಧದಲ್ಲಿ, ನೀಡಲಾದ ಆ ಬಂಧಪತ್ರಗಳ, ಡಿಬೆಂಚರುಗಳ ಅಥವಾ ಇತರ ಭದ್ರತೆಗಳ ಒಟ್ಟು ಮೊಬಲಗಿನ ಮೇಲೆ ಶೇಕಡಾ ಒಂದರಂತೆ ಶುಲ್ಕವನ್ನು ವಿಧಿಸತಕ್ಕುದು, ಮತ್ತು ಅಂಥ ಬಂಧಪತ್ರಗಳಿಗೆ, ಡಿಬೆಂಚರುಗಳಿಗೆ ಅಥವಾ ಇತರ ಭದ್ರತೆಗಳಿಗೆ ಸ್ಟಾಂಪು ಹಚ್ಚುವ ಅಗತ್ಯವಿಲ್ಲ

ಮತ್ತು ನವೀಕರಣದ, ಕ್ರೋಢೀಕರಣದ, ಪುನರ್ ವಿಭಾಗದ ಅಥವಾ ಅನ್ಯಥಾಗಳ ಮೇಲೆ ಯಾವುದೇ ಹೆಚ್ಚಿನ ಶುಲ್ಕವನ್ನು ವಿಧಿಸತಕ್ಕುದಲ್ಲ.

(2) ಸ್ಟಾಂಪು ಹಚ್ಚುವುದರಿಂದ ಮತ್ತು ಇನ್ನೂ ಹೆಚ್ಚಿನ ಶುಲ್ಕವನ್ನು ವಿಧಿಸುವುದರಿಂದ ಕೆಲವು ಬಂಧಪತ್ರಗಳನ್ನು, ಡಿಬೆಂಚರುಗಳನ್ನು ಅಥವಾ ಇತರ ಭದ್ರತೆಗಳನ್ನು ವಿನಾಯಿತಿಗೊಳಿಸುವ (1)ನೇ ಉಪಪ್ರಕರಣದ ಉಪಬಂಧಗಳು, ಅವುಗಳಲ್ಲಿ ನಮೂದಿಸಿರುವ ಬಗೆಯ ಎಲ್ಲಾ ಬಾಕಿ ಸಾಲಗಳ ಬಂಧಪತ್ರಗಳಿಗೆ, ಡಿಬೆಂಚರುಗಳಿಗೆ ಅಥವಾ ಇತರ ಭದ್ರತೆಗಳಿಗೆ ಅನ್ವಯವಾಗತಕ್ಕುದು ಮತ್ತು ಅಂಥ ಎಲ್ಲಾ ಬಂಧಪತ್ರಗಳು, ಡಿಬೆಂಚರುಗಳು ಅಥವಾ ಇತರ ಭದ್ರತೆಗಳು, ಅವುಗಳಿಗೆ ಸ್ಟಾಂಪು ಹಚ್ಚಿರಲಿ ಅಥವಾ ಹಚ್ಚದಿರಲಿ ಅವು ವಿಧಿಮಾನ್ಯವಾಗಿರತಕ್ಕುದು:

ಪರಂತು, ಇದರಲ್ಲಿರುವುದು ಯಾವುದೂ, ಸ್ಥಳೀಯ ಪ್ರಾಧಿಕಾರವು ನೀಡಿದ ಬಂಧಪತ್ರಗಳ, ಡಿಬೆಂಚರುಗಳ ಅಥವಾ ಇತರ ಭದ್ರತೆಗಳ ಸಂಬಂಧದಲ್ಲಿ 1897ರ ಮಾರ್ಚ್ ಇಪ್ಪತ್ತಾರನೇ ದಿವಸಕ್ಕೆ ಮುಂಚೆ ವಿಧಿಸತಕ್ಕ ಶುಲ್ಕವನ್ನು ಕೇಂದ್ರ ಸರ್ಕಾರವು ಹೊರಡಿಸಿದ ಆದೇಶದ ಮೂಲಕ ಅದಾಗಲೇ ಸಂದಾಯ ಅಥವಾ ಇರಸಾಲು ಮಾಡದಿರುವಾಗ, ಅಂಥ ಶುಲ್ಕದಿಂದ ಆ ಪ್ರಾಧಿಕಾರವನ್ನು ವಿನಾಯಿತಿಗೊಳಿಸತಕ್ಕುದಲ್ಲ.

(3) ಈ ಪ್ರಕರಣದ ಮೂಲಕ ಅಗತ್ಯಪಡಿಸಲಾದ ಶುಲ್ಕವನ್ನು ಸಂದಾಯ ಮಾಡಲು ಉದ್ದೇಶಪೂರ್ವಕವಾಗಿ ನಿರ್ಲಕ್ಷಿಸಿದ ಸಂದರ್ಭದಲ್ಲಿ, ಸ್ಥಳೀಯ ಪ್ರಾಧಿಕಾರವು, ಸಂದಾಯ ಮಾಡಬೇಕಾದ ಶುಲ್ಕದ ಮೊಬಲಗಿನ ಮೇಲೆ ಶೇಕಡಾ ಹತ್ತಕ್ಕೆ ಸಮನಾದ ಮೊತ್ತವನ್ನು ಮತ್ತು ನಿರ್ಲಕ್ಷ್ಯವು ಮುಂದುವರಿದ ಅವಧಿಯಲ್ಲಿ ಮೊದಲ ತಿಂಗಳಿನ ತರುವಾಯದ ಪ್ರತಿಯೊಂದು ತಿಂಗಳಿಗೆ ಅಷ್ಟೇ ದಂಡವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಸಲು ಹೊಣೆಯಾಗಿರತಕ್ಕುದು.

**8ಎ. ಠೇವಣಿದಾರನು ವ್ಯವಹರಿಸಿದ ಭದ್ರತಾ ಪತ್ರಗಳು ಸ್ಟಾಂಪು ಶುಲ್ಕಕ್ಕೆ ಗುರಿಯಾಗದಿರುವುದು.–** ಈ ಅಧಿನಿಯಮದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಇದ್ದರೂ,–

(ಎ) ನೀಡಿಕೆದಾರನು, ಒಬ್ಬ ಅಥವಾ ಹೆಚ್ಚಿನ ಠೇವಣಿದಾರರಿಗೆ ಭದ್ರತಾ ಪತ್ರಗಳನ್ನು ಹೊರಡಿಸಿ, ಅಂಥ ನೀಡಿಕೆಗಳ ಸಂಬಂಧದಲ್ಲಿ ತಾನು ಹೊರಡಿಸಿದ ಭದ್ರತಾ ಪತ್ರಗಳ ಒಟ್ಟು ಮೊಬಲಗಿನ ಮೇಲೆ ಶುಲ್ಕವನ್ನು ವಿಧಿಸತಕ್ಕದ್ದು ಮತ್ತು ಅಂಥ ಭದ್ರತಾ ಪತ್ರಗಳಿಗೆ ಸ್ಟಾಂಪನ್ನು ಹಚ್ಚುವ ಅಗತ್ಯವಿಲ್ಲ.

(ಬಿ) ನೀಡಿಕೆದಾರನು, ಠೇವಣಿದಾರರ ಅಧಿನಿಯಮ, 1996(1996ರ 22) ರ 14ನೇ ಪ್ರಕರಣದ (3)ನೇ ಉಪ-ಪ್ರಕರಣದ ಮೇರೆಗೆ ಭದ್ರತಾ ಪತ್ರಗಳನ್ನು ಹೊರಡಿಸಿರುವಲ್ಲಿ, ಅಂಥ ಭದ್ರತಾ ಪತ್ರಗಳ ಮೇಲೆ ಈ ಅಧಿನಿಯಮದ ಮೇರೆಗೆ ನಕಲು ಪ್ರಮಾಣ ಪತ್ರಗಳ ನೀಡಿಕೆಯ ಮೇಲೆ ಶುಲ್ಕವನ್ನು ಹೇಗೆ ಸಂದಾಯ ಮಾಡಬೇಕಾಗಿದೆಯೋ ಹಾಗೆ ಸಂದಾಯ ಮಾಡತಕ್ಕದ್ದು.

(ಸಿ)(i) ಒಬ್ಬ ವ್ಯಕ್ತಿಯಿಂದ ಠೇವಣಿದಾರನಿಗೆ ಅಥವಾ ಠೇವಣಿದಾರನಿಂದ ಪ್ರಯೋಜನಕಾರಿ ಒಡೆಯನಿಗೆ ಆಗುವ ಭದ್ರತಾ ಪತ್ರಗಳ ನೋಂದಾಯಿತ ಒಡೆತನದ ವರ್ಗಾವಣೆಯು ;

(ii) ಠೇವಣಿದಾರನು ವ್ಯವಹರಿಸಿದ ಭದ್ರತಾ ಪತ್ರಗಳ ಪ್ರಯೋಜನಕಾರಿ ಒಡೆತನದ ವರ್ಗಾವಣೆಯು

(iii) ಠೇವಣಿದಾರನು ವ್ಯವಹರಿಸಿದ ಯೂನಿಟ್ಟುಗಳ ಪ್ರಯೋಜನಕಾರಿ ಒಡೆತನದ ವರ್ಗಾವಣೆಯು, ಭಾರತದ ಯೂನಿಟ್ ಟ್ರಸ್ಟ್ ಅಧಿನಿಯಮ, 1963 (1963ರ 52) ರ 3ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಸ್ಥಾಪಿತವಾದ ಭಾರತದ ಯೂನಿಟ್ ಟ್ರಸ್ಟಿನ

ಯೂನಿಟ್ಟುಗಳೂ ಸೇರಿದಂತೆ ಮ್ಯೂಚುಯಲ್ ಫಂಡಿನ ಯೂನಿಟ್ಟುಗಳಾಗಿರುವುದರಿಂದ, ಅಂಥ ಯೂನಿಟ್ಟುಗಳ ವರ್ಗಾವಣೆಯು

– ಈ ಅಧಿನಿಯಮದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೇರೆಗೆ ಶುಲ್ಕಕ್ಕೆ ಗುರಿಯಾಗತಕ್ಕದ್ದಲ್ಲ.

**ವಿವರಣೆ 1:–** ಈ ಪ್ರಕರಣದ ಉದ್ದೇಶಗಳಿಗಾಗಿ "ಪ್ರಯೋಜನಕಾರಿ ಒಡೆತನ", "ಠೇವಣಿದಾರ" ಮತ್ತು "ನೀಡಿಕೆದಾರ" ಎಂಬ ಪದಾವಳಿಯು ಠೇವಣಿದಾರಕರ ಅಧಿನಿಯಮ, 1996ರ 2ನೇ ಪ್ರಕರಣದ (1)ನೇ ಉಪ-ಪ್ರಕರಣದ (ಎ), (ಇ) ಮತ್ತು (ಎಫ್) ಖಂಡಗಳಲ್ಲಿ ಅವುಗಳಿಗೆ ಅನುಕ್ರಮವಾಗಿ ಕೊಟ್ಟಿರುವ ಅರ್ಥಗಳನ್ನೇ ಹೊಂದಿರತಕ್ಕದ್ದು.

**ವಿವರಣೆ 2:–** ಈ ಪ್ರಕರಣದ ಉದ್ದೇಶಗಳಿಗಾಗಿ, "ಭದ್ರತಾ ಪತ್ರಗಳು" ಎಂಬ ಪದಾವಳಿಯು ಭದ್ರತಾ ಪತ್ರಗಳ ಕರಾರುಗಳ (ವಿನಿಯಮನ) ಅಧಿನಿಯಮ, 1956 (1956ರ 42)ರ 2ನೇ ಪ್ರಕರಣದ (ಹೆಚ್) ಖಂಡದಲ್ಲಿ ಅದಕ್ಕೆ ಕೊಟ್ಟಿರುವ ಅರ್ಥವನ್ನೇ ಹೊಂದಿರತಕ್ಕದ್ದು.

**9. ಶುಲ್ಕಗಳನ್ನು ಕಡಿಮೆ ಮಾಡುವ, ಮಾಫಿ ಮಾಡುವ ಅಥವಾ ಅವುಗಳ ಬಗ್ಗೆ ರಾಜೀ ಮಾಡಿಕೊಳ್ಳುವ ಅಧಿಕಾರ.**– (1) ಸರ್ಕಾರವು, ರಾಜಪತ್ರದಲ್ಲಿ ಪ್ರಕಟಿಸಲಾದ ನಿಯಮದ ಅಥವಾ ಆದೇಶದ ಮೂಲಕ,–

(ಎ) ವ್ಯಕ್ತಿಗಳ ಯಾವುದೇ ನಿರ್ದಿಷ್ಟ ವರ್ಗವು ಅಥವಾ ಅವರ ಹೆಸರಿನಲ್ಲಿ, ಅಥವಾ ಅಂಥ ವರ್ಗದ ಯಾರೇ ಸದಸ್ಯರು ಅಥವಾ ಅವರ ಹೆಸರಿನಲ್ಲಿ ಲಿಖಿತಗಳನ್ನು ಬರೆದುಕೊಟ್ಟಾಗ, ಆ ಯಾವುವೇ ಲಿಖಿತಗಳಿಗೆ ಅಥವಾ ಲಿಖಿತಗಳ ಯಾವುದೇ ನಿರ್ದಿಷ್ಟ ವರ್ಗಕ್ಕೆ ಅಥವಾ ಅಂಥ ವರ್ಗಕ್ಕೆ ಸೇರಿದ ಯಾವುದೇ ಲಿಖಿತಕ್ಕೆ ಅಥವಾ ಯಾವುದೇ ಲಿಖಿತಗಳಿಗೆ ವಿಧಿಸುವ ಶುಲ್ಕಗಳನ್ನು ತನ್ನ ಆಡಳಿತದಲ್ಲಿರುವ ಇಡೀ ರಾಜ್ಯಕ್ಷೇತ್ರಗಳಲ್ಲಿ ಅಥವಾ ಅವುಗಳ ಯಾವುದೇ ಭಾಗದಲ್ಲಿ, ಉತ್ತರಾನ್ವಯವಾಗಿಯಾಗಲೀ ಅಥವಾ ಪೂರ್ವಾನ್ವಯವಾಗಿಯಾಗಲೀ ಕಡಿಮೆ ಮಾಡಬಹುದು ಅಥವಾ ಮಾಫಿಮಾಡಬಹುದು, ಮತ್ತು

(ಬಿ) ಯಾವುದೇ ನಿಗಮಿತ ಕಂಪನಿಯು ಅಥವಾ ಇತರ ನಿಗಮಿತ ನಿಕಾಯವು ಡಿಬೆಂಚರುಗಳನ್ನು, ಬಂಧಪತ್ರಗಳನ್ನು ಅಥವಾ ಮಾರಾಟ ಮಾಡಬಹುದಾದ ಇತರ ಭದ್ರತೆಗಳನ್ನು ಹೊರಡಿಸಿದ ಸಂದರ್ಭದಲ್ಲಿ ಅಥವಾ ವರ್ಗಾಯಿಸಿದ ಸಂದರ್ಭದಲ್ಲಿ (ವರ್ಗಾವಣೆಧಾರಕನಾಗಿದ್ದರೆ, ನಿಗಮಿತವಾಗಿರಲಿ ಅಥವಾ ಇಲ್ಲದಿರಲಿ) ಶುಲ್ಕಗಳ ಸಂಯೋಜನೆಗಾಗಿ ಅಥವಾ ಕ್ರೋಡೀಕರಣಕ್ಕಾಗಿ ಉಪಬಂಧಿಸಬಹುದು.

(2) ಈ ಪ್ರಕರಣದಲ್ಲಿ, "ಸರ್ಕಾರ" ಎಂದರೆ,–

(ಎ) ವಿನಿಮಯ ಪತ್ರಗಳ, ಚೆಕ್ಕುಗಳ, ಪ್ರಾಮಿಸರಿ ನೋಟುಗಳ, ವಹನಪತ್ರಗಳ, ಸಾಲ ಪತ್ರಗಳ, ವಿಮಾ ಪಾಲಿಸಿಗಳ, ಷೇರುಗಳ ವರ್ಗಾವಣೆಯ, ಡಿಬೆಂಚರುಗಳ, ಪ್ರತಿನಿಧಿ ಪತ್ರಗಳ ಮತ್ತು ಜಮೆಗಳ-ಸಂಬಂಧದಲ್ಲಿ ಸ್ಟಾಂಪು ಶುಲ್ಕಕ್ಕೆ ಸಂಬಂಧಿಸಿದಂತೆ ಮತ್ತು ಈ ಅಧಿನಿಯಮದ ಮೇರೆಗೆ ವಿಧಿಸಬಹುದಾದ ಮತ್ತು ಸಂವಿಧಾನದ ಏಳನೇ ಅನುಸೂಚಿಯ Iನೇ ಪಟ್ಟಿಯಲ್ಲಿ 96ನೇ ನಮೂದಿನೊಳಗೆ ಬರುವ ಯಾವುದೇ ಇತರ ಸ್ಟಾಂಪು ಶುಲ್ಕಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ;

(ಬಿ) ಹಿಂದೆ ಹೇಳಿದುದನ್ನುಳಿದು, ರಾಜ್ಯಸರ್ಕಾರ.

## ಬಿ. ಸ್ಟಾಂಪುಗಳು ಮತ್ತು ಅವುಗಳನ್ನು ಉಪಯೋಗಿಸುವ ವಿಧಾನ

**10. ಶುಲ್ಕಗಳನ್ನು ಹೇಗೆ ಸಂದಾಯಮಾಡುವುದು.**- (1) ಈ ಅಧಿನಿಯಮದಲ್ಲಿ, ಅನ್ಯಥಾ ವ್ಯಕ್ತವಾಗಿ ಉಪಬಂಧಿಸಿರುವವುಗಳನ್ನು ಹೊರತುಪಡಿಸಿ, ಯಾವುದೇ ಲಿಖಿತಗಳಿಗೆ ವಿಧಿಸಬಹುದಾದ ಎಲ್ಲಾ ಶುಲ್ಕಗಳನ್ನು ಸಂದಾಯ ಮಾಡತಕ್ಕುದು, ಮತ್ತು ಅಂಥ ಸಂದಾಯವನ್ನು,-

(ಎ) ಇಲ್ಲಿ ಒಳಗೊಂಡಿರುವ ಉಪಬಂಧಗಳಿಗೆ ಅನುಸಾರವಾಗಿ; ಅಥವಾ

(ಬಿ) ಅಂಥ ಉಪಬಂಧವು ಅದಕ್ಕೆ ಅನ್ವಯವಾಗದಿರುವಾಗ, ರಾಜ್ಯಸರ್ಕಾರವು ನಿಯಮದ ಮೂಲಕ ನಿರ್ದೇಶಿಸಬಹುದಾದಂತೆ

- ಸ್ಟಾಂಪುಗಳ ಮೂಲಕ ಅಂಥ ಲಿಖಿತಗಳ ಮೇಲೆ ಸೂಚಿಸತಕ್ಕುದು.

(2) (1)ನೆಯ ಉಪಪ್ರಕರಣದ ಮೇರೆಗೆ ರಚಿಸಲಾದ ನಿಯಮಗಳು, ಇತರ ವಿಷಯಗಳೊಂದಿಗೆ,-

(ಎ) ಪ್ರತಿಯೊಂದು ಬಗೆಯ ಲಿಖಿತದ ಸಂದರ್ಭದಲ್ಲಿ ಉಪಯೋಗಿಸಬಹುದಾದ ಸ್ಟಾಂಪುಗಳ ವರ್ಣನೆಯನ್ನು;

(ಬಿ) ಮುದ್ರೆ ಹಾಕಲಾದ ಸ್ಟಾಂಪುಗಳೊಂದಿಗೆ ಸ್ಟಾಂಪು ಹಚ್ಚಿದ ಲಿಖಿತಗಳ ಸಂದರ್ಭದಲ್ಲಿ ಉಪಯೋಗಿಸಬಹುದಾದ ಸ್ಟಾಂಪುಗಳ ಸಂಖ್ಯೆಯನ್ನು;

(ಸಿ) ವಿನಿಮಯ ಪತ್ರಗಳ ಅಥವಾ ಪ್ರಾಮಿಸರಿ ನೋಟುಗಳ ಸಂದರ್ಭದಲ್ಲಿ- ಅವುಗಳನ್ನು ಬರೆಯುವ ಕಾಗದದ ಅಳತೆಯನ್ನು

- ವಿನಿಯಮಿಸಬಹುದು.

**11. ಅಂಟಿಕೊಳ್ಳುವ ಸ್ಟಾಂಪುಗಳ ಉಪಯೋಗ.**- ಈ ಕೆಳಕಂಡ ಲಿಖಿತಗಳಿಗೆ ಅಂಟಿಕೊಳ್ಳುವ ಸ್ಟಾಂಪುಗಳನ್ನು ಹಚ್ಚಬಹುದು, ಎಂದರೆ:-

(ಎ) ತಗಾದೆ ಮಾಡಿದ ಮೇಲಲ್ಲದೆ ಸಂದಾಯಮಾಡಬೇಕಾದ ಮತ್ತು ಸೆಟ್‌ಗಳಲ್ಲಿ ಬರೆದ ವಿನಿಮಯ ಪತ್ರಗಳ ಭಾಗಗಳನ್ನು ಹೊರತುಪಡಿಸಿ, ಹತ್ತು ನಯೆಪೈಸೆಯನ್ನು ಮೀರದ ಶುಲ್ಕವನ್ನು ವಿಧಿಸಬಹುದಾದ ಲಿಖಿತಗಳು;

(ಬಿ) ಭಾರತದ ಹೊರಗೆ ಬರೆಯಲಾದ ಅಥವಾ ಮಾಡಲಾದ ವಿನಿಮಯ ಪತ್ರಗಳು ಮತ್ತು ಪ್ರಾಮಿಸರಿ ನೋಟುಗಳು;

(ಸಿ) ಉಚ್ಚನ್ಯಾಯಾಲಯದ ಹೆಸರು ಪಟ್ಟಿಯಲ್ಲಿ ಅಡ್ವೋಕೇಟ್‌ನಾಗಿ, ವಕೀಲನಾಗಿ ಅಥವಾ ಅಟಾರ್ನಿಯಾಗಿ ಉಚ್ಚನ್ಯಾಯಾಲಯದ ಪಟ್ಟಿಯಲ್ಲಿ ನಮೂದು;

(ಡಿ) ನೋಟರಿಯ ಕಾರ್ಯಗಳು; ಮತ್ತು

(ಇ) ಯಾವುದೇ ನಿಗಮಿತ ಕಂಪನಿಯಲ್ಲಿನ ಅಥವಾ ಇತರ ನಿಗಮಿತ ನಿಕಾಯದಲ್ಲಿನ ಷೇರುಗಳನ್ನು ಹಿಂಬರಹದ ಮೂಲಕ ವರ್ಗಾವಣೆ ಮಾಡುವುದು.

**12. ಅಂಟಿಕೊಳ್ಳುವ ಸ್ಟಾಂಪುಗಳ ರದ್ದಿಯಾತಿ.**- (1) (ಎ) ಯಾವನೇ ವ್ಯಕ್ತಿಯಿಂದ ಬರೆಯಲ್ಪಟ್ಟ ಶುಲ್ಕವನ್ನು ವಿಧಿಸಬಹುದಾದಂಥ ಯಾವುದೇ ಲಿಖಿತಕ್ಕೆ ಯಾವುದೇ ಅಂಟಿಕೊಳ್ಳುವ ಸ್ಟಾಂಪನ್ನು ಹಚ್ಚುವ ಯಾರೇ ಆಗಲಿ, ಅಂಥ ಸ್ಟಾಂಪನ್ನು ಅಂಟಿಸುವಾಗ ಅದನ್ನು ಮತ್ತೊಮ್ಮೆ ಉಪಯೋಗಿಸದ ಹಾಗೆ ರದ್ದುಗೊಳಿಸತಕ್ಕುದು; ಮತ್ತು

(ಬಿ) ಅಂಟಿಕೊಳ್ಳುವ ಸ್ಟಾಂಪನ್ನು ಹೊಂದಿರುವ ಯಾವುದೇ ಪತ್ರದ ಮೇಲೆ ಯಾವುದೇ ಲಿಖಿತವನ್ನು ಬರೆದುಕೊಡುವ ಯಾರೇ ಆಗಲಿ ಬರೆದುಕೊಡುವ ಸಮಯದಲ್ಲಿ ಅಂಥ ಸ್ಟಾಂಪನ್ನು,

ಹಿಂದೆ ಹೇಳಿದ ರೀತಿಯಲ್ಲಿ ಈಗಾಗಲೇ ರದ್ದುಪಡಿಸದಿದ್ದರೆ, ಅದನ್ನು ಮತ್ತೆ ಉಪಯೋಗಿಸದ ಹಾಗೆ ರದ್ದುಗೊಳಿಸತಕ್ಕುದು.

(2) ಮತ್ತೆ ಉಪಯೋಗಿಸದ ಹಾಗೆ ರದ್ದುಪಡಿಸದ ಅಂಟಿಕೊಳ್ಳುವ ಸ್ಟಾಂಪನ್ನು ಹೊಂದಿರುವ ಯಾವುದೇ ಲಿಖಿತವನ್ನು, ಅಂಥ ಸ್ಟಾಂಪಿಗೆ ಸಂಬಂಧಪಟ್ಟಂತೆ ಸ್ಟಾಂಪು ಹಚ್ಚಿದ ಲಿಖಿತ ಎಂಬುದಾಗಿ ಭಾವಿಸತಕ್ಕುದು.

(3) ಅಂಟಿಕೊಳ್ಳುವ ಸ್ಟಾಂಪನ್ನು ರದ್ದುಗೊಳಿಸಲು (1)ನೇ ಉಪಪ್ರಕರಣದ ಮೂಲಕ ಅಗತ್ಯಪಡಿಸಲಾದ ವ್ಯಕ್ತಿಯು, ಆ ಸ್ಟಾಂಪಿನ ಮೇಲೆ ಅಥವಾ ಅಡ್ಡವಾಗಿ ತನ್ನ ಹೆಸರನ್ನು ಅಥವಾ ಸಂಕ್ಷಿಪ್ತ ಸಹಿಯನ್ನು ಅಥವಾ ತನ್ನ ಫರ್ಮಿನ ಹೆಸರನ್ನು ಅಥವಾ ಸಂಕ್ಷಿಪ್ತ ಸಹಿಯನ್ನು ಬರೆಯುವ ಮೂಲಕ ತಾನು ಹಾಗೆ ಬರೆದ ನಿಜವಾದ ದಿನಾಂಕವನ್ನು ಬರೆದು, ಅಥವಾ ಇತರ ಯಾವುದೇ ಪರಿಣಾಮಕಾರಿಯಾದ ರೀತಿಯಲ್ಲಿ ರದ್ದುಗೊಳಿಸಬಹುದು.

**13. ಮುದ್ರೆ ಹಾಕಲಾದ ಸ್ಟಾಂಪುಗಳನ್ನು ಹಚ್ಚಿದ ಲಿಖಿತಗಳನ್ನು ಹೇಗೆ ಬರೆಯುವುದು.–** ಮುದ್ರೆ ಹಾಕಲಾದ ಸ್ಟಾಂಪನ್ನು ಹಚ್ಚಿದ ಕಾಗದದ ಮೇಲೆ ಬರೆಯುವ ಪ್ರತಿಯೊಂದು ಲಿಖಿತವನ್ನು ಆ ಲಿಖಿತದ ಮುಖಪುಟದ ಮೇಲೆ ಸ್ಟಾಂಪು ಕಾಣುವಂತೆ ಮತ್ತು ಇತರ ಯಾವುದೇ ಲಿಖಿತಕ್ಕಾಗಿ ಉಪಯೋಗಿಸಲಾಗದ ಅಥವಾ ವಿನಿಯೋಗಿಸಲಾಗದ ರೀತಿಯಲ್ಲಿ ಬರೆಯತಕ್ಕುದು.

**14. ಒಂದು ಸ್ಟಾಂಪಿನ ಮೇಲೆ ಒಂದೇ ಲಿಖಿತ ಇರತಕ್ಕುದು.–** ಶುಲ್ಕವನ್ನು ವಿಧಿಸಬಹುದಾದ ಲಿಖಿತವನ್ನು ಈಗಾಗಲೇ ಬರೆದಿರುವಂಥ ಸ್ಟಾಂಪು ಹಚ್ಚಿದ ಕಾಗದದ ಮೇಲೆ ಶುಲ್ಕವನ್ನು ವಿಧಿಸಬಹುದಾದ ಎರಡನೇ ಲಿಖಿತವನ್ನು ಬರೆಯತಕ್ಕುದಲ್ಲ:

ಪರಂತು, ಈ ಪ್ರಕರಣದಲ್ಲಿ ಇರುವುದು ಯಾವುದೂ, ಯಾವುದೇ ಲಿಖಿತದಿಂದ ಸೃಜಿಸಲಾದ ಅಥವಾ ಪ್ರಕಟವಾಗುವ ಯಾವುದೇ ಹಕ್ಕನ್ನು ವರ್ಗಾಯಿಸುವ ಅಥವಾ ಆ ಮೂಲಕ ಪಡೆದ ಯಾವುದೇ ಹಣದ ಸಂದಾಯವನ್ನು ಅಥವಾ ಒಪ್ಪಿಸಿಕೊಟ್ಟ ಸರಕುಗಳನ್ನು ಸ್ವೀಕರಿಸಿದ ಬಗ್ಗೆ ತಲುಪೊಪ್ಪಿಗೆ ನೀಡುವ ಉದ್ದೇಶಕ್ಕಾಗಿ ಕ್ರಮಬದ್ಧವಾಗಿ ಸ್ಟಾಂಪ್ ಹಚ್ಚಿದ ಅಥವಾ ಶುಲ್ಕವನ್ನು ವಿಧಿಸಿರದ ಯಾವುದೇ ಲಿಖಿತದ ಮೇಲೆ ಆ ಯಾವುದೇ ಹಿಂಬರಹ ಮಾಡುವುದನ್ನು ಪ್ರತಿಬಂಧಿಸತಕ್ಕುದಲ್ಲ.

**15. 13ನೇ ಅಥವಾ 14ನೇ ಪ್ರಕರಣಕ್ಕೆ ವಿರುದ್ಧವಾಗಿ ಬರೆದ ಲಿಖಿತವನ್ನು ಸ್ಟಾಂಪು ಹಾಕದುದೆಂದು ಭಾವಿಸುವುದು.–** 13ನೇ ಅಥವಾ 14ನೇ ಪ್ರಕರಣವನ್ನು ಉಲ್ಲಂಘಿಸಿ ಬರೆದ ಪ್ರತಿಯೊಂದು ಲಿಖಿತವನ್ನು ಸ್ಟಾಂಪು ಹಾಕದ ಲಿಖಿತವೆಂದು ಭಾವಿಸತಕ್ಕುದು.

**16. ಶುಲ್ಕವನ್ನು ಸೂಚಿಸುವುದು.–** ಲಿಖಿತಕ್ಕೆ ವಿಧಿಸಬಹುದಾದಂಥ ಶುಲ್ಕವು, ಅಥವಾ ಶುಲ್ಕದಿಂದ ಅದಕ್ಕೆ ನೀಡಿದ ವಿನಾಯಿತಿಯು, ಇನ್ನೊಂದು ಲಿಖಿತದ ಸಂಬಂಧದಲ್ಲಿ ವಾಸ್ತವಿಕವಾಗಿ ಸಂದಾಯ ಮಾಡಲಾದ ಶುಲ್ಕವನ್ನು ಯಾವುದೇ ರೀತಿಯಲ್ಲಿ ಅವಲಂಬಿಸಿದಲ್ಲಿ, ಈ ಹಿಂದೆ ತಿಳಿಸಲಾದ ಶುಲ್ಕದ ಸಂದಾಯವನ್ನು, ಆ ಉದ್ದೇಶಕ್ಕಾಗಿ ಕಲೆಕ್ಟರನಿಗೆ ಲಿಖಿತದಲ್ಲಿ ಅರ್ಜಿಯನ್ನು ಸಲ್ಲಿಸಿದ್ದರೆ ಮತ್ತು ಆ ಎರಡೂ ಲಿಖಿತಗಳನ್ನು ಹಾಜರ್ಪಡಿಸಿದ್ದರೆ, ಕಲೆಕ್ಟರನು ಸಹಿಮಾಡಿದ ಹಿಂಬರಹದ ಮೂಲಕ ಅಥವಾ ರಾಜ್ಯಸರ್ಕಾರವು, ನಿಯಮದ ಮೂಲಕ ನಿಯಮಿಸಬಹುದಾದಂಥ ಇತರ ರೀತಿಯಲ್ಲಿ (ಯಾವುದಾದರೂ ಇದ್ದರೆ) ಹಾಗೆ ಮೊದಲು ಸೂಚಿಸಿದ ಲಿಖಿತದ ಮೇಲೆ ಸೂಚಿಸತಕ್ಕುದು.

## ಸಿ. ಲಿಖಿತಗಳಿಗೆ ಮುದ್ರೆಯೊತ್ತುವ ಸಮಯ

**17. ಭಾರತದಲ್ಲಿ ಬರೆದುಕೊಟ್ಟ ಲಿಖಿತಗಳು.–** ಶುಲ್ಕವನ್ನು ವಿಧಿಸಬಹುದಾದ ಮತ್ತು ಭಾರತದಲ್ಲಿ ಯಾವನೇ ವ್ಯಕ್ತಿಯು ಬರೆದುಕೊಟ್ಟ ಎಲ್ಲಾ ಲಿಖಿತಗಳಿಗೆ, ಅವುಗಳನ್ನು ಬರೆದುಕೊಡುವುದಕ್ಕೆ ಮುಂಚೆ ಅಥವಾ ಬರೆದು ಕೊಡುವ ಸಮಯದಲ್ಲಿ ಮುದ್ರೆಯೊತ್ತತಕ್ಕುದು.

**18. ಭಾರತದ ಹೊರಗೆ ಬರೆದುಕೊಟ್ಟ ಬಿಲ್ಲುಗಳು ಮತ್ತು ನೋಟುಗಳಿಗೆ ಹೊರತಾದ ಲಿಖಿತಗಳು.–** (1) ಭಾರತದ ಹೊರಗೆ ಮಾತ್ರ ಬರೆದುಕೊಟ್ಟ, ಶುಲ್ಕವನ್ನು ವಿಧಿಸಬಹುದಾದ ಮತ್ತು ವಿನಿಮಯ ಪತ್ರ ಅಥವಾ ಪ್ರಾಮಿಸರಿ ನೋಟು ಆಗಿರದ ಪ್ರತಿಯೊಂದು ಲಿಖಿತಕ್ಕೆ, ಭಾರತದಲ್ಲಿ ಅದನ್ನು ಮೊದಲು ಸ್ವೀಕರಿಸಿದ ತರುವಾಯ ಮೂರು ತಿಂಗಳೊಳಗೆ ಮುದ್ರೆಯೊತ್ತತಕ್ಕುದು.

(2) ಅಂಥ ಯಾವುದೇ ಲಿಖಿತಕ್ಕೆ, ಅದರ ಸಲುವಾಗಿ ನಿಯಮಿಸಲಾದ ಸ್ಟಾಂಪಿನ ವಿವರಣೆಗೆ ಸಂಬಂಧಿಸಿ, ಖಾಸಗಿ ವ್ಯಕ್ತಿಯು ಯುಕ್ತವಾಗಿ ಸ್ಟಾಂಪು ಹಚ್ಚಲು ಸಾಧ್ಯವಾಗದಿದ್ದರೆ, ಅದನ್ನು ಮೂರು ತಿಂಗಳ ಅವಧಿಯೊಳಗೆ ಕಲೆಕ್ಟರನ ಹತ್ತಿರ ತೆಗೆದುಕೊಂಡು ಹೋಗಬಹುದು ಮತ್ತು ಆ ಕಲೆಕ್ಟರನು ಅದಕ್ಕೆ ರಾಜ್ಯಸರ್ಕಾರವು ನಿಯಮದ ಮೂಲಕ ನಿಯಮಿಸಬಹುದಾದಂಥ ರೀತಿಯಲ್ಲಿ, ಅಂಥ ಲಿಖಿತವನ್ನು ತೆಗೆದುಕೊಂಡುಹೋಗುವ ವ್ಯಕ್ತಿಯನ್ನು ಅಗತ್ಯಪಡಿಸಬಹುದಾದಂಥ ಮತ್ತು ಅವನು ಸಂದಾಯ ಮಾಡಬಹುದಾದಂಥ ಮೌಲ್ಯದ ಸ್ಟಾಂಪಿನಿಂದ ಮುದ್ರೆಹಾಕತಕ್ಕುದು.

**19. ಭಾರತದ ಹೊರಗೆ ಬರೆಯಲಾದ ಬಿಲ್ಲುಗಳು ಮತ್ತು ನೋಟುಗಳು.–** ಭಾರತದಲ್ಲಿ, ತಗಾದೆಯ ಮೇಲಲ್ಲದೆ ಸಂದಾಯಮಾಡಬೇಕಾದ ಯಾವುದೇ ವಿನಿಮಯ ಪತ್ರದ ಅಥವಾ ಭಾರತದ ಹೊರಗೆ ಬರೆದುಕೊಟ್ಟ ಅಥವಾ ಮಾಡಲಾದ ಪ್ರಾಮಿಸರಿ ನೋಟಿನ ಪ್ರಥಮಧಾರಕನು, ಅಂಗೀಕಾರಕ್ಕಾಗಿ ಅಥವಾ ಸಂದಾಯಕ್ಕಾಗಿ, ಅಥವಾ ಹಿಂಬರಹ ಮಾಡುವುದಕ್ಕಾಗಿ ಅಥವಾ ವರ್ಗಾಯಿಸುವುದಕ್ಕಾಗಿ ಅದನ್ನು ಹಾಜರುಪಡಿಸುವುದಕ್ಕೆ ಮುಂಚೆ ಅಥವಾ ಭಾರತದಲ್ಲಿ ಅದನ್ನು ಬೇರೆ ರೀತಿಯಲ್ಲಿ ಹಸ್ತಾಂತರಿಸುವುದಕ್ಕೆ ಮುಂಚೆ ಅದಕ್ಕೆ ಯುಕ್ತ ಸ್ಟಾಂಪನ್ನು ಅಂಟಿಸಿ ಅದನ್ನು ರದ್ದುಗೊಳಿಸತಕ್ಕುದು:

ಪರಂತು,–

(ಎ) ಭಾರತದಲ್ಲಿ ಯಾವುದೇ ಅಂಥ ವಿನಿಮಯ ಪತ್ರವು ಅಥವಾ ನೋಟು, ಅದರ ಯಾವನೇ ಧಾರಕನ ಕೈಗೆ ಬಂದ ಸಮಯದಲ್ಲಿ ಅದಕ್ಕೆ ಯುಕ್ತ ಅಂಟಿಕೊಳ್ಳುವ ಸ್ಟಾಂಪನ್ನು ಅಂಟಿಸಿ 12ನೇ ಪ್ರಕರಣದಲ್ಲಿ ನಿಯಮಿಸಲಾದ ರೀತಿಯಲ್ಲಿ ರದ್ದುಗೊಳಿಸಿದಾಗ ಮತ್ತು ಅಂಥ ಧಾರಕನು, ಅಂಥ ಸ್ಟಾಂಪನ್ನು ಈ ಅಧಿನಿಯಮದಿಂದ ಅಗತ್ಯಪಡಿಸಲಾದ ವ್ಯಕ್ತಿಯಲ್ಲದ ಮತ್ತು ಸಮಯಕ್ಕೆ ಹೊರತಾದ ವ್ಯಕ್ತಿಯಿಂದ ಮತ್ತು ಸಮಯದಲ್ಲಿ ಅಂಟಿಸಲಾಗಿದೆ ಅಥವಾ ರದ್ದುಗೊಳಿಸಲಾಗಿದೆ ಎಂದು ನಂಬಲು ಕಾರಣವಿಲ್ಲದಿರುವಲ್ಲಿ, ಅಂಥ ಧಾರಕನಿಗೆ ಸಂಬಂಧಪಡುವಷ್ಟರ ಮಟ್ಟಿಗೆ ಅಂಥ ಸ್ಟಾಂಪನ್ನು, ಕ್ರಮಬದ್ಧವಾಗಿ ಅಂಟಿಸಲಾಗಿದೆ ಮತ್ತು ರದ್ದುಗೊಳಿಸಲಾಗಿದೆ ಎಂದು ಭಾವಿಸತಕ್ಕುದು.

(ಬಿ) ಈ ಪರಂತುಕದಲ್ಲಿರುವುದು ಯಾವುದೂ, ಸ್ಟಾಂಪನ್ನು ಅಂಟಿಸಲು ಅಥವಾ ರದ್ದುಗೊಳಿಸಲು ತಪ್ಪಿದ್ದಕ್ಕಾಗಿ ಯಾವನೇ ವ್ಯಕ್ತಿಯು ಗುರಿಯಾದ ಯಾವುದೇ ದಂಡದಿಂದ ಅವನನ್ನು ಮುಕ್ತಗೊಳಿಸತಕ್ಕುದಲ್ಲ.

## ಡಿ. ಶುಲ್ಕದ ಮೌಲ್ಯ ನಿರ್ಣಯ

**20. ವಿದೇಶಿ ಕರೆನ್ಸಿಗಳಲ್ಲಿ ವ್ಯಕ್ತಪಡಿಸಿದ ಮೊಬಲಗಿನ ಪರಿವರ್ತನೆ.–** (1) ಲಿಖಿತಕ್ಕೆ ಭಾರತದ್ದಲ್ಲದ ಕರೆನ್ಸಿಯಲ್ಲಿ ವ್ಯಕ್ತಪಡಿಸಿದ ಯಾವುದೇ ಹಣದ ಸಂಬಂಧದಲ್ಲಿ ಮೌಲ್ಯಾನುಸಾರ ಶುಲ್ಕವನ್ನು ವಿಧಿಸಬೇಕಾಗಿರುವಲ್ಲಿ, ಅಂಥ ಶುಲ್ಕವನ್ನು, ಲಿಖಿತದ ದಿನಾಂಕದಂದು ವಿನಿಮಯದ ಚಾಲ್ತಿ ದರಕ್ಕೆ ಅನುಸಾರವಾಗಿ ಭಾರತದ ಕರೆನ್ಸಿಯಲ್ಲಿ ಅಂಥ ಹಣದ ಮೌಲ್ಯದ ಮೇಲೆ ಲೆಕ್ಕಹಾಕತಕ್ಕುದು.

(2) ಕೇಂದ್ರ ಸರ್ಕಾರವು, ಕಾಲಕಾಲಕ್ಕೆ, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಸ್ಟಾಂಪು ಶುಲ್ಕವನ್ನು ಲೆಕ್ಕಹಾಕುವ ಉದ್ದೇಶಕ್ಕಾಗಿ, ಬ್ರಿಟೀಷ್ ಅಥವಾ ಯಾವುದೇ ವಿದೇಶಿ ಕರೆನ್ಸಿಯನ್ನು ಭಾರತದ ಕರೆನ್ಸಿಯಾಗಿ ಪರಿವರ್ತಿಸುವುದಕ್ಕಾಗಿ ವಿನಿಮಯ ದರವನ್ನು ನಿಯಮಿಸಬಹುದು ಮತ್ತು ಅಂಥ ದರವನ್ನು, (1)ನೇ ಉಪಪ್ರಕರಣದ ಉದ್ದೇಶಗಳಿಗಾಗಿ ಚಾಲ್ತಿ ದರ ಎಂಬುದಾಗಿ ಭಾವಿಸತಕ್ಕುದು.

**21. ಸ್ಟಾಕು ಮತ್ತು ಮಾರಾಟ ಮಾಡಬಹುದಾದ ಭದ್ರತೆಗಳನ್ನು ಹೇಗೆ ಮೌಲ್ಯನಿರ್ಣಯ ಮಾಡುವುದು.**- ಲಿಖಿತಕ್ಕೆ, ಯಾವುದೇ ಸ್ಟಾಕಿನ ಅಥವಾ ಮಾರಾಟ ಮಾಡಬಹುದಾದ ಅಥವಾ ಇತರ ಯಾವುದೇ ಭದ್ರತೆಯ ಸಂಬಂಧದಲ್ಲಿ ಮೌಲ್ಯಾನುಸಾರ ಶುಲ್ಕವನ್ನು ವಿಧಿಸಬೇಕಾಗಿರುವಲ್ಲಿ, ಅಂಥ ಶುಲ್ಕವನ್ನು, ಲಿಖಿತದ ದಿನಾಂಕದಂದು ಅದರ ಸರಾಸರಿ ಬೆಲೆಗೆ ಅಥವಾ ಮೌಲ್ಯಕ್ಕೆ ಅನುಸಾರವಾಗಿ ಅಂಥ ಸ್ಟಾಕಿನ ಅಥವಾ ಭದ್ರತೆಯ ಮೌಲ್ಯದ ಮೇಲೆ ಲೆಕ್ಕಹಾಕತಕ್ಕುದು.

**22. ವಿನಿಮಯ ದರದ ಅಥವಾ ಸರಾಸರಿ ಬೆಲೆಯ ವಿವರಪತ್ರದ ಪರಿಣಾಮ.**- ಸಂದರ್ಭವು ಅಗತ್ಯಪಡಿಸುವಂತೆ, ಚಾಲ್ತಿ ವಿನಿಮಯ ದರದ ಅಥವಾ ಸರಾಸರಿ ಬೆಲೆಯ ವಿವರಪತ್ರವನ್ನು ಒಳಗೊಂಡ ಲಿಖಿತಕ್ಕೆ, ಅಂಥ ವಿವರಪತ್ರದನುಸಾರ ಸ್ಟಾಂಪನ್ನು ಅಂಟಿಸಿರುವಲ್ಲಿ, ಅಂಥ ವಿವರಪತ್ರದ ವಸ್ತು ವಿಷಯಕ್ಕೆ ಸಂಬಂಧಪಡುವಷ್ಟರಮಟ್ಟಿಗೆ ಅದಕ್ಕೆ ತದ್ವಿರುದ್ಧವಾದುದು ರುಜುವಾತಾಗುವವರೆಗೆ, ಕ್ರಮಬದ್ಧವಾಗಿ ಸ್ಟಾಂಪನ್ನು ಅಂಟಿಸಲಾಗಿದೆ ಎಂಬುದಾಗಿ ಭಾವಿಸತಕ್ಕುದು.

**23. ಬಡ್ಡಿಯ ಬಗ್ಗೆ ವ್ಯವಸ್ಥೆ ಇರುವ ಲಿಖಿತಗಳು.**- ಬಡ್ಡಿಯನ್ನು ಲಿಖಿತದ ನಿಬಂಧನೆಗಳ ಪ್ರಕಾರ ಸ್ಪಷ್ಟವಾಗಿ ಸಂದಾಯ ಮಾಡಬೇಕಾಗಿರುವಲ್ಲಿ, ಅಂಥ ಲಿಖಿತದಲ್ಲಿ ಬಡ್ಡಿಯನ್ನು ನಮೂದಿಸಿರದಿದ್ದರೆ ಅದಕ್ಕೆ ವಿಧಿಸಬಹುದಾಗಿದ್ದ ಶುಲ್ಕಕ್ಕಿಂತ ಹೆಚ್ಚು ಶುಲ್ಕವನ್ನು ವಿಧಿಸತಕ್ಕುದಲ್ಲ.

**23ಎ. ಮಾರಾಟ ಮಾಡಬಹುದಾದ ಭದ್ರತೆಗಳ ಅಡಮಾನಗಳಿಗೆ ಸಂಬಂಧಿಸಿದ ಕೆಲವು ಲಿಖಿತಗಳಿಗೆ, ಒಪ್ಪಂದಗಳಿಗೆ ವಿಧಿಸುವಂತೆ ವಿಧಿಸುವುದು.**- (1) (ಪ್ರಾಮಿಸರಿ ನೋಟು ಅಥವಾ ವಿನಿಮಯ ಪತ್ರವಾಗಿಲ್ಲದ) ಲಿಖಿತಕ್ಕೆ,-

(ಎ) ಅದನ್ನು, ಸಾಲದ ರೂಪದಲ್ಲಿ ಮುಂಗಡವಾಗಿ ಕೊಟ್ಟ ಅಥವಾ ಮುಂಗಡವಾಗಿ ಕೊಡಲಿರುವ ಹಣಕ್ಕೆ ಅಥವಾ ಇರುವ ಅಥವಾ ಮುಂದಿನ ಋಣಕ್ಕೆ ಭದ್ರತೆಯಾಗಿ ಮಾರಾಟ ಮಾಡಬಹುದಾದ ಯಾವುದೇ ಭದ್ರತೆಯ ಠೇವಣಿಯ ಸಂದರ್ಭದಲ್ಲಿ ಕೊಟ್ಟಿರುವಲ್ಲಿ; ಅಥವಾ

(ಬಿ) ಅದು, ಭದ್ರತೆಯಾಗಿ ಉದ್ದೇಶಿತವಾದ ಯಾವುದೇ ಮಾರಾಟಮಾಡಬಹುದಾದ ಯಾವುದೇ ಭದ್ರತೆಯ ಕ್ರಮಬದ್ಧವಾಗಿ ಸ್ಟಾಂಪ್ ಅಂಟಿಸಿದ ವರ್ಗಾವಣೆಯನ್ನು, ವಿಮೋಚನೆ ಯೋಗ್ಯವಾದುದನ್ನಾಗಿ ಮಾಡುವ ಅಥವಾ ನಿರೂಪಿಸುವಲ್ಲಿ

- Iನೇ ಅನುಸೂಚಿಯ 5(ಸಿ) ಅನುಚ್ಛೇದದ ಮೇರೆಗೆ ಶುಲ್ಕವನ್ನು ವಿಧಿಸಬಹುದಾದ ಒಪ್ಪಂದವಾಗಿದ್ದರೆ ಅಥವಾ ಒಪ್ಪಂದದ ಜ್ಞಾಪನಪತ್ರವಾಗಿದ್ದರೆ ಹೇಗೋ ಹಾಗೆ ಶುಲ್ಕವನ್ನು ವಿಧಿಸತಕ್ಕುದು.

(2) ಯಾವುದೇ ಅಂಥ ಲಿಖಿತದ ಬಿಡುಗಡೆಗೆ ಅಥವಾ ವಿಮೋಚನೆಗೆ ಅಂಥಹುದೇ ಶುಲ್ಕವನ್ನು ಮಾತ್ರ ವಿಧಿಸತಕ್ಕುದು.

**24. ಋಣಕ್ಕೆ ಪ್ರತಿಫಲವಾಗಿ ಅಥವಾ ಮುಂದಿನ ಸಂದಾಯ ಇತ್ಯಾದಿಗಳಿಗೆ ಒಳಪಟ್ಟ ವರ್ಗಾವಣೆಗೆ ವಿಧಿಸುವ ಬಗೆ.**- ಯಾವುದೇ ಸ್ವತ್ತನ್ನು, ಯಾವನೇ ವ್ಯಕ್ತಿಗೆ ಸಲ್ಲತಕ್ಕ ಯಾವುದೇ ಋಣದ ಪೂರ್ಣ ಅಥವಾ ಭಾಗಶಃ ಪ್ರತಿಫಲವಾಗಿ ಅಥವಾ ಸ್ವತ್ತಿನ ಮೇಲೆ ಭಾರವಾಗಿ ಅಥವಾ ಪೂರ್ವಾಧಿಯಾಗಿ ಇರುವ ಅಥವಾ ಆಗುವ ಅಥವಾ ಇಲ್ಲದಿರುವ ಅಥವಾ ಆಗದಿರುವ ಯಾವುದೇ ಹಣದ ಅಥವಾ

ಸ್ಟಾಕಿನ ಸಂದಾಯಕ್ಕೆ ಅಥವಾ ವರ್ಗಾವಣೆಗೆ ನಿಶ್ಚಿತವಾಗಿ ಅಥವಾ ಸಂಭಾವ್ಯವಾಗಿ ಒಳಪಟ್ಟು ಅವನಿಗೆ ವರ್ಗಾಯಿಸಿರುವಲ್ಲಿ, ಅಂಥ ಋಣವನ್ನು, ಹಣವನ್ನು ಅಥವಾ ಸ್ಟಾಕನ್ನು, ಯಾವ ಪ್ರತಿಫಲಕ್ಕೆ ಸಂಬಂಧಿಸಿ ವರ್ಗಾವಣೆಗೆ ಮೌಲ್ಯಾನುಸಾರ ಶುಲ್ಕವನ್ನು ವಿಧಿಸಬೇಕೋ ಆ ಪ್ರತಿಫಲದ ಸಂದರ್ಭಾನುಸಾರ ಪೂರ್ಣ ಅಥವಾ ಭಾಗ ಎಂದು ಭಾವಿಸತಕ್ಕದು:

ಪರಂತು, ಈ ಪ್ರಕರಣದಲ್ಲಿರುವುದು ಯಾವುದೂ, Iನೇ ಅನುಸೂಚಿಯ 18ನೇ ಅನುಚ್ಛೇದದಲ್ಲಿ ನಮೂದಿಸಿದ ಯಾವುದೇ ಅಂಥ ಮಾರಾಟದ ಪ್ರಮಾಣಪತ್ರಕ್ಕೆ ಅನ್ವಯವಾಗತಕ್ಕುದಲ್ಲ.

**ವಿವರಣೆ:–** ಅಡಮಾನಕ್ಕೆ ಅಥವಾ ಇತರ ಪೂರ್ವಾಧಿಗೆ ಒಳಪಟ್ಟು, ಸ್ವತ್ತಿನ ಮಾರಾಟದ ಸಂದರ್ಭದಲ್ಲಿ, ಯಾವುದೇ ಸಂದಾಯವಾಗದ ಅಡಮಾನದ ಹಣವನ್ನು ಅಥವಾ ವಿಧಿಸಲಾದ ಹಣವನ್ನು, ಅದರ ಮೇಲೆ ಸಲ್ಲತಕ್ಕ ಬಡ್ಡಿ (ಯಾವುದಾದರೂ ಇದ್ದರೆ)ಯೊಂದಿಗೆ ಮಾರಾಟದ ಪ್ರತಿಫಲದ ಭಾಗ ಎಂಬುದಾಗಿ ಭಾವಿಸತಕ್ಕುದು:

ಪರಂತು, ಅಡಮಾನಕ್ಕೆ ಒಳಪಟ್ಟ ಸ್ವತ್ತನ್ನು, ಅಡಮಾನ ಪಡೆದವನಿಗೆ ವರ್ಗಾಯಿಸಿರುವಲ್ಲಿ, ಅವನು ವರ್ಗಾವಣೆಯ ಮೇಲೆ ಸಂದಾಯವಾಗಬೇಕಾದ ಶುಲ್ಕದಿಂದ, ಅಡಮಾನದ ಸಂಬಂಧದಲ್ಲಿ ಈಗಾಗಲೇ ಸಂದಾಯ ಮಾಡಿದ ಯಾವುದೇ ಶುಲ್ಕದ ಮೊಬಲಗನ್ನು ವಜಾಮಾಡಿಕೊಳ್ಳಲು ಹಕ್ಕುಳ್ಳವನಾಗಿರತಕ್ಕುದು.

**ದೃಷ್ಟಾಂತಗಳು**

(1) 'ಎ' ಎಂಬವನು 'ಬಿ' ಎಂಬವನಿಗೆ 1,000 ರೂಪಾಯಿ ಋಣ ಸಂದಾಯ ಮಾಡಬೇಕಾಗಿರುತ್ತದೆ. 'ಎ' ಎಂಬವನು 'ಬಿ' ಎಂಬವನಿಗೆ ಸ್ವತ್ತನ್ನು ಮಾರುತ್ತಾನೆ. ಅದರ ಪ್ರತಿಫಲವೆಂದರೆ 500 ರೂಪಾಯಿ ಮತ್ತು ಹಿಂದಿನ 1,000 ರೂಪಾಯಿ ಋಣದಿಂದ ಬಿಡುಗಡೆ. ಸ್ಟಾಂಪು ಸುಂಕವನ್ನು 1,500 ರೂಪಾಯಿಯ ಮೇಲೆ ಸಂದಾಯ ಮಾಡಬೇಕಾಗುತ್ತದೆ.

(2) 'ಎ' ಎಂಬವನು 'ಬಿ' ಎಂಬವನಿಗೆ 5,000 ರೂಪಾಯಿಗೆ ಸ್ವತ್ತನ್ನು ಮಾರುತ್ತಾನೆ. ಆ ಸ್ವತ್ತು 1,000 ರೂಪಾಯಿಗೆ 'ಸಿ' ಎಂಬವನಿಗೆ ಬರೆದುಕೊಟ್ಟ ಅಡಮಾನಕ್ಕೆ ಒಳಪಟ್ಟಿದ್ದು, 200 ರೂಪಾಯಿ ಬಡ್ಡಿಯ ಸಂದಾಯ ಬಾಕಿಯಿರುತ್ತದೆ. ಸ್ಟಾಂಪು ಶುಲ್ಕವನ್ನು 1,700 ರೂಪಾಯಿಯ ಮೇಲೆ ಸಂದಾಯ ಮಾಡಬೇಕಾಗುತ್ತದೆ.

(3) 'ಎ' ಎಂಬವನು 10,000 ರೂಪಾಯಿ ಮೌಲ್ಯದ ಒಂದು ಮನೆಯನ್ನು 'ಬಿ' ಎಂಬವನಿಗೆ 5,000 ರೂಪಾಯಿಗೆ ಅಡಮಾನ ಮಾಡುತ್ತಾನೆ. ಆ ತರುವಾಯ 'ಬಿ' ಎಂಬವನು 'ಎ' ಎಂಬವನಿಂದ ಆ ಮನೆಯನ್ನು ಕೊಂಡುಕೊಳ್ಳುತ್ತಾನೆ. ಸ್ಟಾಂಪು ಶುಲ್ಕವನ್ನು, ಅಡಮಾನಕ್ಕಾಗಿ ಈಗಾಗಲೇ ಸಂದಾಯ ಮಾಡಿದ ಸ್ಟಾಂಪು ಶುಲ್ಕದ ಮೊಬಲಗನ್ನು ಕಳೆದು 10,000 ರೂಪಾಯಿಯ ಮೇಲೆ ಸಂದಾಯ ಮಾಡಬೇಕಾಗುತ್ತದೆ.

**25. ವರ್ಷಾಶನ ಇತ್ಯಾದಿಗಳ ಸಂದರ್ಭದಲ್ಲಿ ಮೌಲ್ಯನಿರ್ಣಯ:–** ವರ್ಷಾಶನದ ಅಥವಾ ನಿಯತಕಾಲಿಕವಾಗಿ ಸಂದಾಯವಾಗಬೇಕಾದ ಇತರ ಮೊತ್ತದ ಸಂದಾಯವನ್ನು ಸುನಿಶ್ಚಿತಗೊಳಿಸಲು ಲಿಖಿತವನ್ನು ಬರೆದುಕೊಟ್ಟಿರುವಲ್ಲಿ ಅಥವಾ ಹಸ್ತಾಂತರಣಕ್ಕೆ ಪ್ರತಿಫಲವು ವರ್ಷಾಶನ ಅಥವಾ ನಿಯತಕಾಲಿಕವಾಗಿ ಸಂದಾಯವಾಗತಕ್ಕ ಇತರ ಮೊತ್ತವಾಗಿರುವಲ್ಲಿ, ಸಂದರ್ಭಾನುಸಾರ, ಅಂಥ ಲಿಖಿತದ ಮೂಲಕ ಸುನಿಶ್ಚಿತಗೊಳಿಸಿದ ಮೊಬಲಗು ಅಥವಾ ಅಂಥ ಹಸ್ತಾಂತರಣದ ಪ್ರತಿಫಲವು, ಈ ಅಧಿನಿಯಮದ ಉದ್ದೇಶಗಳಿಗಾಗಿ,–

(ಎ) ಸಂದಾಯವಾಗಬೇಕಾದ ಒಟ್ಟು ಮೊಬಲಗನ್ನು ಈ ಹಿಂದೆಯೇ ಖಚಿತಪಡಿಸಿಕೊಳ್ಳುವ ಹಾಗೆ ಮೊತ್ತವನ್ನು ನಿಶ್ಚಿತ ಅವಧಿಗಾಗಿ ಸಂದಾಯ ಮಾಡಬೇಕಾಗಿರುವಲ್ಲಿ ಅಂಥ ಒಟ್ಟು ಮೊಬಲಗು;

(ಬಿ) ಆ ಮೊತ್ತವು, ಶಾಶ್ವತವಾಗಿ ಅಥವಾ ಅಂಥ ಲಿಖಿತದ ಅಥವಾ ಹಸ್ತಾಂತರಣದ ದಿನಾಂಕದಂದು ಇದ್ದ ಯಾವುದೇ ಜೀವಿತದೊಂದಿಗೆ ಮುಕ್ತಾಯಗೊಳ್ಳದ ಅನಿರ್ದಿಷ್ಟ ಅವಧಿಯವರೆಗೆ ಸಂದಾಯವಾಗಬೇಕಾಗಿರುವಲ್ಲಿ- ಅಂಥ ಲಿಖಿತದ ಅಥವಾ ಹಸ್ತಾಂತರಣದ ನಿಬಂಧನೆಗಳಿಗನುಸಾರವಾಗಿ, ಮೊದಲನೇ ಸಂದಾಯವು ಬಾಕಿಯಾಗುವ ದಿನಾಂಕದಿಂದ ಲೆಕ್ಕ ಹಾಕಿದ ಇಪ್ಪತ್ತು ವರ್ಷಗಳ ಅವಧಿಯಲ್ಲಿ ಸಂದಾಯವಾಗಬಹುದಾದ ಅಥವಾ ಸಂದಾಯವಾಗತಕ್ಕ ಒಟ್ಟು ಮೊಬಲಗು; ಮತ್ತು

(ಸಿ) ಆ ಮೊತ್ತವು, ಅಂಥ ಲಿಖಿತದ ಅಥವಾ ಹಸ್ತಾಂತರಣದ ದಿನಾಂಕದಂದು ಇದ್ದ ಯಾವುದೇ ಜೀವಿತದೊಂದಿಗೆ ಮುಕ್ತಾಯಗೊಳ್ಳುವ ಅನಿರ್ದಿಷ್ಟ ಕಾಲದವರೆಗೆ ಸಂದಾಯವಾಗಬೇಕಾಗಿರುವಲ್ಲಿ - ಮೊದಲನೇ ಸಂದಾಯವು ಬಾಕಿಯಾದ ದಿನಾಂಕದಿಂದ ಲೆಕ್ಕಹಾಕಿದ ಹನ್ನೆರಡು ವರ್ಷಗಳ ಅವಧಿಯಲ್ಲಿ ಮೇಲೆ ಹೇಳಿದಂತೆ ಸಂದಾಯವಾಗಬಹುದಾದ ಅಥವಾ ಸಂದಾಯವಾಗತಕ್ಕ ಗರಿಷ್ಠ ಮೊಬಲಗು

- ಎಂದು ಭಾವಿಸತಕ್ಕುದು.

**26. ವಸ್ತು ವಿಷಯದ ಮೌಲ್ಯವು ಅನಿರ್ಧಾರಿತವಾಗಿರುವಲ್ಲಿ ಸ್ಟಾಂಪು.**- ಮೌಲ್ಯಾನುಸಾರ ಶುಲ್ಕವನ್ನು ವಿಧಿಸಬಹುದಾದ ಯಾವುದೇ ಲಿಖಿತದ ವಸ್ತು ವಿಷಯದ ಮೊಬಲಗನ್ನು ಅಥವಾ ಮೌಲ್ಯವನ್ನು, (ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ಬರೆದುಕೊಟ್ಟ ಲಿಖಿತದ ಸಂದರ್ಭದಲ್ಲಿ) ಅದನ್ನು ಬರೆದುಕೊಟ್ಟ ಅಥವಾ ಮೊದಲು ಬರೆದುಕೊಟ್ಟ ದಿನಾಂಕದಂದು ಖಚಿತಪಡಿಸಿಕೊಳ್ಳುವುದು ಸಾಧ್ಯವಿರದಿದ್ದರೆ ಅಥವಾ ಸಾಧ್ಯವಾಗಿರದಿದ್ದರೆ, ಹಾಗೆ ಬರೆದುಕೊಟ್ಟ ದಿನಾಂಕದಂದು ಅದೇ ಬಗೆಯ ಲಿಖಿತದಲ್ಲಿ ವಾಸ್ತವವಾಗಿ ಬಳಸಿದ ಸ್ಟಾಂಪು ಪರ್ಯಾಪ್ತವಾಗಬಹುದಾಗಿತ್ತೋ ಅದರಲ್ಲಿ ಹಾಗೆ ಹೇಳಿದಂಥ ಮೌಲ್ಯದ ಅತ್ಯಧಿಕ ಮೊಬಲಗಿಗಿಂತ ಹೆಚ್ಚಿಗೆಯಾಗಿ ಅಂಥ ಲಿಖಿತದ ಮೇರೆಗೆ ಎಷ್ಟನ್ನೂ ಕ್ಲೇಮು ಮಾಡತಕ್ಕುದಲ್ಲ:

ಪರಂತು, ರಾಯಲ್ಟಿ ಅಥವಾ ಉತ್ಪನ್ನದ ಷೇರನ್ನು, ಬಾಡಿಗೆಯಾಗಿ ಅಥವಾ ಬಾಡಿಗೆಯ ಭಾಗವಾಗಿ ಸ್ವೀಕರಿಸಿರುವ ಗಣಿಯ ಗುತ್ತಿಗೆಯ ಸಂದರ್ಭದಲ್ಲಿ-

(ಎ) ಗುತ್ತಿಗೆಯನ್ನು ಕಲೆಕ್ಟರನು, ಪ್ರಕರಣದ ಎಲ್ಲಾ ಪರಿಸ್ಥಿತಿಗಳನ್ನು ಅನುಲಕ್ಷಿಸಿ, ಗುತ್ತಿಗೆಯ ಮೇರೆಗೆ ಸರ್ಕಾರಕ್ಕೆ ರಾಯಲ್ಟಿ ಅಥವಾ ಷೇರಿನ ರೂಪದಲ್ಲಿ ಸಂದಾಯವಾಗಬಹುದೆಂದು ಅಂದಾಜು ಮಾಡಿರಬಹುದಾದಂಥ ಮೊಬಲಗಿನ ಅಥವಾ ಮೌಲ್ಯದ ಮೇಲೆ ಸರ್ಕಾರವು ಅಥವಾ ಅದರ ಪರವಾಗಿ ಕೊಟ್ಟಿರುವಾಗ, ಅಥವಾ

(ಬಿ) ಗುತ್ತಿಗೆಯನ್ನು, ಒಂದು ವರ್ಷಕ್ಕೆ ಇಪ್ಪತ್ತು ಸಾವಿರ ರೂಪಾಯಿ ಮೇಲೆ ಯಾವನೇ ಇತರ ವ್ಯಕ್ತಿಯು ಕೊಟ್ಟಿರುವಾಗ

- ಸ್ಟಾಂಪು ಶುಲ್ಕದ ಉದ್ದೇಶಕ್ಕಾಗಿ ಅಂಥ ರಾಯಲ್ಟಿಯನ್ನು ಅಥವಾ ಅಂಥ ಷೇರಿನ ಮೌಲ್ಯವನ್ನು ಅಂದಾಜು ಮಾಡಿರುವುದು ಸಾಕಷ್ಟಾಗಿರತಕ್ಕುದು ಮತ್ತು ಅಂಥ ರಾಯಲ್ಟಿಯ ಅಥವಾ ಷೇರಿನ ಇಡೀ ಮೊಬಲಗು ಏನೇ ಇದ್ದರೂ, ಅಂಥ ಗುತ್ತಿಗೆ ಮೇರೆಗೆ ಕ್ಲೇಮು ಮಾಡತಕ್ಕುದು:

ಮತ್ತೂ ಪರಂತು, 31ನೇ ಅಥವಾ 41ನೇ ಪ್ರಕರಣದ ಮೇರೆಗೆ ಲಿಖಿತದ ಸಂಬಂಧದಲ್ಲಿ ವ್ಯವಹರಣೆಗಳನ್ನು ಕೈಗೊಂಡಿರುವಲ್ಲಿ, ಕಲೆಕ್ಟರನು ಪ್ರಮಾಣೀಕರಿಸಿದ ಮೊಬಲಗನ್ನು, ಬರೆದುಕೊಟ್ಟ ದಿನಾಂಕದಂದು ವಾಸ್ತವಿಕವಾಗಿ ಬಳಸಿದ ಸ್ಟಾಂಪು ಎಂದು ಭಾವಿಸತಕ್ಕುದು.

**27. ಲಿಖಿತದಲ್ಲಿ ನಿರೂಪಿಸತಕ್ಕ ಶುಲ್ಕದ ಮೇಲೆ ಪರಿಣಾಮ ಬೀರುವ ಸಂಗತಿಗಳು.-** ಯಾವುದೇ ಲಿಖಿತದ ಪ್ರತಿಫಲಕ್ಕೆ (ಏನಾದರೂ ಇದ್ದರೆ) ಮತ್ತು ಆ ಲಿಖಿತಕ್ಕೆ ಶುಲ್ಕ ವಿಧಿಸುವುದರ ಮೇಲೆ ಪರಿಣಾಮ ಬೀರುವ ಇತರ ಎಲ್ಲಾ ಸಂಗತಿಗಳನ್ನು ಮತ್ತು ಪರಿಸ್ಥಿತಿಗಳನ್ನು ಅಥವಾ ಅದಕ್ಕೆ ವಿಧಿಸಬಹುದಾದ ಶುಲ್ಕದ ಮೊಬಲಗನ್ನು ಅದರಲ್ಲಿ ಪೂರ್ಣವಾಗಿ ಮತ್ತು ನಿಜವಾಗಿ ನಿರೂಪಿಸಿರತಕ್ಕುದು.

**28. ಕೆಲವು ಹಸ್ತಾಂತರಣಗಳ ಸಂದರ್ಭಗಳಲ್ಲಿ ಶುಲ್ಕದ ಬಗ್ಗೆ ನಿರ್ದೇಶನ.-** (1) ಯಾವುದೇ ಸ್ವತ್ತನ್ನು ಪೂರ್ತಿಯಾಗಿ ಒಂದು ಪ್ರತಿಫಲಕ್ಕೆ ಮಾರಾಟ ಮಾಡಲು ಕರಾರು ಮಾಡಿಕೊಂಡಿರುವಲ್ಲಿ, ಮತ್ತು ಅದನ್ನು ಬೇರೆ ಬೇರೆ ಲಿಖಿತಗಳ ಮೂಲಕ ಪ್ರತ್ಯೇಕ ಭಾಗಗಳಲ್ಲಿ ಖರೀದಿದಾರನಿಗೆ ಹಸ್ತಾಂತರಣ ಮಾಡಿರುವಲ್ಲಿ ಆ ಪ್ರತಿಫಲವನ್ನು ಪಕ್ಷಕಾರರು ಸೂಕ್ತವೆಂದು ಭಾವಿಸುವಂಥ ರೀತಿಯಲ್ಲಿ ಹಂಚಿಕೆ ಮಾಡತಕ್ಕುದು, ಪರಂತು, ಪ್ರತಿಯೊಂದು ಪ್ರತ್ಯೇಕ ಭಾಗಕ್ಕಾಗಿ ವಿಭಿನ್ನ ಪ್ರತಿಫಲವನ್ನು ಅದಕ್ಕೆ ಸಂಬಂಧಿಸಿದ ಹಸ್ತಾಂತರಣದಲ್ಲಿ ನಿರೂಪಿಸಿರಬೇಕು ಮತ್ತು ಅಂಥ ಹಸ್ತಾಂತರಣಕ್ಕೆ ಅಂಥ ವಿಭಿನ್ನ ಪ್ರತಿಫಲದ ಸಂಬಂಧದಲ್ಲಿ ಮೌಲ್ಯಾನುಸಾರ ಶುಲ್ಕವನ್ನು ವಿಧಿಸತಕ್ಕುದು.

(2) ಪೂರ್ತಿಯಾಗಿ ಒಂದು ಪ್ರತಿಫಲಕ್ಕಾಗಿ ಇಬ್ಬರು ಅಥವಾ ಹೆಚ್ಚು ವ್ಯಕ್ತಿಗಳು ಜಂಟಿಯಾಗಿ, ಅಥವಾ ಯಾವನೇ ವ್ಯಕ್ತಿಯು ತನಗಾಗಿ ಮತ್ತು ಇತರರಿಗಾಗಿ ಅಥವಾ ಸಂಪೂರ್ಣವಾಗಿ ಇತರರಿಗಾಗಿ ಖರೀದಿಸಲು ಕರಾರು ಮಾಡಿಕೊಂಡ ಸ್ವತ್ತನ್ನು, ಪ್ರತಿಫಲದ ವಿಭಿನ್ನ ಭಾಗಗಳಿಗಾಗಿ ಪ್ರತ್ಯೇಕ ಲಿಖಿತಗಳ ಮೂಲಕ ಭಾಗಗಳಲ್ಲಿ ಅದನ್ನು ಖರೀದಿಸಿದ ವ್ಯಕ್ತಿಗಳಿಗೆ ಅಥವಾ ಯಾರಿಗಾಗಿ ಅದನ್ನು ಖರೀದಿಸಲಾಯಿತೋ ಅವರಿಗೆ ಹಸ್ತಾಂತರ ಮಾಡಿರುವಲ್ಲಿ, ಪ್ರತಿಯೊಂದು ಪ್ರತ್ಯೇಕ ಭಾಗದ ಹಸ್ತಾಂತರಣಕ್ಕೆ ಅದರಲ್ಲಿ ನಿರ್ದಿಷ್ಟಪಡಿಸಿದ ಪ್ರತಿಫಲದ ವಿಭಿನ್ನ ಭಾಗದ ಸಂಬಂಧದಲ್ಲಿ ಮೌಲ್ಯಾನುಸಾರ ಶುಲ್ಕವನ್ನು ವಿಧಿಸತಕ್ಕುದು.

(3) ಒಬ್ಬ ವ್ಯಕ್ತಿಯು, ಯಾವುದೇ ಸ್ವತ್ತನ್ನು ಖರೀದಿಸಲು ಕರಾರುಮಾಡಿಕೊಂಡು, ಆದರೆ ಅದರ ಹಸ್ತಾಂತರಣವನ್ನು ಪಡೆದುಕೊಳ್ಳದೆ ಇತರ ಯಾವನೇ ವ್ಯಕ್ತಿಗೆ ಅದನ್ನು ಮಾರಾಟ ಮಾಡಲು ಕರಾರು ಮಾಡಿಕೊಂಡಿದ್ದು, ಅದರ ಪರಿಣಾಮವಾಗಿ ಆ ಸ್ವತ್ತನ್ನು ಒಳಖರೀದಿದಾರನಿಗೆ ಕೂಡಲೇ ಹಸ್ತಾಂತರಣ ಮಾಡಿರುವಲ್ಲಿ ಆ ಹಸ್ತಾಂತರಣಕ್ಕೆ, ಮೂಲ ಖರೀದಿದಾರನಿಂದ ಒಳಖರೀದಿದಾರನಿಗೆ ಮಾಡಲಾದ ಮಾರಾಟದ ಪ್ರತಿಫಲದ ಸಂಬಂಧದಲ್ಲಿ ಮೌಲ್ಯಾನುಸಾರ ಶುಲ್ಕವನ್ನು ವಿಧಿಸತಕ್ಕುದು.

(4) ಒಬ್ಬ ವ್ಯಕ್ತಿಯು, ಯಾವುದೇ ಸ್ವತ್ತನ್ನು ಖರೀದಿಸಲು ಕರಾರು ಮಾಡಿಕೊಂಡು, ಆದರೆ ಅದರ ಹಸ್ತಾಂತರಣವನ್ನು ಪಡೆದುಕೊಳ್ಳದೆ, ಇತರ ಯಾವನೇ ವ್ಯಕ್ತಿಗೆ ಅಥವಾ ಯಾರೇ ವ್ಯಕ್ತಿಗಳಿಗೆ ಇಡೀ ಸ್ವತ್ತನ್ನು ಅಥವಾ ಅದರ ಯಾವುದೇ ಭಾಗವನ್ನು ಮಾರಾಟ ಮಾಡಲು ಕರಾರು ಮಾಡಿಕೊಂಡಿದ್ದು, ಅದರ ಪರಿಣಾಮವಾಗಿ ಆ ಸ್ವತ್ತನ್ನು ಮೂಲ ಮಾರಾಟಗಾರನಿಂದ ಬೇರೆ ಬೇರೆ ವ್ಯಕ್ತಿಗಳಿಗೆ ಭಾಗಗಳಲ್ಲಿ ಹಸ್ತಾಂತರ ಮಾಡಿರುವಲ್ಲಿ, ಒಳಖರೀದಿದಾರನಿಗೆ ಮಾರಾಟ ಮಾಡಿದ ಪ್ರತಿಯೊಂದು ಭಾಗದ ಹಸ್ತಾಂತರಣಕ್ಕೆ ಮೂಲ ಪ್ರತಿಫಲದ ಮೊಬಲಗನ್ನು ಅಥವಾ ಮೌಲ್ಯವನ್ನು ಗಮನಕ್ಕೆ ತೆಗೆದುಕೊಳ್ಳದೆ, ಅಂಥ ಒಳಖರೀದಿದಾರನು ಸಂದಾಯ ಮಾಡಿದ ಪ್ರತಿಫಲದ ಸಂಬಂಧದಲ್ಲಿ ಮಾತ್ರವೇ ಮೌಲ್ಯಾನುಸಾರ ಶುಲ್ಕವನ್ನು ವಿಧಿಸತಕ್ಕುದು ಮತ್ತು ಮೂಲ ಖರೀದಿದಾರನಿಗೆ ಮಾಡಲಾದ ಅಂಥ ಸ್ವತ್ತಿನ ಉಳಿದಭಾಗದ (ಯಾವುದಾದರೂ ಇದ್ದರೆ) ಹಸ್ತಾಂತರಣಕ್ಕೆ ಒಳಖರೀದಿದಾರನು ಸಂದಾಯ ಮಾಡಿದ ಪ್ರತಿಫಲಗಳ ಒಟ್ಟು ಮೊತ್ತಗಳ ಮೇಲೆ ಮೂಲ ಪ್ರತಿಫಲದ ಹೆಚ್ಚುವರಿಯ ಸಂಬಂಧದಲ್ಲಿ ಮಾತ್ರವೇ ಮೌಲ್ಯಾನುಸಾರ ಶುಲ್ಕವನ್ನು ವಿಧಿಸತಕ್ಕುದು:

ಪರಂತು, ಕೊನೆಯಲ್ಲಿ ನಮೂದಿಸಿದ ಹಸ್ತಾಂತರಣದ ಮೇಲಣ ಶುಲ್ಕವು ಯಾವ ಸಂದರ್ಭದಲ್ಲಿಯೂ ಒಂದು ರೂಪಾಯಿಗಿಂತ ಕಡಿಮೆಯಾಗಿರತಕ್ಕುದಲ್ಲ.

(5) ಒಳ ಖರೀದಿದಾರನು, ತಾನು ಸಂದಾಯಮಾಡಿದ ಪ್ರತಿಫಲದ ಸಂಬಂಧದಲ್ಲಿ ಮೌಲ್ಯಾನುಸಾರ ಶುಲ್ಕವನ್ನು ವಿಧಿಸಬೇಕಾಗಿರುವ, ತನಗೆ ಆ ಕೂಡಲೇ ಮಾರಾಟ ಮಾಡುವ ವ್ಯಕ್ತಿಯ ವಾಸ್ತವಿಕ ಹಸ್ತಾಂತರಣವನ್ನು ಪಡೆದಿರುವಲ್ಲಿ ಮತ್ತು ಅದಕ್ಕೆ ತದನುಸಾರವಾಗಿ ಯುಕ್ತ ಸ್ಟಾಂಪನ್ನು ಹಚ್ಚಿರುವಲ್ಲಿ ಮೂಲ ಮಾರಾಟಗಾರನು ಆ ತರುವಾಯ ಅವನಿಗೆ ಮಾಡುವ ಅದೇ ಸ್ವತ್ತಿನ ಹಸ್ತಾಂತರಣಕ್ಕೆ ಅಂಥ ಮೂಲ ಮಾರಾಟಗಾರನು ಪಡೆದ ಪ್ರತಿಫಲದ ಹಸ್ತಾಂತರಣದ ಮೇಲೆ ವಿಧಿಸಬಹುದಾದ ಶುಲ್ಕಕ್ಕೆ ಸಮನಾದ ಶುಲ್ಕವನ್ನು, ಅಥವಾ ಅಂಥ ಶುಲ್ಕವು ಐದು ರೂಪಾಯಿಯನ್ನು ಮೀರುವಲ್ಲಿ ಐದು ರೂಪಾಯಿಯ ಶುಲ್ಕವನ್ನು ವಿಧಿಸತಕ್ಕುದು.

### ಇ – ಶುಲ್ಕವನ್ನು ಯಾರು ಸಂದಾಯ ಮಾಡುವುದು

**29. ಶುಲ್ಕಗಳನ್ನು ಯಾರು ಸಂದಾಯ ಮಾಡುವುದು.**–ತದ್ವಿರುದ್ಧವಾದ ಒಪ್ಪಂದವು ಇಲ್ಲದಿರುವಲ್ಲಿ ಯುಕ್ತ ಸ್ಟಾಂಪನ್ನು ಒದಗಿಸುವ ಖರ್ಚನ್ನು,–

(ಎ) 1ನೇ ಅನುಸೂಚಿಯ ಕೆಳಕಂಡ ಅನುಚ್ಛೇದಗಳ ಪೈಕಿ ಯಾವುದೇ ಅನುಚ್ಛೇದದಲ್ಲಿ ವಿವರಿಸಿರುವ ಯಾವುದೇ ಲಿಖಿತದ ಸಂಬಂಧದಲ್ಲಿ, ಎಂದರೆ:–

ಸಂಖ್ಯೆ 2 (ಆಡಳಿತ ಬಂಧಪತ್ರ)

ಸಂಖ್ಯೆ 6 (ಸ್ವಾಮ್ಯ ಪತ್ರಗಳ ಠೇವಣಿ, ಗಿರವಿ ಅಥವಾ ಒತ್ತೆಗೆ ಸಂಬಂಧಿಸಿದ ಒಪ್ಪಂದ)

ಸಂಖ್ಯೆ 13 (ವಿನಿಮಯ ಪತ್ರ)

ಸಂಖ್ಯೆ 15 (ಬಂಧಪತ್ರ)

ಸಂಖ್ಯೆ 16 (ನೌಕಾ ಬಂಧಪತ್ರ)

ಸಂಖ್ಯೆ 26 (ಸೀಮಾಸುಂಕ ಬಂಧಪತ್ರ)

ಸಂಖ್ಯೆ 27 (ಡಿಬೆಂಚರು)

ಸಂಖ್ಯೆ 32 (ಇನ್ನಷ್ಟು ಭಾರ)

ಸಂಖ್ಯೆ 34 (ನಷ್ಟಭರ್ತಿ ಬಂಧಪತ್ರ)

ಸಂಖ್ಯೆ 40 (ಅಡಮಾನ ಪತ್ರ)

ಸಂಖ್ಯೆ 49 (ಪ್ರಾಮಿಸರಿ ನೋಟು)

ಸಂಖ್ಯೆ 55 (ಬಿಡುಗಡೆ)

ಸಂಖ್ಯೆ 56 (ನೌಕಾ ಸರಕು ಬಂಧಪತ್ರ)

ಸಂಖ್ಯೆ 57 (ಭದ್ರತಾ ಪತ್ರ ಅಥವಾ ಅಡಮಾನ ಪತ್ರ)

ಸಂಖ್ಯೆ 58 (ವ್ಯವಸ್ಥಾ ಪತ್ರ)

ಸಂಖ್ಯೆ 62 (ಎ) (ಒಂದು ನಿಗಮಿತ ಕಂಪನಿ ಅಥವಾ ಇತರ ನಿಗಮಿತ ನಿಕಾಯದಲ್ಲಿ ಷೇರುಗಳ ವರ್ಗಾವಣೆ)

ಸಂಖ್ಯೆ 62 (ಬಿ): (8ನೇ ಪ್ರಕರಣದಿಂದ ಉಪಬಂಧಿತವಾದ ಡಿಬೆಂಚರುಗಳನ್ನು ಹೊರತುಪಡಿಸಿ, ಬೆಂಚರುಗಳು ಶುಲ್ಕಕ್ಕೆ ಗುರಿಯಾಗಬೇಕಾಗಿರಲಿ ಅಥವಾ ಇಲ್ಲದಿರಲಿ ಮಾರಾಟಮಾಡಬಹುದಾದ ಭದ್ರತೆಗಳಾಗಿರತಕ್ಕ ಡಿಬೆಂಚರುಗಳ ವರ್ಗಾವಣೆ)

ಸಂಖ್ಯೆ 62 (ಸಿ) (ಬಂಧಪತ್ರ, ಅಡಮಾನಪತ್ರ ಅಥವಾ ವಿಮಾ ಪಾಲಿಸಿಯಿಂದ ಪಡೆಯಲಾದ ಯಾವುದೇ ಹಿತಾಸಕ್ತಿಯ ವರ್ಗಾವಣೆ)

ಅಂಥ ಲಿಖಿತವನ್ನು ಬರೆಯುವ, ಮಾಡುವ ಅಥವಾ ಬರೆದುಕೊಡುವ ವ್ಯಕ್ತಿ;

(ಬಿ) ಅಗ್ನಿವಿಮೆಯನ್ನುಳಿದು ಇತರ ವಿಮಾ ಪಾಲಿಸಿಯ ಸಂದರ್ಭದಲ್ಲಿ- ವಿಮೆಯನ್ನು ಮಾಡುವ ವ್ಯಕ್ತಿ;

(ಬಿಬಿ) ಅಗ್ನಿವಿಮಾ ಪಾಲಿಸಿಯ ಸಂದರ್ಭದಲ್ಲಿ - ಪಾಲಿಸಿಯನ್ನು ನೀಡುವ ವ್ಯಕ್ತಿ;

(ಸಿ) ಹಸ್ತಾಂತರಣ ಸಂದರ್ಭದಲ್ಲಿ (ಅಡಮಾನ ಮಾಡಿದ ಸ್ವತ್ತಿನ ಪುನರ್ ಹಸ್ತಾಂತರಣವೂ ಸೇರಿದಂತೆ) - ಪಡೆದವನು: ಗುತ್ತಿಗೆ ಅಥವಾ ಗುತ್ತಿಗೆ ಒಪ್ಪಂದದ ಸಂದರ್ಭದಲ್ಲಿ ಗುತ್ತಿಗೆದಾರ ಅಥವಾ ಉದ್ದೇಶಿತ ಗುತ್ತಿಗೆದಾರ;

(ಡಿ) ಗುತ್ತಿಗೆಗೆ ಸಮಾನ ಸ್ವರೂಪದ್ದಾಗಿರುವುದರ ಸಂದರ್ಭದಲ್ಲಿ - ಗುತ್ತಿಗೆ ಕೊಡುವವನು;

(ಇ) ವಿನಿಮಯದ ಲಿಖಿತದ ಸಂದರ್ಭದಲ್ಲಿ - ಸಮಷೇರುಗಳ ಪಕ್ಷಕಾರರು;

(ಎಫ್) ಮಾರಾಟದ ಪ್ರಮಾಣಪತ್ರದ ಸಂದರ್ಭದಲ್ಲಿ - ಅಂಥ ಪ್ರಮಾಣಪತ್ರವು ಸಂಬಂಧಿಸಿದ ಸ್ವತ್ತಿನ ಖರೀದಿದಾರನು; ಮತ್ತು

(ಜಿ) ವಿಭಜನೆಯ ಲಿಖಿತದ ಸಂದರ್ಭದಲ್ಲಿ - ವಿಭಜನೆಮಾಡಿದ ಇಡೀ ಸ್ವತ್ತಿನಲ್ಲಿ ಅವರಿಗೆ ಸಂಬಂಧಿಸಿದ ಷೇರುಗಳ ಪ್ರಮಾಣಾನುಸಾರವಾಗಿ ಅಥವಾ ವಿಭಜನೆಯನ್ನು, ರೆವಿನ್ಯೂ ಪ್ರಾಧಿಕಾರವು ಅಥವಾ ಸಿವಿಲ್ ನ್ಯಾಯಾಲಯವು, ಅಥವಾ ಮಧ್ಯಸ್ಥಗಾರನು ಹೊರಡಿಸಿದ ಆದೇಶದ ಜಾರಿಯಲ್ಲಿ ಮಾಡಿದಾಗ, ಅಂಥ ಪ್ರಾಧಿಕಾರವು, ನ್ಯಾಯಾಲಯವು ಅಥವಾ ಮಧ್ಯಸ್ಥಗಾರನು ನಿರ್ದೇಶಿಸುವಂಥ ಪ್ರಮಾಣಾನುಸಾರ ವಿಭಜನೆಯ ಪಕ್ಷಕಾರರು

-ವಹಿಸತಕ್ಕುದು.

**30. ಕೆಲವು ಸಂದರ್ಭಗಳಲ್ಲಿ ರಸೀದಿಯನ್ನು ಕೊಡುವ ಹೊಣೆ.**-ಇಪ್ಪತ್ತು ರೂಪಾಯಿ ಮೊಬಲಗನ್ನು ಮೀರಿದ ಯಾವುದೇ ಹಣವನ್ನು, ಅಥವಾ ಇಪ್ಪತ್ತು ರೂಪಾಯಿ ಮೊಬಲಗನ್ನು ಮೀರಿದ ಯಾವುದೇ ವಿನಿಮಯ ಪತ್ರವನ್ನು, ಚೆಕ್ಕನ್ನು ಅಥವಾ ಪ್ರಾಮಿಸರಿ ನೋಟನ್ನು ಸ್ವೀಕರಿಸುವ, ಅಥವಾ ಇಪ್ಪತ್ತು ರೂಪಾಯಿ ಮೌಲ್ಯಕ್ಕೆ ಮೀರಿದ ಯಾವುದೇ ಚರಸ್ವತ್ತನ್ನು ಋಣದ ಪೂರ್ಣ ತೀರಿಕೆಯಲ್ಲಿ ಅಥವಾ ಭಾಗಶಃ ತೀರಿಕೆಯಲ್ಲಿ ಸ್ವೀಕರಿಸುವ ಯಾವನೇ ವ್ಯಕ್ತಿಯು, ಅಂಥ ಹಣಪತ್ರ, ವಿನಿಮಯ ಪತ್ರ, ಚೆಕ್ಕು, ನೋಟು ಅಥವಾ ಸ್ವತ್ತನ್ನು ಸಂದಾಯ ಮಾಡುವ ಅಥವಾ ಒಪ್ಪಿಸಿಕೊಡುವ ವ್ಯಕ್ತಿಯು ಕೋರಿದರೆ, ಅದಕ್ಕಾಗಿ ಕ್ರಮಬದ್ಧವಾಗಿ ಸ್ಟಾಂಪ್ ಹಾಕಲಾದ ರಸೀತಿಯನ್ನು ಕೊಡತಕ್ಕುದು.

ಅಗ್ನಿವಿಮೆಯ ಯಾವುದೇ ಕರಾರಿನ ಯಾವುದೇ ನವೀಕರಣಕ್ಕಾಗಿ ಯಾವುದೇ ಪ್ರೀಮಿಯಂ ಅಥವಾ ಪ್ರತಿಫಲದ ಜಮೆಯನ್ನು ಸ್ವೀಕರಿಸುವ ಅಥವಾ ತೆಗೆದುಕೊಳ್ಳುವ ಯಾವನೇ ವ್ಯಕ್ತಿಯು, ಅಂಥ ಪ್ರೀಮಿಯಂ ಅಥವಾ ಪ್ರತಿಫಲದ ಜಮೆಯನ್ನು ಸ್ವೀಕರಿಸಿದ ಅಥವಾ ತೆಗೆದುಕೊಂಡ ತರುವಾಯ ಒಂದು ತಿಂಗಳೊಳಗೆ, ಅದಕ್ಕಾಗಿ ಯುಕ್ತವಾಗಿ ಸ್ಟಾಂಪು ಹಚ್ಚಿದ ರಸೀದಿಯನ್ನು ಕೊಡತಕ್ಕುದು.

## ಅಧ್ಯಾಯ - III

## ಸ್ಟಾಂಪಿನ ಬಗ್ಗೆ ನ್ಯಾಯನಿರ್ಣಯ

**31. ಯುಕ್ತ ಸ್ಟಾಂಪಿನ ಬಗ್ಗೆ ನ್ಯಾಯನಿರ್ಣಯ.-** (1) ಬರೆದುಕೊಟ್ಟ ಅಥವಾ ಬರೆದು ಕೊಟ್ಟಿಲ್ಲದ ಮತ್ತು ಈ ಹಿಂದೆ ಸ್ಟಾಂಪು ಅಂಟಿಸಿದ ಅಥವಾ ಅಂಟಿಸದಿರುವ ಯಾವುದೇ ಲಿಖಿತವನ್ನು ಕಲೆಕ್ಟರನ ಬಳಿಗೆ ತಂದಾಗ, ಮತ್ತು ಅದನ್ನು ತಂದ ವ್ಯಕ್ತಿಯು, ಅದಕ್ಕೆ ವಿಧಿಸಬಹುದಾದಂಥ ಶುಲ್ಕದ (ಯಾವುದಾದರೂ ಇದ್ದರೆ) ಬಗ್ಗೆ ಆ ಅಧಿಕಾರಿಯ ಅಭಿಪ್ರಾಯವನ್ನು ಕೋರಿ, ಮತ್ತು ಕಲೆಕ್ಟರನು ಪ್ರತಿಯೊಂದು ಸಂದರ್ಭದಲ್ಲಿ ನಿರ್ದೇಶಿಸಬಹುದಾದಂತೆ (ಐದು ರೂಪಾಯಿಗೆ ಮೀರದ ಮತ್ತು ಐವತ್ತು ನಯಾಪೈಸೆಗೆ ಕಡಿಮೆಯಿಲ್ಲದ) ಮೊಬಲಗಿನ ಫೀಜನ್ನು ಸಂದಾಯ ಮಾಡಿದಾಗ, ಲಿಖಿತಕ್ಕೆ ವಿಧಿಸಬಹುದಾದಂಥ ಶುಲ್ಕವನ್ನು (ಯಾವುದಾದರೂ ಇದ್ದರೆ) ಕಲೆಕ್ಟರನು, ತನ್ನ ವಿವೇಚನಾನುಸಾರ ನಿರ್ಧರಿಸತಕ್ಕುದು.

(2) ಈ ಉದ್ದೇಶಕ್ಕಾಗಿ, ಕಲೆಕ್ಟರನು, ಲಿಖಿತದ ಒಂದು ಗೋಷ್ವಾರೆಯನ್ನು ಮತ್ತು ಲಿಖಿತಕ್ಕೆ ಶುಲ್ಕವನ್ನು ವಿಧಿಸುವುದರ ಮೇಲೆ ಪರಿಣಾಮ ಬೀರುವ ಎಲ್ಲಾ ಸಂಗತಿಗಳು ಮತ್ತು ಪರಿಸ್ಥಿತಿಗಳನ್ನು ಅಥವಾ ಅದಕ್ಕೆ ವಿಧಿಸಬಹುದಾದ ಶುಲ್ಕದ ಮೊಬಲಗನ್ನು ಅದರಲ್ಲಿ ಪೂರ್ಣವಾಗಿ ಮತ್ತು ಸರಿಯಾಗಿ ನಿರೂಪಿಸಲಾಗಿದೆ ಎಂದು ರುಜುವಾತುಪಡಿಸಲು ಅವನು ಅವಶ್ಯಕವೆಂದು ಭಾವಿಸುವಂಥ ಶಪಥಪತ್ರ ಮತ್ತು ಇತರ ಸಾಕ್ಷ್ಯವನ್ನು ಸಹ ಒದಗಿಸುವಂತೆ ಅಗತ್ಯಪಡಿಸಬಹುದು ಮತ್ತು ತದನುಸಾರವಾಗಿ ಅಂಥ ಗೋಷ್ವಾರೆಯನ್ನು ಮತ್ತು ಸಾಕ್ಷ್ಯವನ್ನು ಒದಗಿಸುವವರೆಗೆ ಅವನು ಯಾವುದೇ ಅಂಥ ಅರ್ಜಿ ಮೇಲೆ ಮುಂದಿನ ಕ್ರಮ ಕೈಗೊಳ್ಳಲು ನಿರಾಕರಿಸಬಹುದು:

ಪರಂತು, -

(ಎ) ಈ ಪ್ರಕರಣದ ಅನುಸಾರವಾಗಿ ಒದಗಿಸಲಾದ ಯಾವುದೇ ಸಾಕ್ಷ್ಯವನ್ನು ಯಾವುದೇ ಸಿವಿಲ್ ವ್ಯವಹರಣೆಯಲ್ಲಿ ಆ ಸಾಕ್ಷ್ಯವು ಯಾವ ಲಿಖಿತಕ್ಕೆ ಸಂಬಂಧಪಟ್ಟಿರುವುದೋ ಅದಕ್ಕೆ ವಿಧಿಸಬಹುದಾದ ಸುಂಕಕ್ಕೆ ಸಂಬಂಧಪಟ್ಟ ವಿಚಾರಣೆಯಲ್ಲಿ ಹೊರತು, ಯಾವನೇ ವ್ಯಕ್ತಿಯ ವಿರುದ್ಧ ಉಪಯೋಗಿಸತಕ್ಕುದಲ್ಲ; ಮತ್ತು

(ಬಿ) ಯಾವುದೇ ಅಂಥ ಸಾಕ್ಷ್ಯವನ್ನು ಒದಗಿಸಿದ ಪ್ರತಿಯೊಬ್ಬ ವ್ಯಕ್ತಿಯು, ಅದು ಯಾವ ಲಿಖಿತಕ್ಕೆ ಸಂಬಂಧಪಟ್ಟಿರುವುದೋ ಅದಕ್ಕೆ ವಿಧಿಸಬಹುದಾದ ಪೂರ್ಣ ಶುಲ್ಕವನ್ನು ಸಂದಾಯ ಮಾಡಿದ ಮೇಲೆ, ಹಿಂದೆ ಹೇಳಿದ ಯಾವುವೇ ಸಂಗತಿಗಳನ್ನು ಅಥವಾ ಪರಿಸ್ಥಿತಿಗಳನ್ನು ಅಂಥ ಲಿಖಿತದಲ್ಲಿ ಸರಿಯಾಗಿ ನಿರೂಪಿಸಲು ತಪ್ಪಿದ ಕಾರಣದಿಂದಾಗಿ ಈ ಅಧಿನಿಯಮದ ಮೇರೆಗೆ ಅವನು ಗುರಿಯಾಗಬಹುದಾದ ಯಾವುದೇ ದಂಡದಿಂದ ಅವನನ್ನು ಬಿಡುಗಡೆ ಮಾಡತಕ್ಕುದು.

**32. ಕಲೆಕ್ಟರನಿಂದ ಪ್ರಮಾಣಪತ್ರ.-**31ನೇ ಪ್ರಕರಣದ ಮೇರೆಗೆ ಕಲೆಕ್ಟರನ ಬಳಿಗೆ ತೆಗೆದುಕೊಂಡು ಬಂದ ಲಿಖಿತವು, ಅವನ ಅಭಿಪ್ರಾಯದಲ್ಲಿ, ಶುಲ್ಕವನ್ನು ವಿಧಿಸಬಹುದಾದ ಪ್ರಕಾರದ್ದಾಗಿರುವಲ್ಲಿ, ಮತ್ತು

(ಎ) ಕಲೆಕ್ಟರನು, ಈಗಾಗಲೇ ಅದಕ್ಕೆ ಪೂರ್ಣವಾಗಿ ಸ್ಟಾಂಪು ಹಚ್ಚಲಾಗಿದೆ ಎಂದು ನಿರ್ಧರಿಸಿದಾಗ, ಅಥವಾ

(ಬಿ) 31ನೇ ಪ್ರಕರಣದ ಮೇರೆಗೆ ಕಲೆಕ್ಟರನು ನಿರ್ಧರಿಸಿದ ಶುಲ್ಕವನ್ನು, ಅಥವಾ ಲಿಖಿತದ ಸಂಬಂಧದಲ್ಲಿ ಈಗಾಗಲೇ ಸಂದಾಯ ಮಾಡಿದ ಶುಲ್ಕದ ಜೊತೆಗೆ ಹಾಗೆ ನಿರ್ಧರಿಸಿದ ಶುಲ್ಕಕ್ಕೆ ಸಮಾನವಾಗಿರುವ ಮೊತ್ತವನ್ನು ಸಂದಾಯ ಮಾಡಿದಾಗ

– ಕಲೆಕ್ಟರನು, ಲಿಖಿತಕ್ಕೆ ವಿಧಿಸಬಹುದಾದಂಥ ಪೂರ್ಣ ಶುಲ್ಕ (ಮೊಬಲಗನ್ನು ನಮೂದಿಸಿ)ವನ್ನು ಸಂದಾಯ ಮಾಡಲಾಗಿದೆ ಎಂಬುದಾಗಿ ಅಂಥ ಲಿಖಿತದ ಮೇಲೆ ಹಿಂಬರಹ ಮಾಡುವ ಮೂಲಕ ಪ್ರಮಾಣೀಕರಿಸತಕ್ಕುದು.

(2) ಆ ಲಿಖಿತವು ಶುಲ್ಕಕ್ಕೆ ಗುರಿಯಾಗತಕ್ಕುದಲ್ಲವೆಂದು ಕಲೆಕ್ಟರನು ಅಭಿಪ್ರಾಯಪಟ್ಟಾಗ, ಅವನು ಅಂಥ ಲಿಖಿತವು ಹಾಗೆ ಶುಲ್ಕಕ್ಕೆ ಗುರಿಯಾಗಲು ಯೋಗ್ಯವಾದುದಲ್ಲವೆಂದು ಮೇಲೆ ಹೇಳಿದ ರೀತಿಯಲ್ಲಿ ಪ್ರಮಾಣೀಕರಿಸತಕ್ಕುದು.

(3) ಈ ಪ್ರಕರಣದ ಮೇರೆಗೆ ಹಿಂಬರಹವನ್ನು ಮಾಡಲಾದ ಯಾವುದೇ ಲಿಖಿತವನ್ನು, ಸಂದರ್ಭಾನುಸಾರ ಯುಕ್ತವಾಗಿ ಸ್ಟಾಂಪು ಹಚ್ಚಲಾಗಿದೆಯೆಂದು ಅಥವಾ ಶುಲ್ಕಕ್ಕೆ ಗುರಿಯಾಗಲು ಯೋಗ್ಯವಲ್ಲವೆಂದು ಭಾವಿಸತಕ್ಕುದು ಮತ್ತು ಶುಲ್ಕಕ್ಕೆ ಗುರಿಯಾಗಲು ಯೋಗ್ಯವಾಗಿದ್ದರೆ, ಸಾಕ್ಷ್ಯದಲ್ಲಿ ಅಥವಾ ಬೇರೆ ರೀತಿಯಲ್ಲಿ ಸ್ವೀಕರಿಸಲು ಯೋಗ್ಯವಾಗಿರತಕ್ಕುದು, ಮತ್ತು ಆ ಮುಂದಿನ ಕ್ರಮವನ್ನು ಕೈಗೊಳ್ಳಬಹುದು ಮತ್ತು ಅದನ್ನು ಮೂಲತಃ ಯುಕ್ತವಾಗಿ ಸ್ಟಾಂಪು ಹಚ್ಚಲಾಗಿದ್ದರೆ ಹೇಗೋ ಹಾಗೆ ನೋಂದಾಯಿಸತಕ್ಕುದು:

ಪರಂತು, ಈ ಪ್ರಕರಣದಲ್ಲಿರುವುದು ಯಾವುದೂ –

(ಎ) ಭಾರತದಲ್ಲಿ ಬರೆದುಕೊಟ್ಟ ಅಥವಾ ಮೊದಲು ಬರೆದುಕೊಟ್ಟ ಮತ್ತು ಸಂದರ್ಭಾನುಸಾರ, ಅದನ್ನು ಬರೆದುಕೊಟ್ಟ ಅಥವಾ ಮೊದಲು ಬರೆದುಕೊಟ್ಟ ದಿನಾಂಕದಿಂದ ಒಂದು ತಿಂಗಳು ಮುಗಿದ ತರುವಾಯ ಅವನ ಬಳಿಗೆ ತಂದ ಯಾವುದೇ ಲಿಖಿತಕ್ಕೆ;

(ಬಿ) ಭಾರತದ ಹೊರಗೆ ಬರೆದುಕೊಟ್ಟ ಅಥವಾ ಮೊದಲು ಬರೆದುಕೊಟ್ಟ ಮತ್ತು ಅದನ್ನು ಭಾರತದಲ್ಲಿ ಮೊದಲು ಸ್ವೀಕರಿಸಿದ ಮೇಲೆ ಮೂರು ತಿಂಗಳು ಮುಗಿದ ತರುವಾಯ ಅವನ ಬಳಿಗೆ ತಂದ ಯಾವುದೇ ಲಿಖಿತಕ್ಕೆ; ಅಥವಾ

(ಸಿ) ಯುಕ್ತವಾಗಿ ಸ್ಟಾಂಪು ಹಚ್ಚಿರದ ಕಾಗದದ ಮೇಲೆ ಬರೆದ ಅಥವಾ ಬರೆದುಕೊಟ್ಟ ತರುವಾಯ ಅವನ ಬಳಿಗೆ ತಂದ ಹತ್ತು ನಯೆಪೈಸೆಯನ್ನು ಮೀರದ ಶುಲ್ಕವನ್ನು ವಿಧಿಸಬಹುದಾದ ಯಾವುದೇ ಲಿಖಿತಕ್ಕೆ ಅಥವಾ ಯಾವುದೇ ವಿನಿಮಯ ಪತ್ರಕ್ಕೆ ಅಥವಾ ಪ್ರಾಮಿಸರಿ ನೋಟಿಗೆ

– ಹಿಂಬರಹ ಮಾಡಲು ಕಲೆಕ್ಟರನಿಗೆ ಅಧಿಕಾರ ನೀಡತಕ್ಕುದಲ್ಲ.

## ಅಧ್ಯಾಯ – IV

## ಯುಕ್ತವಾಗಿ ಸ್ಟಾಂಪು ಹಚ್ಚಿರದ ಲಿಖಿತಗಳು

**33. ಲಿಖಿತಗಳನ್ನು ಪರೀಕ್ಷಿಸುವುದು ಮತ್ತು ಸ್ವಾಧೀನಕ್ಕೆ ತೆಗೆದುಕೊಳ್ಳುವುದು.–** (1) ಕಾನೂನಿನ ಮೂಲಕ ಅಥವಾ ಪಕ್ಷಕಾರರ ಸಮ್ಮತಿಯಿಂದ ಸಾಕ್ಷ್ಯವನ್ನು ಸ್ವೀಕರಿಸುವ ಅಧಿಕಾರವನ್ನು ಹೊಂದಿರುವ ಪ್ರತಿಯೊಬ್ಬ ವ್ಯಕ್ತಿಯು, ಮತ್ತು ಪೊಲೀಸ್ ಅಧಿಕಾರಿಯನ್ನು ಹೊರತುಪಡಿಸಿ ಸರ್ಕಾರಿ ಕಚೇರಿಯ ಪ್ರಭಾರದಲ್ಲಿರುವ ಪ್ರತಿಯೊಬ್ಬ ವ್ಯಕ್ತಿಯು, ಅವನ ಅಭಿಪ್ರಾಯದಲ್ಲಿ, ಶುಲ್ಕವನ್ನು ವಿಧಿಸತಕ್ಕ ಯಾವ ಲಿಖಿತವನ್ನು ಅವನ ಮುಂದೆ ಹಾಜರುಪಡಿಸಲಾಗುವುದೋ ಅಥವಾ ಅವನ ಪ್ರಕಾರ್ಯಗಳ ನೆರವೇರಿಕೆಯಲ್ಲಿ ಅವನ ಬಳಿ ಬರುವುದೋ ಆ ಯಾವುದೇ ಲಿಖಿತಕ್ಕೆ ಯುಕ್ತ ಸ್ಟಾಂಪು ಹಚ್ಚಿಲ್ಲವೆಂದು ಅವನಿಗೆ ಕಂಡುಬಂದರೆ, ಅದನ್ನು ಸ್ವಾಧೀನಕ್ಕೆ ತೆಗೆದುಕೊಳ್ಳತಕ್ಕುದು.

(2) ಆ ಉದ್ದೇಶಕ್ಕಾಗಿ ಅಂಥ ಪ್ರತಿಯೊಬ್ಬ ವ್ಯಕ್ತಿಯು, ಹಾಗೆ ಶುಲ್ಕ ವಿಧಿಸಬಹುದಾದ ಮತ್ತು ಹಾಗೆ ಹಾಜರುಪಡಿಸಬಹುದಾದ ಅಥವಾ ಅವನ ಮುಂದೆ ಬರಬಹುದಾದ ಪ್ರತಿಯೊಂದು ಲಿಖಿತವನ್ನು, ಅಂಥ ಲಿಖಿತವನ್ನು ಬರೆದುಕೊಟ್ಟಾಗ ಅಥವಾ ಮೊದಲು ಬರೆದುಕೊಟ್ಟಾಗ ಭಾರತದಲ್ಲಿ ಜಾರಿಯಲ್ಲಿರುವ ಕಾನೂನಿನ ಮೂಲಕ ಅಗತ್ಯಪಡಿಸಲಾದ ಮೌಲ್ಯದ ಮತ್ತು ವಿವರಣೆಯ ಸ್ಟಾಂಪನ್ನು ಹಚ್ಚಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಪರೀಕ್ಷಿಸತಕ್ಕುದು:

ಪರಂತು,-

(ಎ) ಇದರಲ್ಲಿ ಇರುವುದು ಯಾವುದೂ, ಕ್ರಿಮಿನಲ್ ನ್ಯಾಯಾಲಯದ ಯಾವನೇ ಮ್ಯಾಜಿಸ್ಟ್ರೇಟನು ಅಥವಾ ನ್ಯಾಯಾಧೀಶನು ದಂಡ ಪ್ರಕ್ರಿಯಾ ಸಂಹಿತೆ, 1898ರ (1898ರ 5) ಅಧ್ಯಾಯ XII ಅಥವಾ XXXVI ರ ಮೇರೆಗಿನ ವ್ಯವಹರಣೆಗಳಲ್ಲದೆ ಯಾವುದೇ ಇತರ ವ್ಯವಹರಣೆಯ ಕ್ರಮದಲ್ಲಿ ತನ್ನ ಮುಂದೆ ಬರುವಂಥ ಯಾವುದೇ ಲಿಖಿತವನ್ನು ಪರೀಕ್ಷಿಸುವುದು ಅಥವಾ ಸ್ವಾಧೀನಕ್ಕೆ ತೆಗೆದುಕೊಳ್ಳುವುದು ಯುಕ್ತವಲ್ಲವೆಂದು ಅವನು ಭಾವಿಸಿದರೆ, ಅವನನ್ನು ಹಾಗೆ ಮಾಡುವಂತೆ ಅಗತ್ಯಪಡಿಸುವುದಾಗಿ ಭಾವಿಸತಕ್ಕುದಲ್ಲ;

(ಬಿ) ಉಚ್ಚ ನ್ಯಾಯಾಲಯದ ನ್ಯಾಯಾಧೀಶನ ಸಂದರ್ಭದಲ್ಲಿ ಈ ಪ್ರಕರಣದ ಮೇರೆಗೆ ಯಾವುದೇ ಲಿಖಿತವನ್ನು ಪರೀಕ್ಷಿಸುವ ಮತ್ತು ಸ್ವಾಧೀನಕ್ಕೆ ತೆಗೆದುಕೊಳ್ಳುವ ಕರ್ತವ್ಯವನ್ನು, ಈ ಸಂಬಂಧದಲ್ಲಿ ನ್ಯಾಯಾಲಯವು ನೇಮಿಸುವ ಅಧಿಕಾರಿಗೆ ಪ್ರತ್ಯಾಯೋಜಿಸಬಹುದು.

(3) ಈ ಪ್ರಕರಣಗಳ ಉದ್ದೇಶಗಳಿಗಾಗಿ, ಸಂದೇಹದ ಸಂದರ್ಭಗಳಲ್ಲಿ,-

(ಎ) ರಾಜ್ಯ ಸರ್ಕಾರವು ಯಾವ ಕಚೇರಿಗಳನ್ನು ಸಾರ್ವಜನಿಕ ಕಚೇರಿಗಳೆಂದು ಭಾವಿಸತಕ್ಕುದು ಎಂಬುದನ್ನು ನಿರ್ಧರಿಸಬಹುದು, ಮತ್ತು

(ಬಿ) ರಾಜ್ಯಸರ್ಕಾರವು ಯಾರನ್ನು ಸಾರ್ವಜನಿಕ ಕಚೇರಿಗಳ ಪ್ರಭಾರದಲ್ಲಿರುವ ವ್ಯಕ್ತಿಗಳೆಂಬುದಾಗಿ ಭಾವಿಸತಕ್ಕುದೆಂದು ನಿರ್ಧರಿಸಬಹುದು.

**34. ಸ್ಟಾಂಪು ಹಚ್ಚಿರದ ರಸೀದಿಗಳ ಬಗ್ಗೆ ವಿಶೇಷ ಉಪಬಂಧ.-** ಹತ್ತು ನಯೆಪೈಸೆಯನ್ನು ಮೀರದ ಶುಲ್ಕವನ್ನು ವಿಧಿಸಬಹುದಾದ ಯಾವುದೇ ರಸೀತಿಯನ್ನು, ಯಾವುದೇ ಸಾರ್ವಜನಿಕ ಲೆಕ್ಕಪತ್ರದ ಲೆಕ್ಕಪರಿಶೋಧನೆಯ ಕ್ರಮದಲ್ಲಿ, ಸ್ಟಾಂಪು ಹಚ್ಚದೆ ಯಾವನೇ ಅಧಿಕಾರಿಗೆ ಸಲ್ಲಿಸಿರುವಲ್ಲಿ ಅಥವಾ ಹಾಜರುಪಡಿಸಿರುವಲ್ಲಿ, ಅಂಥ ಅಧಿಕಾರಿಯು ತನ್ನ ವಿವೇಚನಾನುಸಾರ, ಅಂಥ ಲಿಖಿತವನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವುದಕ್ಕೆ ಬದಲಾಗಿ, ಅದಕ್ಕೆ ಬದಲಾಗಿ ಯುಕ್ತವಾಗಿ ಸ್ಟಾಂಪು ಹಚ್ಚಿದ ರಸೀತಿಯನ್ನು ಅಗತ್ಯಪಡಿಸಬಹುದು.

**35. ಯುಕ್ತವಾಗಿ ಸ್ಟಾಂಪು ಹಚ್ಚಿರದ ಲಿಖಿತಗಳು ಸಾಕ್ಷ್ಯದಲ್ಲಿ ಅಂಗೀಕಾರ ಯೋಗ್ಯವಲ್ಲದಿರುವುದು ಇತ್ಯಾದಿ.-** ಶುಲ್ಕವನ್ನು ವಿಧಿಸಬಹುದಾದ ಯಾವುದೇ ಲಿಖಿತವನ್ನು ಕಾನೂನಿನ ಮೂಲಕ ಅಥವಾ ಪಕ್ಷಕಾರರ ಸಮ್ಮತಿಯಿಂದ ಸಾಕ್ಷ್ಯವನ್ನು ಸ್ವೀಕರಿಸಲು ಅಧಿಕಾರವನ್ನು ಪಡೆದ ಯಾವನೇ ವ್ಯಕ್ತಿಯು ಯಾವುದೇ ಉದ್ದೇಶಕ್ಕಾಗಿ ಸಾಕ್ಷ್ಯವಾಗಿ ಅಂಗೀಕರಿಸತಕ್ಕುದಲ್ಲ ಅಥವಾ ಅಂಥ ಲಿಖಿತಕ್ಕೆ ಯುಕ್ತ ಸ್ಟಾಂಪು ಹಚ್ಚಿರದ ಹೊರತು, ಅಂಥ ಯಾವನೇ ವ್ಯಕ್ತಿಯು ಅಥವಾ ಯಾವನೇ ಸರ್ಕಾರಿ ಅಧಿಕಾರಿಯು ಅದಕ್ಕನುಸಾರ ಕಾರ್ಯನಿರ್ವಹಿಸತಕ್ಕದ್ದಲ್ಲ ಅಥವಾ ಅದನ್ನು ನೋಂದಾಯಿಸತಕ್ಕದ್ದಲ್ಲ ಅಥವಾ ಅಧಿಪ್ರಮಾಣಿಸತಕ್ಕದ್ದಲ್ಲ:

ಪರಂತು,-

(ಎ) ಹತ್ತು ನಯೆ ಪೈಸೆಯನ್ನು ಮೀರಿದ ಶುಲ್ಕವನ್ನು ಮಾತ್ರ ವಿಧಿಸಬಹುದಾದ ಲಿಖಿತವಾಗಿರದಂಥ ಯಾವುದೇ ಲಿಖಿತವನ್ನು, ಅಥವಾ ವಿನಿಮಯ ಪತ್ರವನ್ನು ಅಥವಾ ಪ್ರಾಮಿಸರಿ ನೋಟನ್ನು, ಎಲ್ಲಾ ನ್ಯಾಯಸಮ್ಮತ ಅಪವಾದಗಳಿಗೆ ಒಳಪಟ್ಟು, ಅದಕ್ಕೆ ವಿಧಿಸಬಹುದಾದ ಶುಲ್ಕವನ್ನು ಅಥವಾ ಸಾಕಷ್ಟು ಸ್ಟಾಂಪು ಹಚ್ಚದಿರುವ ಲಿಖಿತದ ಸಂದರ್ಭದಲ್ಲಿ, ಅಂಥ ಶುಲ್ಕದ ಕೊರತೆಯನ್ನು ತುಂಬಲು ಅವಶ್ಯಕವಾದ ಮೊತ್ತವನ್ನು, ಐದು ರೂಪಾಯಿಯ ಅಥವಾ ಯುಕ್ತ ಶುಲ್ಕದ ಅಥವಾ ಅದರ ಕೊರತೆಯ ಭಾಗದ ಹತ್ತು ಪಟ್ಟು ಐದು ರೂಪಾಯಿಯನ್ನು ಮೀರುವಲ್ಲಿ ಅಂಥ ಶುಲ್ಕದ ಅಥವಾ ಭಾಗದ ಹತ್ತರಷ್ಟಕ್ಕೆ ಸಮನಾದ ಮೊತ್ತದ ದಂಡದೊಂದಿಗೆ ಸಂದಾಯ ಮಾಡಿದ ಸಾಕ್ಷ್ಯವಾಗಿ ಅಂಗೀಕರಿಸತಕ್ಕುದು;

(ಬಿ) ಯಾವ ವ್ಯಕ್ತಿಯಿಂದ ಸ್ಟಾಂಪು ಹಚ್ಚಿದ ರಸೀದಿಯನ್ನು ಕೋರಲಾಗಿತ್ತೋ ಅವನು ಸ್ಟಾಂಪು ಹಚ್ಚದ ರಸೀದಿಯನ್ನು ಕೊಟ್ಟಿರುವಲ್ಲಿ ಮತ್ತು ಅಂಥ ರಸೀದಿಗೆ ಸ್ಟಾಂಪು ಹಚ್ಚಿದರೆ ಅದು ಅವನ ವಿರುದ್ಧ ಸಾಕ್ಷ್ಯದಲ್ಲಿ ಅಂಗೀಕಾರಾರ್ಹವಾಗುವಲ್ಲಿ, ಆ ತರುವಾಯ ಅಂಥ ರಸೀದಿಯನ್ನು, ಅದನ್ನು ಸಲ್ಲಿಸುವ ವ್ಯಕ್ತಿಯು ಒಂದು ರೂಪಾಯಿ ದಂಡವನ್ನು ಸಂದಾಯ ಮಾಡಿದ ಮೇಲೆ ಅವನ ವಿರುದ್ಧ ಸಾಕ್ಷ್ಯವಾಗಿ ಅಂಗೀಕರಿಸತಕ್ಕುದು;

(ಸಿ) ಯಾವುದೇ ಬಗೆಯ ಕರಾರನ್ನು ಅಥವಾ ಒಪ್ಪಂದವನ್ನು ಎರಡು ಅಥವಾ ಹೆಚ್ಚು ಪತ್ರಗಳನ್ನೊಳಗೊಂಡ ವ್ಯವಹಾರದ ಮೂಲಕ ಮಾಡಲಾಗಿರುವಲ್ಲಿ ಮತ್ತು ಅವುಗಳಲ್ಲಿ ಯಾವುದೇ ಒಂದು ಪತ್ರವು ಯುಕ್ತ ಸ್ಟಾಂಪನ್ನು ಹೊಂದಿರುವಲ್ಲಿ ಅಂಥ ಕರಾರು ಅಥವಾ ಒಪ್ಪಂದಕ್ಕೆ ಯುಕ್ತವಾಗಿ ಸ್ಟಾಂಪು ಹಚ್ಚಲಾಗಿದೆ ಎಂದು ಭಾವಿಸತಕ್ಕುದು;

(ಡಿ) ಇದರಲ್ಲಿ ಇರುವುದು ಯಾವುದೂ, ದಂಡಪ್ರಕ್ರಿಯಾ ಸಂಹಿತೆ, 1898ರ ಅಧ್ಯಾಯ XII ಅಥವಾ XXXVI ರ ಮೇರೆಗಿನ ವ್ಯವಹರಣೆಯಲ್ಲದ ಕ್ರಿಮಿನಲ್ ನ್ಯಾಯಾಲಯದಲ್ಲಿನ ಯಾವುದೇ ವ್ಯವಹರಣೆಯಲ್ಲಿ ಸಾಕ್ಷ್ಯವಾಗಿ ಯಾವುದೇ ಲಿಖಿತವನ್ನು ಅಂಗೀಕರಿಸದಂತೆ ಪ್ರತಿಬಂಧಿಸತಕ್ಕುದಲ್ಲ:

(ಇ) ಇದರಲ್ಲಿರುವುದು ಯಾವುದೂ, ಯಾವುದೇ ಲಿಖಿತವನ್ನು ಸರ್ಕಾರವು ಅಥವಾ ಅದರ ಪರವಾಗಿ ಬರೆದುಕೊಟ್ಟಿರುವಲ್ಲಿ ಅಥವಾ ಅದು ಈ ಅಧಿನಿಯಮದ 32ನೇ ಪ್ರಕರಣದಿಂದ ಅಥವಾ ಇತರ ಯಾವುದೇ ಉಪಬಂಧದಿಂದ ಉಪಬಂಧಿಸಲಾದಂತೆ ಕಲೆಕ್ಟರನ ಪ್ರಮಾಣಪತ್ರವನ್ನು ಹೊಂದಿರುವಲ್ಲಿ, ಅಂಥ ಯಾವುದೇ ಲಿಖಿತವನ್ನು ಯಾವುದೇ ನ್ಯಾಯಾಲಯದಲ್ಲಿ ಅಂಗೀಕರಿಸದಂತೆ ಪ್ರತಿಬಂಧಿಸತಕ್ಕುದಲ್ಲ.

**36. ಲಿಖಿತದ ಅಂಗೀಕಾರವನ್ನು ಎಲ್ಲಿ ಪ್ರಶ್ನಿಸತಕ್ಕುದಲ್ಲ.–** ಲಿಖಿತವನ್ನು ಸಾಕ್ಷ್ಯವಾಗಿ ಅಂಗೀಕರಿಸಿರುವಲ್ಲಿ ಅಂಥ ಅಂಗೀಕಾರವನ್ನು, 61ನೇ ಪ್ರಕರಣದಲ್ಲಿ ಉಪಬಂಧಿಸಲಾದಂತೆ ಹೊರತು, ಆ ಲಿಖಿತಕ್ಕೆ ಯುಕ್ತವಾಗಿ ಸ್ಟಾಂಪು ಹಚ್ಚಿಲ್ಲವೆಂಬ ಕಾರಣದ ಮೇಲೆ ಅದೇ ದಾವೆಯ ಅಥವಾ ವ್ಯವಹರಣೆಯ ಯಾವುದೇ ಹಂತದಲ್ಲಿ ಪ್ರಶ್ನಿಸತಕ್ಕುದಲ್ಲ.

**37. ಅನುಚಿತವಾಗಿ ಸ್ಟಾಂಪು ಹಚ್ಚಲಾದ ಲಿಖಿತಗಳ ಅಂಗೀಕಾರ.–** ಲಿಖಿತವು, ಸಾಕಷ್ಟು ಮೊಬಲಗಿನ, ಆದರೆ ಅನುಚಿತ ವಿವರಣೆಯ ಸ್ಟಾಂಪನ್ನು ಹೊಂದಿರುವಲ್ಲಿ ಅದಕ್ಕೆ ವಿಧಿಸಬಹುದಾದ ಶುಲ್ಕವನ್ನು ಸಂದಾಯ ಮಾಡಿದ ಮೇಲೆ ಅದನ್ನು ಯುಕ್ತವಾಗಿ ಸ್ಟಾಂಪು ಹಚ್ಚಲಾಗಿದೆ ಎಂದು ಪ್ರಮಾಣೀಕರಿಸಬಹುದು ಮತ್ತು ಹಾಗೆ ಪ್ರಮಾಣೀಕರಿಸಿದ ಯಾವುದೇ ಲಿಖಿತವನ್ನು, ಅದನ್ನು ಬರೆದುಕೊಟ್ಟ ದಿನಾಂಕದಿಂದ ಯುಕ್ತವಾಗಿ ಸ್ಟಾಂಪು ಹಚ್ಚಲಾಗಿದೆ ಎಂದು ಭಾವಿಸತಕ್ಕುದು.

**38. ಪರಿಬದ್ಧಗೊಳಿಸಿದ ಲಿಖಿತಗಳನ್ನು ಹೇಗೆ ವ್ಯವಹರಿಸುವುದು.–** (1) 33ನೇ ಪ್ರಕರಣದ ಮೇರೆಗೆ ಲಿಖಿತವನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವ ವ್ಯಕ್ತಿಯು, ಸಾಕ್ಷ್ಯವನ್ನು ಪಡೆಯುವ ಅಧಿಕಾರವನ್ನು ಕಾನೂನಿನ ಮೂಲಕ ಅಥವಾ ಪಕ್ಷಕಾರರ ಸಮ್ಮತಿಯಿಂದ ಪಡೆದಿದ್ದು, ಅಂಥ ಲಿಖಿತವನ್ನು, 35ನೇ ಪ್ರಕರಣವು ಉಪಬಂಧಿಸಿದಂಥ ದಂಡವನ್ನು ಅಥವಾ 37ನೇ ಪ್ರಕರಣವು ಉಪಬಂಧಿಸಿದಂಥ ಶುಲ್ಕವನ್ನು ಸಂದಾಯ ಮಾಡಿದ ಮೇಲೆ ಸಾಕ್ಷ್ಯವಾಗಿ ಅಂಗೀಕರಿಸಿದಾಗ, ಅವನು ಅಂಥ ಲಿಖಿತದ ಅಧಿಪ್ರಮಾಣಿತ ಪ್ರತಿಯನ್ನು ಅದರ ಸಂಬಂಧದಲ್ಲಿ ವಿಧಿಸಲಾದ ಶುಲ್ಕದ ಮತ್ತು ದಂಡದ ಮೊಬಲಗನ್ನು ನಮೂದಿಸುವ ಲಿಖಿತ ಪ್ರಮಾಣಪತ್ರದೊಂದಿಗೆ ಕಲೆಕ್ಟರನಿಗೆ ಕಳುಹಿಸತಕ್ಕುದು, ಮತ್ತು ಅಂಥ ಮೊಬಲಗನ್ನು ಕಲೆಕ್ಟರನಿಗೆ ಅಥವಾ ಈ ಸಂಬಂಧದಲ್ಲಿ ಅವನು ನೇಮಿಸಬಹುದಾದಂಥ ವ್ಯಕ್ತಿಗೆ ಕಳುಹಿಸತಕ್ಕುದು;

(2) ಇತರ ಪ್ರತಿಯೊಂದು ಸಂದರ್ಭದಲ್ಲಿ, ಲಿಖಿತವನ್ನು ಹಾಗೆ ಸ್ವಾಧೀನಕ್ಕೆ ತೆಗೆದುಕೊಳ್ಳುವ ವ್ಯಕ್ತಿಯು ಅದರ ಮೂಲ ಪ್ರತಿಯನ್ನು ಕಲೆಕ್ಟರನಿಗೆ ಕಳುಹಿಸತಕ್ಕುದು.

**39. 38ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಸಂದಾಯ ಮಾಡಲಾದ ದಂಡವನ್ನು ಮರುಪಾವತಿ ಮಾಡಲು ಕಲೆಕ್ಟರನ ಅಧಿಕಾರ.–** (1) ಲಿಖಿತದ ಒಂದು ಪ್ರತಿಯನ್ನು 38ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಕಲೆಕ್ಟರನಿಗೆ ಕಳುಹಿಸಿದಾಗ, ಅವನು ಸೂಕ್ತವೆಂದು ಭಾವಿಸಿದರೆ, ಅಂಥ ಲಿಖಿತದ ಸಂಬಂಧದಲ್ಲಿ ಸಂದಾಯ ಮಾಡಿದ ಐದು ರೂಪಾಯಿಗಳಿಗೆ ಮೀರಿದ ದಂಡದ ಯಾವುದೇ ಭಾಗವನ್ನು ಮರುಪಾವತಿ ಮಾಡಬಹುದು.

(2) ಅಂಥ ಲಿಖಿತವನ್ನು, 13ನೇ ಪ್ರಕರಣವನ್ನು ಅಥವಾ 14ನೇ ಪ್ರಕರಣವನ್ನು ಉಲ್ಲಂಘಿಸಿ ಬರೆಯಲಾಗಿದೆ ಎಂಬ ಕಾರಣ ಮಾತ್ರದಿಂದ ಸ್ವಾಧೀನಕ್ಕೆ ತೆಗೆದುಕೊಂಡಾಗ, ಕಲೆಕ್ಟರನು ಹಾಗೆ ಸಂದಾಯ ಮಾಡಿದ ಇಡೀ ದಂಡವನ್ನು ಮರುಪಾವತಿ ಮಾಡಬಹುದು.

**40. ಸ್ವಾಧೀನಕ್ಕೆ ತೆಗೆದುಕೊಂಡ ಲಿಖಿತಗಳಿಗೆ ಸ್ಟಾಂಪು ಹಚ್ಚಲು ಕಲೆಕ್ಟರನ ಅಧಿಕಾರ.–** (1) 33ನೇ ಪ್ರಕರಣದ ಮೇರೆಗೆ ಯಾವುದೇ ಲಿಖಿತವನ್ನು ಕಲೆಕ್ಟರನು ಸ್ವಾಧೀನಕ್ಕೆ ತೆಗೆದುಕೊಂಡಾಗ ಅಥವಾ ಹತ್ತು ನಯೆ ಪೈಸೆಗೆ ಮೀರದ ಶುಲ್ಕವನ್ನು ವಿಧಿಸಬಹುದಾದ ಲಿಖಿತವಲ್ಲದ, 38ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಅವನಿಗೆ ಕಳುಹಿಸಿದ ಯಾವುದೇ ಲಿಖಿತವನ್ನು ಅಥವಾ ವಿನಿಮಯ ಪತ್ರವನ್ನು ಅಥವಾ ಪ್ರಾಮಿಸರಿ ನೋಟನ್ನು ಸ್ವೀಕರಿಸಿದಾಗ, ಅವನು ಕೆಳಕಂಡ ಪ್ರಕ್ರಿಯೆಯನ್ನು ಅನುಸರಿಸತಕ್ಕುದು:–

(ಎ) ಅವನು, ಅಂಥ ಲಿಖಿತಕ್ಕೆ ಯುಕ್ತವಾಗಿ ಸ್ಟಾಂಪು ಹಚ್ಚಲಾಗಿದೆ, ಅಥವಾ ಶುಲ್ಕವನ್ನು ವಿಧಿಸುವಂತಿಲ್ಲ ಎಂಬುದಾಗಿ ಅಭಿಪ್ರಾಯಪಟ್ಟರೆ, ಅವನು ಸಂದರ್ಭಾನುಸಾರ, ಅದಕ್ಕೆ ಯುಕ್ತವಾಗಿ ಸ್ಟಾಂಪು ಹಚ್ಚಲಾಗಿದೆ, ಅಥವಾ ಅದಕ್ಕೆ ಹಾಗೆ ಶುಲ್ಕ ವಿಧಿಸುವಂತಿಲ್ಲ ಎಂಬುದಾಗಿ ಅದರ ಮೇಲೆ ಹಿಂಬರಹ ಮಾಡುವ ಮೂಲಕ ಪ್ರಮಾಣೀಕರಿಸತಕ್ಕುದು;

(ಬಿ) ಅಂಥ ಲಿಖಿತಕ್ಕೆ ಶುಲ್ಕವನ್ನು ವಿಧಿಸಬಹುದು ಮತ್ತು ಅದಕ್ಕೆ ಯುಕ್ತ ಸ್ಟಾಂಪು ಹಚ್ಚಿಲ್ಲ ಎಂಬುದಾಗಿ ಅವನು ಅಭಿಪ್ರಾಯಪಟ್ಟರೆ, ಅವನು ಯುಕ್ತ ಶುಲ್ಕವನ್ನು ಅಥವಾ ಅದರ ಕೊರತೆಯನ್ನು ತುಂಬಲು ಅವಶ್ಯಕವಾದ ಮೊಬಲಗನ್ನು ಐದು ರೂಪಾಯಿ ದಂಡದೊಂದಿಗೆ, ಅಥವಾ ಅವನು ಸೂಕ್ತವೆಂದು ಭಾವಿಸಿದರೆ, ಯುಕ್ತ ಶುಲ್ಕದ ಅಥವಾ ಅದರ ಕೊರತೆ ಭಾಗದ ಮೊಬಲಗಿನ ಹತ್ತರಷ್ಟಕ್ಕೆ ಮೀರದ ಮೊಬಲಗನ್ನು, ಅಂಥ ಮೊಬಲಗು ಐದು ರೂಪಾಯಿಗಳಿಗೆ ಮೀರಿರಲಿ ಅಥವಾ ಕಡಿಮೆ ಇರಲಿ, ಸಂದಾಯ ಮಾಡಲು ಅಗತ್ಯಪಡಿಸತಕ್ಕುದು:

ಪರಂತು, ಅಂಥ ಲಿಖಿತವನ್ನು, 13ನೇ ಪ್ರಕರಣವನ್ನು ಅಥವಾ 14ನೇ ಪ್ರಕರಣವನ್ನು ಉಲ್ಲಂಘಿಸಿ ಬರೆಯಲಾಗಿದೆ ಎಂಬ ಕಾರಣ ಮಾತ್ರದಿಂದ ಸ್ವಾಧೀನಕ್ಕೆ ತೆಗೆದುಕೊಂಡಿದ್ದರೆ, ಕಲೆಕ್ಟರನು ಸೂಕ್ತವೆಂದು ಭಾವಿಸಿದರೆ ಈ ಪ್ರಕರಣದ ಮೂಲಕ ನಿಯಮಿಸಲಾದ ಇಡೀ ದಂಡವನ್ನು ಅವನು ಮಾಫಿ ಮಾಡಬಹುದು.

(2) (1)ನೇ ಉಪಪ್ರಕರಣದ (ಎ) ಖಂಡದ ಮೇರೆಗಿನ ಪ್ರತಿಯೊಂದು ಪ್ರಮಾಣಪತ್ರವು ಈ ಅಧಿನಿಯಮದ ಉದ್ದೇಶಗಳಿಗಾಗಿ, ಅದರಲ್ಲಿ ಹೇಳಿದ ವಿಷಯಗಳ ಬಗ್ಗೆ ನಿರ್ಣಾಯಕ ಸಾಕ್ಷ್ಯವಾಗಿರತಕ್ಕುದು.

(3) ಲಿಖಿತವನ್ನು, 38ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಕಲೆಕ್ಟರನಿಗೆ ಕಳುಹಿಸಿರುವಲ್ಲಿ, ಕಲೆಕ್ಟರನು ಈ ಪ್ರಕರಣದಲ್ಲಿ ಉಪಬಂಧಿಸಿದಂತೆ ಅದರ ಬಗ್ಗೆ ವ್ಯವಹರಿಸಿದಾಗ, ಅದನ್ನು ಸ್ವಾಧೀನಕ್ಕೆ ತೆಗೆದುಕೊಂಡಿದ್ದ ಅಧಿಕಾರಿಗೆ ಹಿಂದಿರುಗಿಸತಕ್ಕುದು.

**41. ಆಕಸ್ಮಿಕವಾಗಿ ಯುಕ್ತವಾಗಿ ಸ್ಟಾಂಪು ಹಚ್ಚಿರದ ಲಿಖಿತಗಳು.-** ಶುಲ್ಕವನ್ನು ವಿಧಿಸಬಹುದಾದ ಆದರೆ ಯುಕ್ತ ಸ್ಟಾಂಪು ಹಚ್ಚಿಲ್ಲದ ಹತ್ತು ನಯೆಪೈಸೆ ಮಾತ್ರವನ್ನು ಮೀರದ ಶುಲ್ಕವನ್ನು ವಿಧಿಸಬಹುದಾದ ಲಿಖಿತವಲ್ಲದ ಯಾವುದೇ ಲಿಖಿತವನ್ನು ಅಥವಾ ವಿನಿಮಯ ಪತ್ರವನ್ನು ಅಥವಾ ಪ್ರಾಮಿಸರಿ ನೋಟನ್ನು, ಅದನ್ನು ಬರೆದುಕೊಟ್ಟ ಅಥವಾ ಮೊದಲಬಾರಿಗೆ ಬರೆದುಕೊಟ್ಟ ದಿನಾಂಕದಿಂದ ಒಂದು ವರ್ಷದೊಳಗಾಗಿ ಕಲೆಕ್ಟರನ ಮುಂದೆ ಯಾವನೇ ವ್ಯಕ್ತಿಯು ತಾನಾಗಿಯೇ ಹಾಜರುಪಡಿಸಿದರೆ, ಮತ್ತು ಅಂಥ ವ್ಯಕ್ತಿಯು, ಅಂಥ ಲಿಖಿತಕ್ಕೆ ಯುಕ್ತ ಸ್ಟಾಂಪು ಹಚ್ಚಿಲ್ಲವೆಂಬ ಸಂಗತಿಯನ್ನು ಕಲೆಕ್ಟರನ ಗಮನಕ್ಕೆ ತಂದರೆ ಮತ್ತು ಯುಕ್ತ ಶುಲ್ಕದ ಮೊಬಲಗನ್ನು ಅಥವಾ ಅದರ ಕೊರತೆ ತುಂಬಲು ಅಗತ್ಯವಾದ ಮೊಬಲಗನ್ನು ಸಂದಾಯ ಮಾಡುವುದಾಗಿ ಕಲೆಕ್ಟರನಿಗೆ ತಿಳಿಸಿದರೆ, ಮತ್ತು ಕಲೆಕ್ಟರನಿಗೆ, ಅಂಥ ಲಿಖಿತಕ್ಕೆ ಯುಕ್ತ ಸ್ಟಾಂಪು ಹಚ್ಚಲು ತಪ್ಪಿರುವುದು ಆಕಸ್ಮಿಕವಾಗಿ ಅಥವಾ ತಪ್ಪಾಗಿ ಅಥವಾ ಅಚಾತುರ್ಯದಿಂದ ಸಂಭವಿಸಿದೆ ಎಂದು ಮನದಟ್ಟಾದರೆ, ಅವನು 33ನೇ ಮತ್ತು 40ನೇ ಪ್ರಕರಣಗಳ ಮೇರೆಗಿನ ವ್ಯವಹರಣೆಗೆ ಬದಲಾಗಿ, ಅಂಥ ಮೊಬಲಗನ್ನು ಸ್ವೀಕರಿಸಬಹುದು ಮತ್ತು ಇಲ್ಲಿ ಇನ್ನು ಮುಂದೆ ನಿಯಮಿಸಲಾದಂತೆ ಮುಂದುವರಿಯತಕ್ಕುದು.

**42. 35ನೇ, 40ನೇ ಅಥವಾ 41ನೇ ಪ್ರಕರಣದ ಮೇರೆಗೆ ಯಾವ ಲಿಖಿತಗಳಿಗೆ ಶುಲ್ಕವನ್ನು ಸಂದಾಯ ಮಾಡಲಾಗಿದೆಯೋ ಅದರ ಮೇಲೆ ಹಿಂಬರಹ.-** (1) ಯಾವುದೇ ಲಿಖಿತದ ಸಂಬಂಧದಲ್ಲಿ ವಿಧಿಸಬಹುದಾದ ಶುಲ್ಕವನ್ನು ಮತ್ತು ದಂಡವನ್ನು (ಯಾವುದಾದರೂ ಇದ್ದರೆ) 35ನೇ, 40ನೇ ಅಥವಾ 41ನೇ ಪ್ರಕರಣದ ಮೇರೆಗೆ ಸಂದಾಯ ಮಾಡಿದಾಗ, ಸಂದರ್ಭಾನುಸಾರ ಸಾಕ್ಷ್ಯದಲ್ಲಿ ಅಂಥ ಲಿಖಿತವನ್ನು ಅಂಗೀಕರಿಸುವ ವ್ಯಕ್ತಿಯು ಅಥವಾ ಕಲೆಕ್ಟರನು ಸಂದರ್ಭಾನುಸಾರ ಯುಕ್ತ ಶುಲ್ಕವನ್ನು ಅಥವಾ, ಯುಕ್ತ ಶುಲ್ಕವನ್ನು ಮತ್ತು ದಂಡವನ್ನು (ಪ್ರತಿಯೊಂದರ ಮೊಬಲಗನ್ನು ವಿವರಿಸಬೇಕು) ತತ್-ಸಂಬಂಧದಲ್ಲಿ ವಿಧಿಸಲಾಗಿದೆ ಎಂದು ಮತ್ತು ಅವುಗಳನ್ನು ಸಂದಾಯ ಮಾಡುವ ವ್ಯಕ್ತಿಯ ಹೆಸರು ಮತ್ತು ನಿವಾಸವನ್ನು ಅದರ ಮೇಲೆ ಹಿಂಬರಹ ಮಾಡುವ ಮೂಲಕ ಪ್ರಮಾಣೀಕರಿಸತಕ್ಕುದು.

(2) ಹಾಗೆ ಹಿಂಬರಹ ಮಾಡಿದ ಪ್ರತಿಯೊಂದು ಲಿಖಿತವನ್ನು, ಆ ತರುವಾಯ ಸಾಕ್ಷ್ಯದಲ್ಲಿ ಅಂಗೀಕರಿಸತಕ್ಕುದು ಮತ್ತು ಅದಕ್ಕೆ ಯುಕ್ತ ಸ್ಟಾಂಪು ಹಚ್ಚಲಾಗಿದೆ ಎಂಬಂತೆ ಅದನ್ನು ನೋಂದಾಯಿಸಬಹುದು ಮತ್ತು ಕಾರ್ಯರೂಪಕ್ಕೆ ತರಬಹುದು ಮತ್ತು ಅಧಿಕೃತಗೊಳಿಸಬಹುದು ಮತ್ತು ಯಾರ ಬಳಿಯಿಂದ ಅದು, ಅದನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವ ಅಧಿಕಾರಿಯ ಕೈಗೆ

ಬಂದಿದೆಯೋ ಈ ಬಗ್ಗೆ ಅವನ ಅರ್ಜಿಯ ಮೇಲೆ ಆ ವ್ಯಕ್ತಿಗೆ, ಅಥವಾ ಅಂಥ ವ್ಯಕ್ತಿಯ ನಿರ್ದೇಶನದ ಮೇರೆಗೆ ಒಪ್ಪಿಸಿಕೊಡತಕ್ಕುದು:

ಪರಂತು,-

(ಎ) 35ನೇ ಪ್ರಕರಣದ ಮೇರೆಗೆ ಶುಲ್ಕವನ್ನು ಮತ್ತು ದಂಡವನ್ನು ಸಂದಾಯ ಮಾಡಿದ ಮೇಲೆ ಸಾಕ್ಷ್ಯದಲ್ಲಿ ಅಂಗೀಕರಿಸಿದಂಥ ಲಿಖಿತವನ್ನು ಹಾಗೆ ಸ್ವಾಧೀನಕ್ಕೆ ತೆಗೆದುಕೊಂಡ ದಿನಾಂಕದಿಂದ ಒಂದು ತಿಂಗಳು ಮುಗಿಯುವುದಕ್ಕೆ ಮುಂಚೆ ಅಥವಾ ಕಲೆಕ್ಟರನು, ಅದನ್ನು ಮತ್ತಷ್ಟು ತಡೆಹಿಡಿಯುವುದು ಅವಶ್ಯವೆಂದು ಮತ್ತು ಅಂಥ ಪ್ರಮಾಣಪತ್ರವನ್ನು ರದ್ದುಪಡಿಸಲಾಗಿಲ್ಲವೆಂದು ಪ್ರಮಾಣೀಕರಿಸಿದರೆ ಹಾಗೆ ಒಪ್ಪಿಸಿಕೊಡತಕ್ಕುದಲ್ಲ;

(ಬಿ) ಈ ಪ್ರಕರಣದಲ್ಲಿರುವುದು ಯಾವುದೂ ಸಿವಿಲ್ ಪ್ರಕ್ರಿಯಾ ಸಂಹಿತೆಯ (1882ರ 14) 144ನೇ ಪ್ರಕರಣದ 3ನೇ ಖಂಡಕ್ಕೆ ಬಾಧಕವಾಗತಕ್ಕುದಲ್ಲ.

**43. ಸ್ಟಾಂಪು ಕಾನೂನಿನ ವಿರುದ್ಧದ ಅಪರಾಧಕ್ಕಾಗಿ ಪ್ರಾಸಿಕ್ಯೂಷನ್.**- ಯಾವುದೇ ಲಿಖಿತದ ಸಂಬಂಧದಲ್ಲಿ ಈ ಅಧ್ಯಾಯದ ಮೇರೆಗೆ ವ್ಯವಹರಣೆಗಳನ್ನು ಕೈಗೊಳ್ಳುವುದು ಅಥವಾ ದಂಡವನ್ನು ಸಂದಾಯ ಮಾಡುವುದು, ಅಂಥ ಲಿಖಿತದ ಸಂಬಂಧದಲ್ಲಿ ಸ್ಟಾಂಪು ಕಾನೂನಿನ ವಿರುದ್ಧ ಅಪರಾಧವನ್ನು ಮಾಡಿರುವನೆಂದು ಕಂಡುಬಂದ ಯಾವನೇ ವ್ಯಕ್ತಿಯ ವಿರುದ್ಧ ಪ್ರಾಸಿಕ್ಯೂಷನ್ ಹೂಡುವುದನ್ನು ಪ್ರತಿಷೇಧಿಸತಕ್ಕುದಲ್ಲ:

ಪರಂತು, ಅಂಥ ಪ್ರಾಸಿಕ್ಯೂಷನನ್ನು, ಯುಕ್ತ ಶುಲ್ಕವನ್ನು ಸಂದಾಯ ಮಾಡುವುದನ್ನು ತಪ್ಪಿಸಿಕೊಳ್ಳುವ ಉದ್ದೇಶದಿಂದ ಅಪರಾಧವನ್ನು ಮಾಡಲಾಗಿದೆ ಎಂದು ಕಲೆಕ್ಟರನಿಗೆ ಕಂಡುಬಂದ ಹೊರತು, ಅಂಥ ದಂಡವನ್ನು ಸಂದಾಯ ಮಾಡಿರುವ ಯಾವುದೇ ಲಿಖಿತದ ಸಂದರ್ಭದಲ್ಲಿ, ಹೂಡತಕ್ಕುದಲ್ಲ.

**44. ಶುಲ್ಕವನ್ನು ಅಥವಾ ದಂಡವನ್ನು ಸಂದಾಯ ಮಾಡುವ ವ್ಯಕ್ತಿಗಳು ಕೆಲವು ಸಂದರ್ಭಗಳಲ್ಲಿ ಅವುಗಳನ್ನು ವಾಪಸು ಪಡೆಯುವುದು.**- (1) ಲಿಖಿತದ ಸಂಬಂಧದಲ್ಲಿ ಯಾವನೇ ವ್ಯಕ್ತಿಯು, 35ನೇ ಪ್ರಕರಣದ, 37ನೇ ಪ್ರಕರಣದ, 40ನೇ ಪ್ರಕರಣದ ಅಥವಾ 41ನೇ ಪ್ರಕರಣದ ಮೇರೆಗೆ ಮತ್ತು ಒಪ್ಪಂದದ ಪ್ರಕಾರ ಅಥವಾ 29ನೇ ಪ್ರಕರಣದ ಉಪಬಂಧಗಳ ಮೇರೆಗೆ ಅಥವಾ ಅಂಥ ಲಿಖಿತವನ್ನು ಬರೆದುಕೊಡುವ ಸಮಯದಲ್ಲಿ ಜಾರಿಯಲ್ಲಿದ್ದ ಯಾವುದೇ ಇತರ ಅಧಿನಿಯಮಿತಿಯ ಮೇರೆಗೆ ಯಾವುದೇ ಶುಲ್ಕವನ್ನು ಅಥವಾ ದಂಡವನ್ನು ಸಂದಾಯ ಮಾಡಿದಾಗ ಅಂಥ ಲಿಖಿತಕ್ಕಾಗಿ ಯುಕ್ತ ಸ್ಟಾಂಪನ್ನು ಒದಗಿಸುವ ವೆಚ್ಚವನ್ನು ವಹಿಸಲು ಇತರ ಯಾವನೇ ವ್ಯಕ್ತಿಯು ಬದ್ಧನಾಗಿರುವಲ್ಲಿ, ಮೊದಲು ಪ್ರಸ್ತಾಪಿತ ವ್ಯಕ್ತಿಯು ಹಾಗೆ ಸಂದಾಯ ಮಾಡಲಾದ ಶುಲ್ಕವನ್ನು ಅಥವಾ ದಂಡದ ಮೊಬಲಗನ್ನು ಅಂಥ ಇತರ ವ್ಯಕ್ತಿಯಿಂದ ವಾಪಸು ಪಡೆಯಲು ಹಕ್ಕುಳ್ಳವನಾಗಿರತಕ್ಕುದು.

(2) ಹಾಗೆ ವಾಪಸು ಪಡೆಯುವ ಉದ್ದೇಶಕ್ಕಾಗಿ, ಈ ಅಧಿನಿಯಮದ ಮೇರೆಗೆ ಅಂಥ ಲಿಖಿತದ ಸಂಬಂಧದಲ್ಲಿ ನೀಡಲಾದ ಯಾವುದೇ ಪ್ರಮಾಣಪತ್ರವು ಅದರಲ್ಲಿ ಪ್ರಮಾಣೀಕರಿಸಿದ ವಿಷಯಗಳ ಬಗ್ಗೆ ನಿರ್ಣಾಯಕ ಸಾಕ್ಷ್ಯವಾಗಿರತಕ್ಕುದು.

(3) ಅಂಥ ಮೊಬಲಗನ್ನು, ನ್ಯಾಯಾಲಯವು ಯುಕ್ತವೆಂದು ಭಾವಿಸಿದರೆ, ಅಂಥ ವ್ಯಕ್ತಿಗಳು ಪಕ್ಷಕಾರರಾಗಿರುವಂಥ ಮತ್ತು ಅಂಥ ಲಿಖಿತವನ್ನು ಸಾಕ್ಷ್ಯವಾಗಿ ಸಲ್ಲಿಸಿರುವಂಥ ಯಾವುದೇ ದಾವೆಯಲ್ಲಿ ಅಥವಾ ವ್ಯವಹರಣೆಯಲ್ಲಿ ವೆಚ್ಚಗಳ ಬಗೆಗಿನ ಯಾವುದೇ ಆದೇಶದಲ್ಲಿ ಸೇರಿಸಬಹುದು.

ನ್ಯಾಯಾಲಯವು, ಅಂಥ ಆದೇಶದಲ್ಲಿ ಮೊಬಲಗನ್ನು ಸೇರಿಸದಿದ್ದರೆ, ಮೊಬಲಗನ್ನು ವಾಪಸು ಪಡೆಯುವ ಯಾವ ಮುಂದಿನ ವ್ಯವಹರಣೆಗಳೂ ನಡೆಯತಕ್ಕುದಲ್ಲ.

**45. ಕೆಲವು ಸಂದರ್ಭಗಳಲ್ಲಿ ದಂಡವನ್ನು ಅಥವಾ ಹೆಚ್ಚಿನ ಶುಲ್ಕವನ್ನು ಮರುಪಾವತಿ ಮಾಡಲು ರೆವಿನ್ಯೂ ಅಧಿಕಾರಿಯ ಅಧಿಕಾರ.–** (1) 35ನೇ ಪ್ರಕರಣದ ಅಥವಾ 40ನೇ ಪ್ರಕರಣದ ಮೇರೆಗೆ ಯಾವುದೇ ದಂಡವನ್ನು ಸಂದಾಯ ಮಾಡಿರುವಲ್ಲಿ, ಮುಖ್ಯ ನಿಯಂತ್ರಕ ರೆವಿನ್ಯೂ ಅಧಿಕಾರಿಯು, ಸಂದಾಯದ ದಿನಾಂಕದಿಂದ ಒಂದು ವರ್ಷದೊಳಗಾಗಿ ಲಿಖಿತದಲ್ಲಿ ಸಲ್ಲಿಸಿದ ಅರ್ಜಿಯ ಮೇಲೆ, ಅಂಥ ದಂಡವನ್ನು ಪೂರ್ಣವಾಗಿ ಅಥವಾ ಭಾಗಶಃ ಮರುಪಾವತಿ ಮಾಡಬಹುದು.

(2) ಕಾನೂನು ಸಮ್ಮತವಾಗಿ ವಿಧಿಸಬಹುದಾದುದಕ್ಕಿಂತ ಹೆಚ್ಚಾದ ಸ್ಟಾಂಪು ಶುಲ್ಕವನ್ನು ವಿಧಿಸಲಾಗಿದೆ ಮತ್ತು 35ನೇ ಪ್ರಕರಣದ ಅಥವಾ 40ನೇ ಪ್ರಕರಣದ ಮೇರೆಗೆ ಸಂದಾಯ ಮಾಡಲಾಗಿದೆ ಎಂದು ಮುಖ್ಯ ನಿಯಂತ್ರಕ ರೆವಿನ್ಯೂ ಅಧಿಕಾರಿಯು ಅಭಿಪ್ರಾಯಪಟ್ಟಲ್ಲಿ, ಅಂಥ ಅಧಿಕಾರಿಯು, ಅದನ್ನು ವಿಧಿಸಲಾದ ಆದೇಶದ ಮೂರು ತಿಂಗಳೊಳಗಾಗಿ ಲಿಖಿತದಲ್ಲಿ ಸಲ್ಲಿಸಿದ ಅರ್ಜಿಯ ಮೇಲೆ ಹೆಚ್ಚಿನದನ್ನು ಮರುಪಾವತಿ ಮಾಡಬಹುದು.

**46. 38ನೇ ಪ್ರಕರಣದ ಮೇರೆಗೆ ಕಳುಹಿಸಿದ ಲಿಖಿತಗಳ ನಷ್ಟಕ್ಕಾಗಿ ಹೊಣೆಗಾರಿಕೆ ಇಲ್ಲದಿರುವುದು.–** (1) 38ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಕಲೆಕ್ಟರನಿಗೆ ಕಳುಹಿಸಿದ ಯಾವುದೇ ಲಿಖಿತವು, ರವಾನೆ ಅವಧಿಯಲ್ಲಿ ಕಳೆದುಹೋದರೆ, ನಾಶವಾದರೆ ಅಥವಾ ಅದಕ್ಕೆ ಹಾನಿಯಾದರೆ ಅದನ್ನು ಕಳುಹಿಸಿದ ವ್ಯಕ್ತಿಯು ಅಂಥ ನಷ್ಟಕ್ಕೆ, ನಾಶಕ್ಕೆ, ಅಥವಾ ಹಾನಿಗೆ ಹೊಣೆಗಾರನಾಗಿರತಕ್ಕುದಲ್ಲ.

(2) ಯಾವುದೇ ಲಿಖಿತವನ್ನು ಕಳುಹಿಸಲಿರುವಾಗ, ಅದು ಯಾರ ಬಳಿಯಿಂದ ಅದನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವ ವ್ಯಕ್ತಿಯ ಕೈಗೆ ಬಂದಿತೋ ಆ ವ್ಯಕ್ತಿಯು, ಅಂಥ ಮೊದಲು ಪ್ರಸ್ತಾಪಿತ ವ್ಯಕ್ತಿಯ ಖರ್ಚಿನಲ್ಲಿ ಆ ಲಿಖಿತವನ್ನು, ಸ್ವಾಧೀನಕ್ಕೆ ತೆಗೆದುಕೊಳ್ಳುವ ವ್ಯಕ್ತಿಯು ಪ್ರಮಾಣೀಕರಿಸಿದ ಅದರ ಒಂದು ಪ್ರತಿಯನ್ನು ಕೋರಬಹುದು.

**47. ಸ್ವೀಕರಿಸಲಾದ ಸ್ಟಾಂಪು ಹಚ್ಚಿರದ ಬಿಲ್ಲುಗಳು ಮತ್ತು ಪ್ರಾಮಿಸರಿ ನೋಟುಗಳಿಗೆ ಸ್ಟಾಂಪು ಹಚ್ಚಲು ಸಂದಾಯಗಾರನ ಅಧಿಕಾರ.–** ಹತ್ತು ನಯೆ ಪೈಸೆಗೆ ಮೀರದ ಶುಲ್ಕವನ್ನು ವಿಧಿಸಬಹುದಾದ ಯಾವುದೇ ವಿನಿಮಯ ಪತ್ರವನ್ನು ಅಥವಾ ಪ್ರಾಮಿಸರಿ ನೋಟನ್ನು, ಸ್ಟಾಂಪು ಹಚ್ಚದೆ ಸಂದಾಯಕ್ಕಾಗಿ ಹಾಜರುಪಡಿಸಿದಾಗ, ಯಾರ ಮುಂದೆ ಅದನ್ನು ಹಾಗೆ ಹಾಜರುಪಡಿಸಲಾಗಿದೆಯೋ ಆ ವ್ಯಕ್ತಿಯು, ಅವಶ್ಯವಾದ ಅಂಟಿಕೊಳ್ಳುವ ಸ್ಟಾಂಪನ್ನು ಅದಕ್ಕೆ ಅಂಟಿಸಬಹುದು ಮತ್ತು ಇಲ್ಲಿ ಈ ಹಿಂದೆ ಉಪಬಂಧಿಸಿರುವ ರೀತಿಯಲ್ಲಿ ಅದನ್ನು ರದ್ದುಗೊಳಿಸಿದ ಮೇಲೆ, ಅಂಥ ಬಿಲ್ಲಿನ ಅಥವಾ ನೋಟಿನ ಮೇಲೆ ಸಂದೇಯವಾದ ಮೊಬಲಗನ್ನು ಸಂದಾಯ ಮಾಡಬಹುದು ಮತ್ತು ಅದನ್ನು ಯಾರು ಸಂದಾಯ ಮಾಡಬೇಕಾಗಿತ್ತೋ ಅಂಥ ವ್ಯಕ್ತಿಗೆ ಆ ಶುಲ್ಕವನ್ನು ವಿಧಿಸಬಹುದು, ಅಥವಾ ಹಿಂದೆ ಹೇಳಿದಂತೆ ಸಂದೇಯವಾದ ಮೊತ್ತದಿಂದ ಅದನ್ನು ವಜಾಮಾಡಿಕೊಳ್ಳಬಹುದು, ಮತ್ತು ಅಂಥ ಪತ್ರವು ಅಥವಾ ನೋಟು, ಆ ಶುಲ್ಕದ ಮಟ್ಟಿಗೆ ಸರಿಯಾದುದು ಮತ್ತು ವಿಧಿಮಾನ್ಯವಾದುದೆಂದು ಭಾವಿಸಲ್ಪಡತಕ್ಕುದು:

ಪರಂತು, ಇದರಲ್ಲಿ ಇರುವುದು ಯಾವುದೂ, ಅಂಥ ಬಿಲ್ಲಿನ ಅಥವಾ ನೋಟಿನ ಸಂಬಂಧದಲ್ಲಿ ಯಾವುದೇ ದಂಡದಿಂದ ಅಥವಾ ಅವನು ಹೊಣೆಯಾಗಬಹುದಾದಂಥ ವ್ಯವಹರಣೆಯಿಂದ ಅಂಥ ಯಾವೊಬ್ಬ ವ್ಯಕ್ತಿಯನ್ನು ಮುಕ್ತಗೊಳಿಸತಕ್ಕುದಲ್ಲ.

**48. ಶುಲ್ಕಗಳು ಮತ್ತು ದಂಡಗಳ ವಸೂಲಿ.–** ಈ ಅಧ್ಯಾಯದ ಮೇರೆಗೆ ಸಂದಾಯ ಮಾಡಬೇಕಾದ ಎಲ್ಲಾ ಶುಲ್ಕಗಳನ್ನು, ದಂಡಗಳನ್ನು ಮತ್ತು ಇತರ ಮೊತ್ತಗಳನ್ನು ಯಾವ

ವ್ಯಕ್ತಿಯಿಂದ ಅವು ಬಾಕಿಯಿರುವುವೋ ಅಂಥ ವ್ಯಕ್ತಿಯ ಚರಸ್ವತ್ತಿನ ಜಪ್ತಿಯ ಮತ್ತು ಮಾರಾಟದ ಮೂಲಕ ಅಥವಾ ಭೂಕಂದಾಯದ ಬಾಕಿಯ ವಸೂಲಿಗಾಗಿ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಪ್ರಕ್ರಿಯೆಯ ಮೂಲಕ ಕಲೆಕ್ಟರನು ವಸೂಲು ಮಾಡಬಹುದು.

## ಅಧ್ಯಾಯ - V

## ಕೆಲವು ಸಂದರ್ಭಗಳಲ್ಲಿ ಸ್ಟಾಂಪುಗಳಿಗಾಗಿ ರಿಯಾಯಿತಿಗಳು

**49. ಕೆಟ್ಟುಹೋದ ಸ್ಟಾಂಪುಗಳಿಗಾಗಿ ರಿಯಾಯಿತಿ.–** ಅಗತ್ಯಪಡಿಸಬೇಕಾದ ಸಾಕ್ಷ್ಯದ, ಅಥವಾ ನಡೆಸಬೇಕಾದ ವಿಚಾರಣೆಯ ಬಗ್ಗೆ ರಾಜ್ಯಸರ್ಕಾರವು ರಚಿಸಬಹುದಾದಂಥ ನಿಯಮಗಳಿಗೊಳಪಟ್ಟು, ಕಲೆಕ್ಟರನು, 50ನೇ ಪ್ರಕರಣದಲ್ಲಿ ನಿಯಮಿಸಲಾದ ಅವಧಿಯೊಳಗೆ ಸಲ್ಲಿಸಿದ ಅರ್ಜಿಯ ಮೇಲೆ ಮತ್ತು ಅವನಿಗೆ ಸಂಗತಿಗಳ ಬಗ್ಗೆ ಮನವರಿಕೆಯಾಗಿದ್ದರೆ, ಇದರಲ್ಲಿ ಇನ್ನು ಮುಂದೆ ತಿಳಿಸಲಾದ ಸಂದರ್ಭಗಳಲ್ಲಿ ಕೆಟ್ಟುಹೋದ, ಮುದ್ರೆಹಾಕಲಾದ ಸ್ಟಾಂಪುಗಳಿಗೆ ರಿಯಾಯಿತಿಯನ್ನು ನೀಡಬಹುದು, ಎಂದರೆ:–

(ಎ) ಅಜಾಗರೂಕತೆಯಿಂದ ಮತ್ತು ಉದ್ದೇಶವಿಲ್ಲದೆ ಕೆಡಿಸಲಾದ, ಅಳಿಸಿದ ಅಥವಾ ಬರವಣಿಗೆಯ ತಪ್ಪಿನಿಂದ ಅಥವಾ ಯಾವುದೇ ಇತರ ರೀತಿಯಲ್ಲಿ, ಅದರ ಮೇಲೆ ಬರೆದ ಯಾವುದೇ ಲಿಖಿತವನ್ನು ಯಾವನೇ ವ್ಯಕ್ತಿಯು ಬರೆದುಕೊಡುವುದಕ್ಕೆ ಮುಂಚೆ ಅಪೇಕ್ಷಿಸಿದ ಉದ್ದೇಶಕ್ಕಾಗಿ ಅನುಪಯುಕ್ತಗೊಳಿಸಿದ ಯಾವುದೇ ಪತ್ರದ ಮೇಲಿನ ಸ್ಟಾಂಪು;

(ಬಿ) ಪೂರ್ಣವಾಗಿ ಅಥವಾ ಭಾಗಶಃ ಬರೆಯಲಾದ, ಆದರೆ ಅದಕ್ಕೆ ಅದರ ಯಾವನೇ ಪಕ್ಷಕಾರನು ಸಹಿ ಹಾಕಿಲ್ಲದ ಅಥವಾ ಬರೆದುಕೊಟ್ಟಿಲ್ಲದ ಯಾವುದೇ ದಸ್ತಾವೇಜಿನ ಮೇಲಿನ ಸ್ಟಾಂಪು;

(ಸಿ) ತಗಾದೆಯ ಮೇಲಲ್ಲದೆ ಇತರ ರೀತಿಯಲ್ಲಿ ಸಂದಾಯವಾಗತಕ್ಕ ವಿನಿಮಯ ಪತ್ರಗಳ ಅಥವಾ ಪ್ರಾಮಿಸರಿ ನೋಟುಗಳ ಸಂದರ್ಭದಲ್ಲಿ–

(1) ಹಣ ಪಡೆಯುವವನು ಸಹಿ ಮಾಡಿರುವ ಅಥವಾ ಅವನ ಪರವಾಗಿ ಸಹಿ ಮಾಡಲಾಗಿದ್ದು ಯಾವುದೇ ರೀತಿಯಲ್ಲಿ ಅಂಗೀಕರಿಸಿಲ್ಲದ ಅಥವಾ ಉಪಯೋಗಿಸಿಲ್ಲದ ಅಥವಾ ಅಂಗೀಕಾರಕ್ಕಾಗಿ ನೀಡುವ ರೀತಿಯನ್ನುಳಿದು ಯಾವುದೇ ಇತರ ಉದ್ದೇಶಕ್ಕಾಗಿ ತನ್ನ ಕೈಯಿಂದ ಒಪ್ಪಿಸಿಕೊಟ್ಟಿಲ್ಲದ ಯಾವುದೇ ಅಂಥ ವಿನಿಮಯ ಪತ್ರದ ಮೇಲಿನ ಸ್ಟಾಂಪು:

ಪರಂತು, ಯಾವುದೇ ಅಂಥ ಸ್ಟಾಂಪನ್ನು ಮುದ್ರೆಹಾಕಲಾದ ಕಾಗದವು, ಅದರ ಮೇಲೆ ಆ ತರುವಾಯ ಬರೆಯಬೇಕಾದ ಯಾವುದೇ ವಿನಿಮಯ ಪತ್ರದಂತೆ ಅಥವಾ ಅದರ ಅಂಗೀಕಾರಕ್ಕಾಗಿ ಉದ್ದೇಶಿಸಲಾದ ಯಾವುದೇ ಸಹಿಯನ್ನು ಹೊಂದಿರಕೂಡದು.

(2) ಬೇರೆ ಯಾವುದೇ ರೀತಿಯಲ್ಲಿ ಉಪಯೋಗಿಸದ ಅಥವಾ ತನ್ನ ಕೈಯಿಂದ ಒಪ್ಪಿಸಿಕೊಟ್ಟಿಲ್ಲದ, ಬರೆದುಕೊಡುವವನು ಸಹಿ ಮಾಡಿದ ಅಥವಾ ಅವನ ಪರವಾಗಿ ಸಹಿ ಮಾಡಲಾದ ಯಾವುದೇ ಪ್ರಾಮಿಸರಿ ನೋಟಿನ ಮೇಲಿನ ಸ್ಟಾಂಪು;

(3) ವಿನಿಮಯ ಪತ್ರದ ಅಥವಾ ಪ್ರಾಮಿಸರಿ ನೋಟಿನ ಹಣ ಪಡೆಯುವವನು ಸಹಿಮಾಡಿದ ಅಥವಾ ಅವನ ಪರವಾಗಿ ಸಹಿ ಮಾಡಲಾದ ಯಾವುದೇ ಅಂಥ ವಿನಿಮಯ ಪತ್ರದ ಅಥವಾ ಪ್ರಾಮಿಸರಿ ನೋಟಿನ ಬಗ್ಗೆ ಉಪಯೋಗಿಸಲಾದ ಅಥವಾ ಉಪಯೋಗಿಸಲು ಉದ್ದೇಶಿಸಲಾದ, ಆದರೆ ವಿನಿಮಯ ಪತ್ರವಾಗಿರುವ ಕಾರಣ ಅಂಗೀಕಾರಕ್ಕಾಗಿ ಅದನ್ನು ಒಪ್ಪಿಸಬಹುದಾಗಿದ್ದು ಅಥವಾ ಅಂಗೀಕರಿಸಬಹುದಾಗಿದ್ದು ಅಥವಾ ಹಿಂಬರಹ ಮಾಡಬಹುದಾಗಿದ್ದರೂ ಅಥವಾ ಪ್ರಾಮಿಸರಿ

ನೋಟಾಗಿರುವ ಕಾರಣ ಸಂದಾಯ ಪಡೆಯುವವನಿಗೆ ಒಪ್ಪಿಸಿ ಕೊಡಬಹುದಾಗಿದ್ದರೂ ಯಾವುದೇ ಲೋಪದಿಂದ ಅಥವಾ ದೋಷದಿಂದ ಕೆಡಿಸಿದ ಅಥವಾ ಅನುಪಯುಕ್ತಗೊಳಿಸಲಾದ ಸ್ಟಾಂಪು: ಪರಂತು, ಪೂರ್ಣಗೊಳಿಸಿದ ಅಥವಾ ಯುಕ್ತ ರೀತಿಯಲ್ಲಿ ಸ್ಟಾಂಪು ಹಚ್ಚಿದ, ಪೂರ್ವೋಕ್ತ ಲೋಪವನ್ನು ಅಥವಾ ದೋಷವನ್ನು ಸರಿಪಡಿಸುವುದನ್ನು ಹೊರತುಪಡಿಸಿ, ಕೆಟ್ಟುಹೋದ ವಿನಿಮಯ ಪತ್ರಕ್ಕೆ ಅಥವಾ ಪ್ರಾಮಿಸರಿ ನೋಟಿಗೆ ಪ್ರತಿಯೊಂದು ವಿವರಗಳಲ್ಲಿ ತದ್ರೂಪವಾಗಿರತಕ್ಕ ಇನ್ನೊಂದು ವಿನಿಮಯ ಪತ್ರವನ್ನು ಅಥವಾ ಪ್ರಾಮಿಸರಿ ನೋಟನ್ನು ಹಾಜರುಪಡಿಸಬೇಕು;

(ಡಿ) ಲಿಖಿತದ ಯಾವನೇ ಪಕ್ಷಕಾರನು ಬರೆದುಕೊಟ್ಟ ಲಿಖಿತಕ್ಕಾಗಿ ಉಪಯೋಗಿಸಲಾದ –

(1) ಪ್ರಾರಂಭದಿಂದಲೇ ಕಾನೂನಿನ ಮೇರೆಗೆ ಸಂಪೂರ್ಣವಾಗಿ ಅನೂರ್ಜಿತವಾಗಿರುವುದು ಎಂಬುದಾಗಿ ತರುವಾಯ ಕಂಡುಬಂದ;

(2) ಮೂಲತಃ ಅಪೇಕ್ಷಿಸಿದ ಉದ್ದೇಶಕ್ಕಾಗಿ ಅದರಲ್ಲಿನ ಯಾವುದೇ ತಪ್ಪಿನ ಅಥವಾ ಪ್ರಮಾದದ ಕಾರಣದಿಂದಾಗಿ ಅನುಪಯುಕ್ತವೆಂದು ತರುವಾಯ ಕಂಡುಬಂದ;

(3) ಯಾವನು ಲಿಖಿತವನ್ನು ಬರೆದುಕೊಡುವುದು ಅಗತ್ಯವಿರುವುದೋ ಆ ವ್ಯಕ್ತಿಯು ಅದನ್ನು ಬರೆದುಕೊಡದೆ ಮೃತನಾದ ಕಾರಣದಿಂದ ಅಥವಾ ಅಂಥ ಯಾವನೇ ವ್ಯಕ್ತಿಯು ಅದನ್ನು ಬರೆದುಕೊಡಲು ನಿರಾಕರಿಸಿದ ಕಾರಣದಿಂದ, ಪ್ರಸ್ತಾವಿತ ನಮೂನೆಯಲ್ಲಿ ಉದ್ದೇಶಿಸಿದ ವ್ಯವಹಾರವನ್ನು ಹಾಗೆ ಜಾರಿಗೊಳಿಸುವಂತೆ ಪೂರ್ಣಗೊಳಿಸಲಾಗದ;

(4) ಯಾವನೇ ಮುಖ್ಯ ಪಕ್ಷಕಾರನು ಅದನ್ನು ಬರೆದುಕೊಟ್ಟಿಲ್ಲದ ಕಾರಣ ಮತ್ತು ಅದಕ್ಕೆ ಸಹಿಮಾಡಲು ಅವನು ಅಸಮರ್ಥನಾಗಿರುವ ಅಥವಾ ನಿರಾಕರಿಸುವ ಕಾರಣ ಅದು ಅಪೇಕ್ಷಿತ ಉದ್ದೇಶಕ್ಕಾಗಿ ವಾಸ್ತವವಾಗಿ ಅಪೂರ್ಣವಾದ ಮತ್ತು ಸಾಕಷ್ಟಾಗಿಲ್ಲದ;

(5) ಅದರ ಮೇರೆಗೆ ಕಾರ್ಯನಿರ್ವಹಿಸಲು ಅಥವಾ ಅದರ ಮೂಲಕ ಭದ್ರಗೊಳಿಸಲು ಉದ್ದೇಶಿಸಲಾದ ಯಾವುದೇ ಹಣವನ್ನು ಮುಂಗಡವಾಗಿ ಕೊಡಲು ಯಾವನೇ ವ್ಯಕ್ತಿಯು ನಿರಾಕರಿಸಿದ ಕಾರಣದಿಂದ ಅಥವಾ ಆ ಮೂಲಕ ವಹಿಸಲಾದ ಯಾವುದೇ ಕಾರ್ಯವನ್ನು ನಿರಾಕರಿಸಿದ ಅಥವಾ ಅಂಗೀಕರಿಸದಿರುವ ಕಾರಣದಿಂದ ಒಟ್ಟಿನಲ್ಲಿ ಉದ್ದೇಶಿತ ಉದ್ದೇಶವನ್ನು ಈಡೇರಿಸಲು ವಿಫಲಗೊಂಡಾಗ;

(6) ಅದರ ಮೂಲಕ ಜಾರಿಗೊಳಿಸಲು ಉದ್ದೇಶಿಸಲಾದ ವ್ಯವಹಾರವನ್ನು ಅವರೇ ಪಕ್ಷಕಾರರ ನಡುವಣ ಮತ್ತು ಅದಕ್ಕಿಂತ ಕಡಿಮೆ ಇಲ್ಲದ ಮೌಲ್ಯದ ಸ್ಟಾಂಪು ಹೊಂದಿರುವ ಇತರ ಯಾವುದೇ ಲಿಖಿತದ ಮೂಲಕ ಜಾರಿಗೊಂಡಿದ್ದರ ಪರಿಣಾಮವಾಗಿ ಅನುಪಯುಕ್ತವಾದ;

(7) ಮೌಲ್ಯದಲ್ಲಿ ಕೊರತೆ ಇರುವ ಮತ್ತು ಅದರ ಮೂಲಕ ಜಾರಿಗೊಳಿಸಲು ಉದ್ದೇಶಿಸಲಾದ ವ್ಯವಹಾರವನ್ನು, ಅವರೇ ಪಕ್ಷಕಾರರ ನಡುವಣ ಮತ್ತು ಅದಕ್ಕಿಂತ ಕಡಿಮೆ ಇಲ್ಲದ ಮೌಲ್ಯದ ಸ್ಟಾಂಪನ್ನು ಹೊಂದಿರುವ ಇತರ ಯಾವುದೇ ಲಿಖಿತದ ಮೂಲಕ ಜಾರಿಗೊಳಿಸಲಾಗಿರುವ;

(8) ಅಜಾಗರೂಕತೆಯಿಂದ ಮತ್ತು ಉದ್ದೇಶವಿಲ್ಲದೆ ಕೆಡಿಸಲಾದ ಮತ್ತು ಯಾವುದಕ್ಕೆ ಬದಲಾಗಿ ಮತ್ತೊಂದು ಲಿಖಿತವನ್ನು ಅವರೇ ಪಕ್ಷಕಾರರ ನಡವೆ ಅದೇ ಉದ್ದೇಶಕ್ಕಾಗಿ ಬರೆದುಕೊಡಲಾದ ಮತ್ತು ಯುಕ್ತ ಸ್ಟಾಂಪನ್ನು ಹಚ್ಚಲಾದ

– ಸ್ಟಾಂಪು:

ಪರಂತು, ಬರೆದುಕೊಟ್ಟಿರುವ ಲಿಖಿತದ ಸಂದರ್ಭದಲ್ಲಿ, ಯಾವ ಕಾನೂನು ವ್ಯವಹರಣೆಯಲ್ಲಿ ಆ ಲಿಖಿತವನ್ನು ಸಾಕ್ಷ್ಯದಲ್ಲಿ ಕೊಡಲು ಸಾಧ್ಯವಾಗಿತ್ತೋ ಅಥವಾ

ಕೊಡಬಹುದಾಗಿತ್ತೋ ಅಥವಾ ಕೊಡಮಾಡಲು ಸಾಧ್ಯವಾಗಿತ್ತೋ ಅಥವಾ ಕೊಡ ಮಾಡಬಹುದಾಗಿತ್ತೋ ಆ ಯಾವುದೇ ಕಾನೂನು ವ್ಯವಹರಣೆಯು ಪ್ರಾರಂಭವಾಗಿರಬಾರದು ಮತ್ತು ಲಿಖಿತವನ್ನು ರದ್ದುಗೊಳಿಸಿರುವುದಾಗಿ ಪರಿಗಣಿಸಿರಬೇಕು.

**ವಿವರಣೆ:–** ಲಿಖಿತಕ್ಕೆ ವಿಧಿಸಬಹುದಾದ ಪೂರ್ಣ ಶುಲ್ಕವನ್ನು ಸಂದಾಯ ಮಾಡಲಾಗಿದೆ ಎಂದು 32ನೇ ಪ್ರಕರಣದ ಮೇರೆಗಿನ ಕಲೆಕ್ಟರನ ಪ್ರಮಾಣಪತ್ರವು ಈ ಪ್ರಕರಣದ ಅರ್ಥವ್ಯಾಪ್ತಿಯಲ್ಲಿ ಮುದ್ರೆಹಾಕಲಾದ ಸ್ಟಾಂಪು ಆಗಿರುತ್ತದೆ.

**50. 49ನೇ ಪ್ರಕರಣದ ಮೇರೆಗೆ ಪರಿಹಾರಕ್ಕಾಗಿ ಅರ್ಜಿಯನ್ನು ಯಾವಾಗ ಸಲ್ಲಿಸುವುದು.–** 49ನೇ ಪ್ರಕರಣದ ಮೇರೆಗೆ ಪರಿಹಾರಕ್ಕಾಗಿ ಅರ್ಜಿಯನ್ನು ಈ ಕೆಳಕಂಡ ಅವಧಿಗಳ ಒಳಗಾಗಿ ಸಲ್ಲಿಸತಕ್ಕುದು, ಎಂದರೆ:–

(1) (ಡಿ) (5)ನೇ ಖಂಡದಲ್ಲಿ ನಮೂದಿಸಲಾದ ಸಂದರ್ಭಗಳಲ್ಲಿ, ಲಿಖಿತದ ದಿನಾಂಕದ ಎರಡು ತಿಂಗಳುಗಳ ಒಳಗೆ;

(2) ಯಾವ ಸ್ಟಾಂಪು ಕಾಗದದ ಮೇಲೆ ಲಿಖಿತದ ಯಾವನೇ ಪಕ್ಷಕಾರನು ಅದನ್ನು ಬರೆದುಕೊಟ್ಟಿಲ್ಲವೋ ಆ ಸ್ಟಾಂಪು ಕಾಗದದ ಸಂದರ್ಭದಲ್ಲಿ, ಸ್ಟಾಂಪನ್ನು ಕೆಡಿಸಿದ ತರುವಾಯ ಆರು ತಿಂಗಳುಗಳ ಒಳಗೆ;

(3) ಯಾವ ಸ್ಟಾಂಪು ಕಾಗದದ ಮೇಲೆ ಲಿಖಿತದ ಯಾವನೇ ಪಕ್ಷಕಾರನು ಅದನ್ನು ಬರೆದುಕೊಟ್ಟಿರುವನೋ ಆ ಸ್ಟಾಂಪು ಕಾಗದದ ಸಂದರ್ಭದಲ್ಲಿ, ಲಿಖಿತದ ದಿನಾಂಕದ ತರುವಾಯ, ಆರು ತಿಂಗಳುಗಳ ಒಳಗೆ ಅಥವಾ ಅದಕ್ಕೆ ದಿನಾಂಕವಿಲ್ಲದಿದ್ದರೆ ಅದನ್ನು ಮೊದಲಲ್ಲಿ ಅಥವಾ ಒಂಟಿಯಾಗಿ ಬರೆದುಕೊಟ್ಟ ವ್ಯಕ್ತಿಯು ಅದನ್ನು ಬರೆದುಕೊಟ್ಟ ತರುವಾಯ ಆರು ತಿಂಗಳುಗಳ ಒಳಗೆ:

– ಪರಂತು

(ಎ) ಕೆಟ್ಟುಹೋದ ಲಿಖಿತವನ್ನು, ಸಾಕಷ್ಟು ಕಾರಣಗಳಿಗಾಗಿ, ಭಾರತದ ಹೊರಗೆ ಕಳುಹಿಸಿದಾಗ ಅದನ್ನು ಭಾರತದಲ್ಲಿ ಮರಳಿ ಸ್ವೀಕರಿಸಿದ ತರುವಾಯ, ಆರು ತಿಂಗಳುಗಳ ಒಳಗೆ ಅರ್ಜಿಯನ್ನು ಸಲ್ಲಿಸಬಹುದು;

(ಬಿ) ಅನಿವಾರ್ಯ ಸಂದರ್ಭಗಳಿಂದ, ಯಾವ ಲಿಖಿತಕ್ಕೆ ಬದಲಾಗಿ ಇನ್ನೊಂದು ಲಿಖಿತವನ್ನು ಬಳಸಲಾಗಿದೆಯೋ ಆ ಯಾವುದೇ ಲಿಖಿತವನ್ನು, ಹಿಂದೆ ಹೇಳಿದ ಅವಧಿಯೊಳಗೆ ರದ್ದಾಗಿದೆ ಎಂದು ಪರಿಗಣಿಸಲು ಸಾಧ್ಯವಿಲ್ಲದಿದ್ದರೆ, ಹಾಗೆ ಬದಲಿಯಾಗಿ ಬಳಸಿದ ಲಿಖಿತವನ್ನು ಬರೆದುಕೊಟ್ಟ ದಿನಾಂಕದ ತರುವಾಯ ಆರು ತಿಂಗಳುಗಳ ಒಳಗೆ ಸಲ್ಲಿಸಬಹುದು.

**51. ಮುದ್ರಿತ ನಮೂನೆಗಳ ಸಂದರ್ಭದಲ್ಲಿ ರಿಯಾಯಿತಿಯು ನಿಗಮಗಳಿಗೆ ಇನ್ನು ಮುಂದೆ ಅಗತ್ಯವಾಗಿಲ್ಲದಿರುವುದು.–** ಮುಖ್ಯ ನಿಯಂತ್ರಕ ರೆವಿನ್ಯೂ ಅಧಿಕಾರಿಯು ಅಥವಾ ಈ ಬಗ್ಗೆ ಮುಖ್ಯ ನಿಯಂತ್ರಕ ರೆವಿನ್ಯೂ ಅಧಿಕಾರಿಯು ಅಧಿಕೃತಗೊಳಿಸಿದರೆ, ಕಲೆಕ್ಟರನು, ಕಾಲಮಿತಿಯಿಲ್ಲದೆ, ಯಾವನೇ ಬ್ಯಾಂಕರ್‌ನು ಅಥವಾ ಯಾವುದೇ ನಿಗಮಿತ ಕಂಪನಿಗಳು ಅಥವಾ ಇತರ ನಿಗಮಿತ ನಿಕಾಯವು ಲಿಖಿತಗಳ ಮುದ್ರಿತ ನಮೂನೆಗಳಿಗಾಗಿ ಉಪಯೋಗಿಸಿದ ಸ್ಟಾಂಪು ಹಾಕಿದ ಕಾಗದಗಳಿಗಾಗಿ, ಯಾವುದೇ ಸಾಕಷ್ಟು ಕಾರಣಕ್ಕಾಗಿ ಅಂಥ ನಮೂನೆಗಳು ಸದರಿ ಬ್ಯಾಂಕರ್‌ಗೆ, ಕಂಪನಿಗೆ ಅಥವಾ ನಿಗಮಿತ ನಿಕಾಯಕ್ಕೆ ಅಗತ್ಯವಾಗಿರುವುದು ಸಮಾಪ್ತವಾಗಿದ್ದರೆ, ರಿಯಾಯಿತಿಯನ್ನು ನೀಡಬಹುದು:

ಪರಂತು, ಅಂಥ ಸ್ಟಾಂಪು ಹಾಕಿದ ಕಾಗದದ ಸಂಬಂಧದಲ್ಲಿ ಶುಲ್ಕವನ್ನು ಯುಕ್ತವಾಗಿ ಸಂದಾಯ ಮಾಡಲಾಗಿದೆ ಎಂದು ಅಂಥ ಅಧಿಕಾರಿಗೆ ಮನದಟ್ಟಾಗಿರಬೇಕು.

**52. ದುರುಪಯೋಗಪಡಿಸಲಾದ ಸ್ಟಾಂಪುಗಳಿಗಾಗಿ ರಿಯಾಯಿತಿ.**- (ಎ) ಯಾವನೇ ವ್ಯಕ್ತಿಯು, ಶುಲ್ಕವನ್ನು ವಿಧಿಸಬಹುದಾದ ಲಿಖಿತಕ್ಕಾಗಿ ಈ ಅಧಿನಿಯಮದ ಮೇರೆಗೆ ರಚಿತವಾದ ನಿಯಮಗಳ ಮೂಲಕ ಅಂಥ ಲಿಖಿತಕ್ಕಾಗಿ ನಿಯಮಿಸಲಾದಂಥ ವಿವರಣೆಯ ಸ್ಟಾಂಪಿಗೆ ಹೊರತಾದ ಸ್ಟಾಂಪನ್ನು ಅಥವಾ ಅವಶ್ಯವಾದ ಮೌಲ್ಯಕ್ಕಿಂತ ಅಧಿಕ ಮೌಲ್ಯದ ಸ್ಟಾಂಪನ್ನು ಅಜಾಗರೂಕತೆಯಿಂದ ಉಪಯೋಗಿಸಿದರೆ ಅಥವಾ ಯಾವುದೇ ಶುಲ್ಕವನ್ನು ವಿಧಿಸತಕ್ಕುದಲ್ಲದ ಲಿಖಿತಕ್ಕೆ ಯಾವುದೇ ಸ್ಟಾಂಪನ್ನು ಅಜಾಗರೂಕತೆಯಿಂದ ಉಪಯೋಗಿಸಿದಾಗ; ಅಥವಾ

(ಬಿ) ಲಿಖಿತಕ್ಕಾಗಿ ಉಪಯೋಗಿಸಲಾದ ಯಾವುದೇ ಸ್ಟಾಂಪನ್ನು 13ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ, ಅಂಥ ಲಿಖಿತವನ್ನು ಬರೆಯಲಾಗಿದೆ ಎಂಬ ಕಾರಣದಿಂದ, 15ನೇ ಪ್ರಕರಣದ ಮೇರೆಗೆ ಅಜಾಗರೂಕತೆಯಿಂದ ನಿರುಪಯುಕ್ತಗೊಳಿಸಿದಾಗ

- ಕಲೆಕ್ಟರನು, ಲಿಖಿತದ ದಿನಾಂಕದ ತರುವಾಯ ಆರು ತಿಂಗಳೊಳಗಾಗಿ ಅಥವಾ ದಿನಾಂಕವಿಲ್ಲದಿದ್ದರೆ, ಯಾವ ವ್ಯಕ್ತಿಯು ಯಾರಿಂದ ಅದನ್ನು ಮೊದಲಲ್ಲಿ ಅಥವಾ ಒಂಟಿಯಾಗಿ ಬರೆದುಕೊಟ್ಟನೋ ಅವನು ಅದನ್ನು ಹಾಗೆ ಬರೆದುಕೊಟ್ಟ ತರುವಾಯ ಆರು ತಿಂಗಳೊಳಗಾಗಿ ಸಲ್ಲಿಸಿದ ಅರ್ಜಿಯ ಮೇಲೆ ಮತ್ತು ಲಿಖಿತಕ್ಕೆ ಶುಲ್ಕವನ್ನು ವಿಧಿಸಬೇಕಾಗಿದ್ದಲ್ಲಿ ಅದಕ್ಕೆ ಯುಕ್ತವಾದ ಶುಲ್ಕದ ಸ್ಟಾಂಪನ್ನು ಪುನಃ ಹಚ್ಚಿದರೆ, ಹಾಗೆ ದುರುಪಯೋಗಪಡಿಸಲಾದ ಅಥವಾ ನಿರುಪಯುಕ್ತಗೊಳಿಸಲಾದ ಅಂಥ ಸ್ಟಾಂಪನ್ನು ರದ್ದುಗೊಳಿಸಬಹುದು ಮತ್ತು ಕೆಟ್ಟು ಹೋಗಿರುವುದಾಗಿ ಆ ಬಗ್ಗೆ ರಿಯಾಯಿತಿಯನ್ನು ಕೊಡಬಹುದು.

**53. ಕೆಟ್ಟುಹೋದ ಅಥವಾ ದುರುಪಯೋಗಪಡಿಸಲಾದ ಸ್ಟಾಂಪುಗಳಿಗಾಗಿ ರಿಯಾಯಿತಿಯನ್ನು ಹೇಗೆ ಕೊಡುವುದು.**- ಕೆಟ್ಟುಹೋದ ಅಥವಾ ದುರುಪಯೋಗಪಡಿಸಲಾದ ಸ್ಟಾಂಪುಗಳಿಗಾಗಿ ರಿಯಾಯಿತಿಯನ್ನು ಕೊಡಲಾದಂಥ ಯಾವುದೇ ಸಂದರ್ಭದಲ್ಲಿ, ಕಲೆಕ್ಟರನು, ಅವುಗಳಿಗೆ ಬದಲಾಗಿ,-

(ಎ) ಅದೇ ವಿವರಣೆಯ ಮತ್ತು ಮೌಲ್ಯದ ಇತರ ಸ್ಟಾಂಪುಗಳನ್ನು; ಅಥವಾ

(ಬಿ) ಅಗತ್ಯಪಡಿಸಲಾದರೆ ಮತ್ತು ಅವನು ಯುಕ್ತವೆಂದು ಭಾವಿಸಿದರೆ, ಮೌಲ್ಯದಲ್ಲಿ ಅದೇ ಮೊಬಲಗಿನ ಯಾವುದೇ ಇತರ ವಿವರಣೆಯ ಸ್ಟಾಂಪುಗಳನ್ನು; ಅಥವಾ

(ಸಿ) ಅವನ ವಿವೇಚನಾನುಸಾರ, ಪ್ರತಿ ರೂಪಾಯಿಗೆ ಅಥವಾ ರೂಪಾಯಿಯ ಭಾಗಕ್ಕೆ ಹತ್ತು ನಯೆ ಪೈಸೆಯನ್ನು ಕಳೆದು

- ಹಣದ ರೂಪದಲ್ಲಿ ಅದೇ ಮೌಲ್ಯವನ್ನು ಕೊಡಬಹುದು.

**54. ಉಪಯೋಗಿಸಲು ಅಗತ್ಯವಿಲ್ಲದ ಸ್ಟಾಂಪುಗಳಿಗಾಗಿ ರಿಯಾಯಿತಿ.**- ಯಾವನೇ ವ್ಯಕ್ತಿಯು, ಕೆಟ್ಟುಹೋಗದಿರುವ ಅಥವಾ ಅಪೇಕ್ಷಿತ ಉದ್ದೇಶಕ್ಕಾಗಿ ಅನುಪಯುಕ್ತವನ್ನಾಗಿ ಅಥವಾ ನಿರುಪಯುಕ್ತವನ್ನಾಗಿ ಮಾಡದಂಥ ಸ್ಟಾಂಪನ್ನು ಅಥವಾ ಸ್ಟಾಂಪುಗಳನ್ನು ಹೊಂದಿದ್ದು, ಅವನಿಗೆ ಅವುಗಳಿಂದ ಆ ಕೂಡಲೇ ಯಾವುದೇ ಉಪಯೋಗವಿಲ್ಲದಿದ್ದರೆ, ಕಲೆಕ್ಟರನು, ಅಂಥ ವ್ಯಕ್ತಿಗೆ, ಪ್ರತಿ ರೂಪಾಯಿಗೆ ಅಥವಾ ರೂಪಾಯಿಯ ಭಾಗಕ್ಕೆ ಹತ್ತು ನಯೆ ಪೈಸೆಯನ್ನು ಕಳೆದು ಅಂಥ ಸ್ಟಾಂಪಿನ ಅಥವಾ ಸ್ಟಾಂಪುಗಳ ಮೌಲ್ಯವನ್ನು, ಅಂಥ ವ್ಯಕ್ತಿಯು ರದ್ದುಗೊಳಿಸಲು ಅದನ್ನು ಒಪ್ಪಿಸಿದ ಮೇಲೆ ಮತ್ತು -

(ಎ) ಅಂಥ ಸ್ಟಾಂಪು ಅಥವಾ ಸ್ಟಾಂಪುಗಳನ್ನು, ಅವುಗಳನ್ನು ಉಪಯೋಗಿಸಲು ಪ್ರಾಮಾಣಿಕವಾದ ಉದ್ದೇಶದಿಂದ ಅಂಥ ವ್ಯಕ್ತಿಯು ಖರೀದಿಸಿದ್ದಾನೆ, ಮತ್ತು

(ಬಿ) ಅವನು ಅದರ ಪೂರ್ಣಬೆಲೆಯನ್ನು ಸಂದಾಯ ಮಾಡಿದ್ದಾನೆ, ಮತ್ತು

(ಸಿ) ಅವುಗಳನ್ನು ಹಾಗೆ ಒಪ್ಪಿಸಿಕೊಟ್ಟ ದಿನಾಂಕಕ್ಕೆ ನಿಕಟಪೂರ್ವದ ಆರುತಿಂಗಳ ಅವಧಿಯೊಳಗಾಗಿ ಹಾಗೆ ಖರೀದಿಸಲಾಗಿದೆ

– ಎಂದು ಕಲೆಕ್ಟರನಿಗೆ ಮನವರಿಕೆಯಾಗುವಂತೆ ರುಜುವಾತುಪಡಿಸಿದ ಮೇಲೆ ಮರುಸಂದಾಯ ಮಾಡತಕ್ಕುದು:

ಪರಂತು, ವ್ಯಕ್ತಿಯು ಲೈಸೆನ್ಸು ಪಡೆದಿರುವ ಸ್ಟಾಂಪು ಮಾರಾಟಗಾರನಾಗಿರುವಲ್ಲಿ ಕಲೆಕ್ಟರನು, ತಾನು ಯುಕ್ತವೆಂದು ಭಾವಿಸಿದರೆ, ಹಿಂದೆ ಹೇಳಿದಂತೆ ಯಾವುದೇ ಕಳೆತವಿಲ್ಲದೆಯೇ ಆ ಮಾರಾಟಗಾರನು ವಾಸ್ತವಿಕವಾಗಿ ಸಂದಾಯ ಮಾಡಿದ ಮೊತ್ತವನ್ನು ಮರುಸಂದಾಯ ಮಾಡಬಹುದು.

**54ಎ. ಆಣೆಗಳ ವರ್ಗಗಳ ಸ್ಟಾಂಪುಗಳಿಗಾಗಿ ರಿಯಾಯಿತಿಗಳು.–** 54ನೇ ಪ್ರಕರಣದಲ್ಲಿ ಏನೇ ಇದ್ದರೂ, ನಾಲ್ಕು ಆಣೆಗಳ ಅಥವಾ ಅದರ ಗುಣಕಗಳ ವರ್ಗಗಳ ಹೊರತಾದ, ಯಾವುದೇ ವರ್ಗಗಳಲ್ಲಿ ಯಾವನೇ ವ್ಯಕ್ತಿಯು, ಸ್ಟಾಂಪನ್ನು ಅಥವಾ ಸ್ಟಾಂಪುಗಳನ್ನು ಹೊಂದಿದ್ದು, ಅಂಥ ಸ್ಟಾಂಪು ಅಥವಾ ಸ್ಟಾಂಪುಗಳು ಕೆಟ್ಟುಹೋಗಿಲ್ಲದಿರುವಲ್ಲಿ, ಕಲೆಕ್ಟರನು ಅಂಥ ವ್ಯಕ್ತಿಯು ಭಾರತ ಸ್ಟಾಂಪು (ತಿದ್ದುಪಡಿ) ಅಧಿನಿಯಮ, 1958ರ ಪ್ರಾರಂಭದಿಂದ ಆರು ತಿಂಗಳೊಳಗಾಗಿ ಅವನಿಗೆ ಅಂಥ ಸ್ಟಾಂಪನ್ನು ಅಥವಾ ಸ್ಟಾಂಪುಗಳನ್ನು ಒಪ್ಪಿಸಿದ ಮೇಲೆ ಅಂಥ ವ್ಯಕ್ತಿಗೆ ಭಾರತ ನಾಣ್ಯ ತಯಾರಿಕೆ ಅಧಿನಿಯಮ, 1906ರ 14ನೇ ಪ್ರಕರಣದ (2)ನೇ ಉಪ-ಪ್ರಕರಣದ ಉಪಬಂಧಗಳಿಗನುಸಾರವಾಗಿ ಲೆಕ್ಕಹಾಕಲಾದ ಹಣದ ರೂಪದಲ್ಲಿ ಅಂಥ ಸ್ಟಾಂಪಿನ ಅಥವಾ ಸ್ಟಾಂಪುಗಳ ಮೌಲ್ಯವನ್ನು, ಮರು ಸಂದಾಯ ಮಾಡತಕ್ಕುದು.

**54ಬಿ. ನಿರಾಶ್ರಿತ ಪರಿಹಾರ ಸ್ಟಾಂಪುಗಳಿಗಾಗಿ ರಿಯಾಯಿತಿಗಳು.–** 54ನೇ ಪ್ರಕರಣದಲ್ಲಿ ಏನೇ ಇದ್ದರೂ, "ನಿರಾಶ್ರಿತ ಪರಿಹಾರ" ಎಂಬ ಬರಹವನ್ನು ಹೊಂದಿರುವ ಸ್ಟಾಂಪುಗಳನ್ನು (3ಎ ಪ್ರಕರಣವನ್ನು ಲೋಪಿಸುವುದಕ್ಕೆ ಮುಂಚೆ ಅದಕ್ಕೆ ಅನುಸಾರವಾಗಿ ನೀಡಲಾದ ಸ್ಟಾಂಪುಗಳು) ಯಾವನೇ ವ್ಯಕ್ತಿಯು ಹೊಂದಿದ್ದರೆ ಮತ್ತು ಅಂಥ ಸ್ಟಾಂಪುಗಳು ಕೆಟ್ಟು ಹೋಗಿಲ್ಲದಿದ್ದರೆ, ಕಲೆಕ್ಟರನು ಅಂಥ ವ್ಯಕ್ತಿಯು ನಿರಾಶ್ರಿತ ಪರಿಹಾರ ತೆರಿಗೆಗಳ (ರದ್ದಿಯಾತಿ) ಅಧಿನಿಯಮ, 1973ರ ಪ್ರಾರಂಭದಿಂದ ಆರು ತಿಂಗಳೊಳಗಾಗಿ, ಅಂಥ ಸ್ಟಾಂಪುಗಳನ್ನು ತನಗೆ ಒಪ್ಪಿಸಿದ ಮೇಲೆ ಹಣದ ರೂಪದಲ್ಲಿ ಅಂಥ ಸ್ಟಾಂಪುಗಳ ಮೌಲ್ಯವನ್ನು ಅಂಥ ವ್ಯಕ್ತಿಗೆ ಮರುಪಾವತಿ ಮಾಡತಕ್ಕುದು ಅಥವಾ ಅದೇ ಮೌಲ್ಯದ ಇತರ ಸ್ಟಾಂಪುಗಳನ್ನು ಅದಕ್ಕೆ ಬದಲಾಗಿ ಕೊಡತಕ್ಕುದು:

ಪರಂತು, ರಾಜ್ಯ ಸರ್ಕಾರವು, ಅಂಥ ಮರುಪಾವತಿಗಳ ಕ್ಲೇಮುಗಳ ತ್ವರಿತ ವಿಲೆಯನ್ನು ಸುಗಮಗೊಳಿಸುವ ದೃಷ್ಟಿಯಿಂದ, ಅದು ಸೂಕ್ತವೆಂದು ಭಾವಿಸಬಹುದಾದಂಥ ರೀತಿಯಲ್ಲಿ ಅಂಥ ಮರುಪಾವತಿಯನ್ನು ಕ್ಲೇಮು ಮಾಡಲು ಅನುಸರಿಸಬಹುದಾದಂಥ ಇತರ ಯಾವುದೇ ಪ್ರಕ್ರಿಯೆಯನ್ನು ನಿರ್ದಿಷ್ಟಪಡಿಸಬಹುದು.

**55. ಕೆಲವು ಡಿಬೆಂಚರುಗಳ ನವೀಕರಣದ ಮೇಲೆ ರಿಯಾಯಿತಿ.–** ಯುಕ್ತವಾಗಿ ಸ್ಟಾಂಪು ಹಚ್ಚಲಾದ ಯಾವುದೇ ಡಿಬೆಂಚರನ್ನು, ಅದೇ ನಿಬಂಧನೆಗಳ ಮೇಲೆ ಹೊಸ ಡಿಬೆಂಚರನ್ನು ಹೊರಡಿಸಿ ನವೀಕರಿಸಿದಾಗ ಆ ತರುವಾಯ ಒಂದು ತಿಂಗಳೊಳಗಾಗಿ ಅರ್ಜಿಯನ್ನು ಸಲ್ಲಿಸಿದ ಮೇಲೆ,

ಕಲೆಕ್ಟರನು ಮೂಲ ಡಿಬೆಂಚರಿನ ಮೇಲಣ ಸ್ಟಾಂಪಿನ ಅಥವಾ ಹೊಸ ಡಿಬೆಂಚರಿನ ಮೇಲಣ ಸ್ಟಾಂಪಿನ ಮೌಲ್ಯ-ಇವೆರಡರಲ್ಲಿ ಯಾವುದು ಕಡಿಮೆಯೋ ಅದನ್ನು ಅಂಥ ಡಿಬೆಂಚರನ್ನು ಹೊರಡಿಸುವ ವ್ಯಕ್ತಿಗೆ ಮರು ಸಂದಾಯ ಮಾಡತಕ್ಕುದು:

ಪರಂತು, ಮೂಲ ಡಿಬೆಂಚರನ್ನು, ಕಲೆಕ್ಟರನ ಮುಂದೆ ಹಾಜರುಪಡಿಸಿರಬೇಕು ಮತ್ತು ರಾಜ್ಯಸರ್ಕಾರವು ನಿರ್ದೇಶಿಸಬಹುದಾದಂಥ ರೀತಿಯಲ್ಲಿ ಅವನು ಅದನ್ನು ರದ್ದುಗೊಳಿಸಿರಬೇಕು.

**ವಿವರಣೆ:-** ಡಿಬೆಂಚರನ್ನು ಈ ಕೆಳಕಂಡ ಬದಲಾವಣೆಗಳು ಇದ್ದರೂ, ಈ ಪ್ರಕರಣದ ಅರ್ಥ ವ್ಯಾಪ್ತಿಯೊಳಗೆ ಅವೇ ನಿಬಂಧನೆಗಳ ಮೇಲೆ ನವೀಕರಿಸಲಾಗಿದೆ ಎಂಬುದಾಗಿ ಭಾವಿಸತಕ್ಕುದು.

(ಎ) ಒಂದು ಮೂಲ ಡಿಬೆಂಚರಿಗೆ ಬದಲಾಗಿ ಎರಡು ಅಥವಾ ಹೆಚ್ಚು ಡಿಬೆಂಚರುಗಳನ್ನು ಹೊರಡಿಸಿದ್ದು ಭದ್ರಗೊಳಿಸಿದ ಒಟ್ಟು ಮೊಬಲಗು ಅದೇ ಆಗಿರುವುದು;

(ಬಿ) ಎರಡು ಅಥವಾ ಹೆಚ್ಚು ಮೂಲ ಡಿಬೆಂಚರುಗಳಿಗೆ ಬದಲಾಗಿ ಒಂದು ಡಿಬೆಂಚರನ್ನು ಹೊರಡಿಸಿದ್ದು ಭದ್ರಗೊಳಿಸಿದ ಒಟ್ಟು ಮೊಬಲಗು ಅದೇ ಆಗಿರುವುದು;

(ಸಿ) ಮೂಲ ಧಾರಕನ ಹೆಸರಿಗೆ ಬದಲಾಗಿ ನವೀಕರಿಸುವ ಸಮಯದಲ್ಲಿ ಧಾರಕನ ಹೆಸರನ್ನು ಸೇರಿಸುವುದು; ಮತ್ತು

(ಡಿ) ಬಡ್ಡಿಯ ದರದ ಅಥವಾ ಅದರ ಸಂದಾಯದ ದಿನಾಂಕಗಳನ್ನು ವ್ಯತ್ಯಾಸಗೊಳಿಸುವುದು.

## ಅಧ್ಯಾಯ - VI

## ಉಲ್ಲೇಖ ಮತ್ತು ಪರಿಷ್ಕರಣೆ

**56. ಮುಖ್ಯ ನಿಯಂತ್ರಕ ರೆವಿನ್ಯೂ ಪ್ರಾಧಿಕಾರಿಯ ನಿಯಂತ್ರಣ ಮತ್ತು ಅವನಿಗೆ ವಿಷಯದ ನಿರೂಪಣೆ.-** (1) ಅಧ್ಯಾಯ IV ಮತ್ತು Vರ ಮೇರೆಗೆ ಮತ್ತು 26ನೇ ಪ್ರಕರಣದ ಒಂದನೇ ಪರಂತುಕದ (ಎ) ಖಂಡದ ಮೇರೆಗೆ ಕಲೆಕ್ಟರನು ಚಲಾಯಿಸಬಹುದಾದ ಅಧಿಕಾರಗಳು, ಎಲ್ಲಾ ಪ್ರಕರಣಗಳಲ್ಲಿಯೂ ಮುಖ್ಯ ನಿಯಂತ್ರಕ ರೆವಿನ್ಯೂ ಪ್ರಾಧಿಕಾರಿಯ ನಿಯಂತ್ರಣಕ್ಕೆ ಒಳಪಟ್ಟಿರತಕ್ಕುದು.

(2) 31ನೇ ಪ್ರಕರಣದ, 40ನೇ ಪ್ರಕರಣದ ಅಥವಾ 41ನೇ ಪ್ರಕರಣದ ಮೇರೆಗೆ ಕಾರ್ಯ ನಿರ್ವಹಿಸುತ್ತಿರುವ ಯಾವನೇ ಕಲೆಕ್ಟರನು, ಯಾವುದೇ ಲಿಖಿತಕ್ಕೆ ವಿಧಿಸಬಹುದಾದ ಶುಲ್ಕದ ಮೊಬಲಗಿನ ಬಗ್ಗೆ ಅವನಿಗೆ ಸಂದೇಹ ಉಂಟಾದರೆ, ಅವನು ಆ ಪ್ರಕರಣದ ವಿವರಣೆಯನ್ನು ತಯಾರಿಸಿ ಅದರ ಮೇಲೆ ತನ್ನ ಸ್ವಂತ ಅಭಿಪ್ರಾಯವನ್ನು ದಾಖಲಿಸಿ ಮುಖ್ಯ ನಿಯಂತ್ರಕ ರೆವಿನ್ಯೂ ಪ್ರಾಧಿಕಾರಿಯ ತೀರ್ಮಾನಕ್ಕಾಗಿ ಅದನ್ನು ಅವನಿಗೆ ಉಲ್ಲೇಖಿಸಬಹುದು.

(3) ಅಂಥ ಪ್ರಾಧಿಕಾರಿಯು ಆ ಪ್ರಕರಣವನ್ನು ಪರ್ಯಾಲೋಚಿಸತಕ್ಕುದು ಮತ್ತು ತನ್ನ ತೀರ್ಮಾನದ ಒಂದು ಪ್ರತಿಯನ್ನು ಕಲೆಕ್ಟರನಿಗೆ ಕಳುಹಿಸಿಕೊಡತಕ್ಕುದು ಮತ್ತು ಕಲೆಕ್ಟರನು, ಅಂಥ ತೀರ್ಮಾನಕ್ಕನುಸಾರವಾಗಿ ಶುಲ್ಕವನ್ನು (ಯಾವುದಾದರೂ ಇದ್ದರೆ) ನಿರ್ಧರಿಸಲು ಮತ್ತು ವಿಧಿಸಲು ಕ್ರಮ ಕೈಗೊಳ್ಳತಕ್ಕುದು.

**57. ಮುಖ್ಯ ನಿಯಂತ್ರಕ ರೆವಿನ್ಯೂ ಪ್ರಾಧಿಕಾರಿಯು ಉಚ್ಚ ನ್ಯಾಯಾಲಯಕ್ಕೆ ಪ್ರಕರಣದ ವಿವರಣೆಯನ್ನು ಸಲ್ಲಿಸುವುದು.-** (1) ಮುಖ್ಯ ನಿಯಂತ್ರಕ ರೆವಿನ್ಯೂ ಪ್ರಾಧಿಕಾರಿಯು, 56ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ತನಗೆ ಉಲ್ಲೇಖಿಸಿದ ಅಥವಾ ಬೇರೆ ರೀತಿಯಲ್ಲಿ ತನ್ನ ಗಮನಕ್ಕೆ ಬರುವ ಯಾವುದೇ ಪ್ರಕರಣವನ್ನು ನಿರೂಪಿಸಬಹುದು ಮತ್ತು ಅಂಥ ಪ್ರಕರಣವನ್ನು ಅದರ ಮೇಲೆ ತನ್ನ ಸ್ವಂತ ಅಭಿಪ್ರಾಯವನ್ನು ದಾಖಲಿಸಿ -

(ಎ) ಅದು ರಾಜ್ಯದಲ್ಲಿ ಉದ್ಭವಿಸಿದ್ದರೆ, ಆ ರಾಜ್ಯದ ಉಚ್ಚ ನ್ಯಾಯಾಲಯಕ್ಕೆ;

(ಬಿ) ಅದು ದೆಹಲಿಯ ಒಕ್ಕೂಟ ರಾಜ್ಯಕ್ಷೇತ್ರದಲ್ಲಿ ಉದ್ಭವಿಸಿದ್ದರೆ, ದೆಹಲಿಯ ಉಚ್ಚ ನ್ಯಾಯಾಲಯಕ್ಕೆ;

(ಸಿ) ಅದು, ಅರುಣಾಚಲ ಪ್ರದೇಶದ ಅಥವಾ ಮಿಜೋರಾಮಿನ ಒಕ್ಕೂಟ ರಾಜ್ಯಕ್ಷೇತ್ರದಲ್ಲಿ ಉದ್ಭವಿಸಿದ್ದರೆ, ಗೌಹಾಟಿ ಉಚ್ಚ ನ್ಯಾಯಾಲಯಕ್ಕೆ (ಅಸ್ಸಾಂ, ನಾಗಾಲ್ಯಾಂಡ್, ಮೇಘಾಲಯ ಮಣಿಪುರ ಮತ್ತು ತ್ರಿಪುರದ ಉಚ್ಚ ನ್ಯಾಯಾಲಯ);

(ಡಿ) ಅದು, ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳ ಒಕ್ಕೂಟ ರಾಜ್ಯಕ್ಷೇತ್ರದಲ್ಲಿ ಉದ್ಭವಿಸಿದ್ದರೆ, ಕಲ್ಕತ್ತದ ಉಚ್ಚ ನ್ಯಾಯಾಲಯಕ್ಕೆ;

(ಇ) ಅದು, ಲಕ್ಷದ್ವೀಪದ ಒಕ್ಕೂಟ ರಾಜ್ಯಕ್ಷೇತ್ರದಲ್ಲಿ ಉದ್ಭವಿಸಿದ್ದರೆ, ಕೇರಳದ ಉಚ್ಚ ನ್ಯಾಯಾಲಯಕ್ಕೆ;

(ಇಇ) ಅದು, ಚಂಡೀಘಡದ ಒಕ್ಕೂಟ ರಾಜ್ಯಕ್ಷೇತ್ರದಲ್ಲಿ ಉದ್ಭವಿಸಿದ್ದರೆ, ಪಂಜಾಬ್ ಮತ್ತು ಹರಿಯಾಣದ ಉಚ್ಚ ನ್ಯಾಯಾಲಯಕ್ಕೆ;

(ಎಫ್) ಅದು ದಾದ್ರಾ ಮತ್ತು ನಗರ ಹವೇಲಿಯ ಒಕ್ಕೂಟ ರಾಜ್ಯಕ್ಷೇತ್ರದಲ್ಲಿ ಉದ್ಭವಿಸಿದ್ದರೆ, ಮುಂಬಯಿಯ ಉಚ್ಚ ನ್ಯಾಯಾಲಯಕ್ಕೆ

– ಉಲ್ಲೇಖಿಸತಕ್ಕುದು.

(2) ಅಂಥ ಪ್ರತಿಯೊಂದು ಪ್ರಕರಣವನ್ನು, ಅದನ್ನು ಯಾವ ಉಚ್ಚ ನ್ಯಾಯಾಲಯಕ್ಕೆ ಉಲ್ಲೇಖಿಸಲಾಗಿದೆಯೋ ಆ ಉಚ್ಚ ನ್ಯಾಯಾಲಯದ ಮೂವರು ನ್ಯಾಯಾಧೀಶರುಗಳಿಗಿಂತ ಕಡಿಮೆಯಿಲ್ಲದ ನ್ಯಾಯಾಧೀಶರು ತೀರ್ಮಾನಿಸತಕ್ಕುದು, ಮತ್ತು ಭಿನ್ನಾಭಿಪ್ರಾಯದ ಸಂದರ್ಭದಲ್ಲಿ, ಬಹುಮತದ ಅಭಿಪ್ರಾಯವು ಮಾನ್ಯವಾಗತಕ್ಕುದು.

**58. ನಿರೂಪಿಸಲಾದ ಪ್ರಕರಣದ ಹೆಚ್ಚಿನ ವಿವರಗಳನ್ನು ತರಿಸಿಕೊಳ್ಳಲು ಉಚ್ಚ ನ್ಯಾಯಾಲಯದ ಅಧಿಕಾರ.–** ಉಚ್ಚ ನ್ಯಾಯಾಲಯವು, ಆ ಪ್ರಕರಣದಲ್ಲಿ ಒಳಗೊಂಡ ನಿರೂಪಣೆಗಳು, ಅವುಗಳಿಂದ ಉದ್ಭವಿಸಿದ ಪ್ರಶ್ನೆಗಳನ್ನು ನಿರ್ಧರಿಸುವಲ್ಲಿ ಸಾಕಷ್ಟಿಲ್ಲವೆಂದು ಅದಕ್ಕೆ ಮನದಟ್ಟಾದರೆ, ಆ ಸಂಬಂಧದಲ್ಲಿ ನ್ಯಾಯಾಲಯವು ನಿರ್ದೇಶಿಸಬಹುದಾದಂತೆ ಅದಕ್ಕೆ ಸೇರ್ಪಡೆಗಳನ್ನು ಅಥವಾ ಅದಕ್ಕೆ ಬದಲಾವಣೆಗಳನ್ನು ಮಾಡಲು ಪ್ರಕರಣವನ್ನು ನಿರೂಪಿಸಿದ ರೆವಿನ್ಯೂ ಪ್ರಾಧಿಕಾರಿಗೆ ಹಿಂದಕ್ಕೆ ಕಳುಹಿಸಬಹುದು.

**59. ನಿರೂಪಿಸಲಾದ ಪ್ರಕರಣದ ವಿಲೆಯ ಪ್ರಕ್ರಿಯೆ.–** (1) ಅಂಥ ಯಾವುದೇ ಪ್ರಕರಣದ ವಿಚಾರಣೆಯನ್ನು ಮಾಡಿದ ಮೇಲೆ, ಉಚ್ಚ ನ್ಯಾಯಾಲಯವು, ಆ ಮೂಲಕ ಉದ್ಭವಿಸಿದ ಪ್ರಶ್ನೆಗಳನ್ನು ತೀರ್ಮಾನಿಸತಕ್ಕುದು ಮತ್ತು ಅಂಥ ತೀರ್ಮಾನಕ್ಕೆ ಆಧಾರವಾದ ಕಾರಣಗಳನ್ನು ಅದರಲ್ಲಿ ದಾಖಲಿಸಿ ತನ್ನ ತೀರ್ಪನ್ನು ನೀಡತಕ್ಕುದು.

(2) ನ್ಯಾಯಾಲಯವು, ಆ ಪ್ರಕರಣವನ್ನು ನಿರೂಪಿಸಿದ ರೆವಿನ್ಯೂ ಪ್ರಾಧಿಕಾರಿಗೆ, ನ್ಯಾಯಾಲಯದ ಮೊಹರು ಮತ್ತು ರಿಜಿಸ್ಟ್ರಾರನ ಸಹಿ ಇರುವ ಅಂಥ ತೀರ್ಪಿನ ಒಂದು ಪ್ರತಿಯನ್ನು ಕಳುಹಿಸತಕ್ಕುದು ಮತ್ತು ಆ ರೆವಿನ್ಯೂ ಪ್ರಾಧಿಕಾರಿಯು ಅಂಥ ಪ್ರತಿಯನ್ನು ಸ್ವೀಕರಿಸಿದ ಮೇಲೆ ಆ ತೀರ್ಪಿಗೆ ಅನುಸಾರವಾಗಿ ಆ ಪ್ರಕರಣವನ್ನು ವಿಲೆ ಮಾಡತಕ್ಕುದು.

**60. ಇತರ ನ್ಯಾಯಾಲಯಗಳಿಂದ ಉಚ್ಚ ನ್ಯಾಯಾಲಯಕ್ಕೆ ಪ್ರಕರಣದ ನಿರೂಪಣೆ.–** (1) 57ನೇ ಪ್ರಕರಣದಲ್ಲಿ ನಮೂದಿಸಲಾದ ನ್ಯಾಯಾಲಯವನ್ನು ಹೊರತುಪಡಿಸಿ, ಯಾವುದೇ

ನ್ಯಾಯಾಲಯವು, 35ನೇ ಪ್ರಕರಣದ (ಎ) ಪರಂತುಕದ ಮೇರೆಗೆ ಯಾವುದೇ ಲಿಖಿತದ ಸಂಬಂಧದಲ್ಲಿ ಸಂದಾಯ ಮಾಡಬೇಕಾದ ಶುಲ್ಕದ ಮೊಬಲಗಿನ ಬಗ್ಗೆ ಅದಕ್ಕೆ ಸಂದೇಹವುಂಟಾದರೆ, ನ್ಯಾಯಾಧೀಶನು ಆ ಪ್ರಕರಣದ ನಿರೂಪಣೆಯನ್ನು ತಯಾರಿಸಬಹುದು ಮತ್ತು ಅದರ ಮೇಲೆ ತನ್ನ ಅಭಿಪ್ರಾಯವನ್ನು ದಾಖಲಿಸಿ ಅದನ್ನು ತೀರ್ಮಾನಕ್ಕಾಗಿ, ತಾನು ಮುಖ್ಯ ನಿಯಂತ್ರಕ ರೆವಿನ್ಯೂ ಪ್ರಾಧಿಕಾರಿಯಾಗಿದ್ದಿದ್ದರೆ, 57ನೇ ಪ್ರಕರಣದ ಮೇರೆಗೆ ಅದನ್ನು ಯಾವ ಉಚ್ಚ ನ್ಯಾಯಾಲಯಕ್ಕೆ ಉಲ್ಲೇಖಿಸಬಹುದಾಗಿತ್ತೋ ಆ ಉಚ್ಚ ನ್ಯಾಯಾಲಯಕ್ಕೆ ಉಲ್ಲೇಖಿಸಬಹುದು.

(2) ಅಂಥ ನ್ಯಾಯಾಲಯವು, 57ನೇ ಪ್ರಕರಣದ ಮೇರೆಗೆ ಪ್ರಕರಣವನ್ನು ತನಗೆ ಉಲ್ಲೇಖಿಸಿದ್ದಿದ್ದರೆ ಹೇಗೋ ಹಾಗೆ ಅದರ ಬಗ್ಗೆ ವ್ಯವಹರಿಸತಕ್ಕುದು ಮತ್ತು ನ್ಯಾಯಾಲಯದ ಮೊಹರು ಮತ್ತು ರಿಜಿಸ್ಟ್ರಾರನ ಸಹಿ ಇರುವ ತನ್ನ ತೀರ್ಮಾನದ ಒಂದು ಪ್ರತಿಯನ್ನು ಮುಖ್ಯ ನಿಯಂತ್ರಕ ರೆವಿನ್ಯೂ ಪ್ರಾಧಿಕಾರಿಗೆ ಮತ್ತು ಅಂತಹುದೇ ಮತ್ತೊಂದು ಪ್ರತಿಯನ್ನು ಉಲ್ಲೇಖ ಮಾಡುವ ನ್ಯಾಯಾಧೀಶನಿಗೆ ಕಳುಹಿಸತಕ್ಕುದು ಮತ್ತು ಆ ನ್ಯಾಯಾಧೀಶನು ಅಂಥ ಪ್ರತಿಯನ್ನು ಸ್ವೀಕರಿಸಿದ ಮೇಲೆ ಅಂಥ ತೀರ್ಮಾನಕ್ಕನುಸಾರವಾಗಿ ಆ ಪ್ರಕರಣವನ್ನು ವಿಲೆ ಮಾಡತಕ್ಕುದು.

(3) (1)ನೇ ಉಪಪ್ರಕರಣದ ಮೇರೆಗೆ ಮಾಡಲಾದ ಉಲ್ಲೇಖಗಳನ್ನು, ಜಿಲ್ಲಾ ನ್ಯಾಯಾಲಯಕ್ಕೆ ಅಧೀನವಾದ ನ್ಯಾಯಾಲಯವು ಮಾಡುವಾಗ ಅವುಗಳನ್ನು ಜಿಲ್ಲಾ ನ್ಯಾಯಾಲಯದ ಮೂಲಕ ಮಾಡತಕ್ಕುದು, ಮತ್ತು ಅವುಗಳನ್ನು ಯಾವುದೇ ಅಧೀನ ರೆವಿನ್ಯೂ ನ್ಯಾಯಾಲಯವು ಮಾಡುವಾಗ ನಿಕಟ ವರಿಷ್ಠ ನ್ಯಾಯಾಲಯದ ಮೂಲಕ ಮಾಡತಕ್ಕುದು.

**61. ಸ್ಟಾಂಪುಗಳು ಸಾಕಷ್ಟಾಗಿರುವ ಬಗ್ಗೆ ನ್ಯಾಯಾಲಯಗಳ ಕೆಲವು ತೀರ್ಮಾನಗಳ ಪರಿಷ್ಕರಣೆ.-** (1) ಸಿವಿಲ್ ಅಥವಾ ರೆವಿನ್ಯೂ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸಿ ಯಾವುದೇ ನ್ಯಾಯಾಲಯವು ಅಥವಾ ದಂಡ ಪ್ರಕ್ರಿಯಾ ಸಂಹಿತೆ, 1898ರ ಅಧ್ಯಾಯ XII ಅಥವಾ XXXVIರ ಮೇರೆಗಿನ ಯಾವುದೇ ವ್ಯವಹರಣೆಯಲ್ಲಿ ಯಾವುದೇ ಕ್ರಿಮಿನಲ್ ನ್ಯಾಯಾಲಯವು, ಯುಕ್ತವಾಗಿ ಸ್ಟಾಂಪು ಹಚ್ಚಲಾಗಿದೆ ಎಂದು ಅಥವಾ ಸ್ಟಾಂಪಿನ ಅಗತ್ಯವಿಲ್ಲವೆಂದು ಅಥವಾ 35ನೇ ಪ್ರಕರಣದ ಮೇರೆಗೆ ಶುಲ್ಕವನ್ನು ಮತ್ತು ದಂಡವನ್ನು ಸಂದಾಯ ಮಾಡಿದ ಮೇಲೆ ಸಾಕ್ಷ್ಯವಾಗಿ ಯಾವುದೇ ಲಿಖಿತವನ್ನು ಅಂಗೀಕರಿಸುವ ಯಾವುದೇ ಆದೇಶವನ್ನು ಮಾಡಿದಾಗ, ಯಾವ ನ್ಯಾಯಾಲಯಕ್ಕೆ ಹಾಗೆ ಮೊದಲು ನಮೂದಿಸಲಾದ ನ್ಯಾಯಾಲಯವು ಅಪೀಲುಗಳನ್ನು ಸಲ್ಲಿಸಬಹುದೋ ಅಥವಾ ಉಲ್ಲೇಖಗಳನ್ನು ಮಾಡಬಹುದೋ ಆ ನ್ಯಾಯಾಲಯವು ತಾನಾಗಿಯೇ ಅಥವಾ ಕಲೆಕ್ಟರನ ಅರ್ಜಿಯ ಮೇಲೆ, ಅಂಥ ಆದೇಶವನ್ನು ಪರ್ಯಾಲೋಚಿಸಬಹುದು.

(2) ಅಂಥ ನ್ಯಾಯಾಲಯವು, ಅಂಥ ಪರ್ಯಾಲೋಚನೆಯ ತರುವಾಯ, ಅಂಥ ಲಿಖಿತವನ್ನು 35ನೇ ಪ್ರಕರಣದ ಮೇರೆಗೆ ಶುಲ್ಕವನ್ನು ಮತ್ತು ದಂಡವನ್ನು ಸಂದಾಯ ಮಾಡದೆ, ಅಥವಾ ಸಂದಾಯ ಮಾಡಿರುವ ಶುಲ್ಕಕ್ಕಿಂತ ಮತ್ತು ದಂಡಕ್ಕಿಂತ ಹೆಚ್ಚಿನದನ್ನು ಸಂದಾಯ ಮಾಡದೆ ಸಾಕ್ಷ್ಯದಲ್ಲಿ ಅಂಗೀಕರಿಸಕೂಡದಿತ್ತೆಂದು ಅಭಿಪ್ರಾಯಪಟ್ಟರೆ, ಅದು ಹಾಗೆ ಅರ್ಥವಾಗುವ ಘೋಷಣೆಯನ್ನು ದಾಖಲಿಸಬಹುದು ಮತ್ತು ಅಂಥ ಲಿಖಿತಕ್ಕೆ ವಿಧಿಸಬಹುದಾದಂಥ ಶುಲ್ಕದ ಮೊಬಲಗನ್ನು ನಿರ್ಧರಿಸಬಹುದು ಮತ್ತು ಆಗ ಅಂಥ ಲಿಖಿತವು ಯಾರ ಸ್ವಾಧೀನದಲ್ಲಿ ಅಥವಾ ಅಧಿಕಾರದಲ್ಲಿದೆಯೋ ಅಂಥ ಯಾವನೇ ವ್ಯಕ್ತಿಯನ್ನು ಅದನ್ನು ಹಾಜರುಪಡಿಸುವಂತೆ ಅಗತ್ಯಪಡಿಸಬಹುದು ಮತ್ತು ಹಾಜರುಪಡಿಸಿದಾಗ ಅದನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಬಹುದು.

(3) (2)ನೇ ಉಪಪ್ರಕರಣದ ಮೇರೆಗೆ ಯಾವುದೇ ಘೋಷಣೆಯನ್ನು ದಾಖಲಿಸಿದಾಗ ಅದನ್ನು ದಾಖಲಿಸುವ ನ್ಯಾಯಾಲಯವು ಅದರ ಒಂದು ಪ್ರತಿಯನ್ನು ಕಲೆಕ್ಟರನಿಗೆ ಕಳುಹಿಸತಕ್ಕುದು ಮತ್ತು

ಅದು ಯಾವ ಲಿಖಿತಕ್ಕೆ ಸಂಬಂಧಿಸಿರುವುದೋ ಅದನ್ನು ಸ್ವಾಧೀನಕ್ಕೆ ತೆಗೆದುಕೊಂಡಿರುವಲ್ಲಿ ಅಥವಾ ಅನ್ಯಥಾ ಅಂಥ ನ್ಯಾಯಾಲಯದ ಸ್ವಾಧೀನದಲ್ಲಿರುವಲ್ಲಿ, ಅಂಥ ಲಿಖಿತವನ್ನು ಸಹ ಅವನಿಗೆ ಕಳುಹಿಸತಕ್ಕುದು.

(4) ಆ ತರುವಾಯ ಕಲೆಕ್ಟರನು, ಸಾಕ್ಷ್ಯದಲ್ಲಿ ಅಂಥ ಲಿಖಿತವನ್ನು ಅಂಗೀಕರಿಸುವ ಆದೇಶದಲ್ಲಿ, ಅಥವಾ 42ನೇ ಪ್ರಕರಣದ ಅಥವಾ 43ನೇ ಪ್ರಕರಣದ ಮೇರೆಗೆ ನೀಡಲಾದ ಯಾವುದೇ ಪ್ರಮಾಣಪತ್ರದಲ್ಲಿ ಏನೇ ಇದ್ದರೂ, ಅಂಥ ಲಿಖಿತದ ಸಂಬಂಧದಲ್ಲಿ ಸ್ಟಾಂಪು ಕಾನೂನಿನ ವಿರುದ್ಧ ಯಾವುದೇ ಅಪರಾಧವನ್ನು ಎಸಗಿರುವನೆಂದು ಕಲೆಕ್ಟರನು ಭಾವಿಸುವಂಥ ಯಾವನೇ ವ್ಯಕ್ತಿಯನ್ನು ಅವನು ಪ್ರಾಸಿಕ್ಯೂಟ್ ಮಾಡಬಹುದು:

ಪರಂತು,-

(ಎ) ಅಂಥ ನ್ಯಾಯಾಲಯದ ನಿರ್ಧಾರಕ್ಕೆ ಅನುಸಾರವಾಗಿ, 35ನೇ ಪ್ರಕರಣದ ಮೇರೆಗಿನ ಲಿಖಿತದ ಸಂಬಂಧದಲ್ಲಿ ಸಂದಾಯವಾಗತಕ್ಕ ಮೊಬಲಗನ್ನು (ಶುಲ್ಕ ಮತ್ತು ದಂಡವೂ ಸೇರಿ) ಕಲೆಕ್ಟರನಿಗೆ ಸಂದಾಯ ಮಾಡಿರುವಲ್ಲಿ, ಅವನು, ಅಪರಾಧವನ್ನು ಯುಕ್ತ ಶುಲ್ಕದ ಸಂದಾಯವನ್ನು ತಪ್ಪಿಸುವ ಉದ್ದೇಶದಿಂದ ಎಸಗಿರುವನೆಂದು ಅವನು ಭಾವಿಸಿದ ಹೊರತು, ಅಂಥ ಯಾವುದೇ ಪ್ರಾಸಿಕ್ಯೂಷನನ್ನು ಹೂಡತಕ್ಕುದಲ್ಲ;

(ಬಿ) ಅಂಥ ಪ್ರಾಸಿಕ್ಯೂಷನ್ನಿನ ಉದ್ದೇಶಗಳಿಗಾಗಿ ಹೊರತು, ಈ ಪ್ರಕರಣದ ಮೇರೆಗೆ ಮಾಡಲಾದ ಘೋಷಣೆಯು, ಸಾಕ್ಷ್ಯದಲ್ಲಿ ಯಾವುದೇ ಲಿಖಿತವನ್ನು ಸ್ವೀಕರಿಸುವ ಯಾವುದೇ ಆದೇಶದ ಅಥವಾ 42ನೇ ಪ್ರಕರಣದ ಮೇರೆಗೆ ನೀಡಲಾದ ಯಾವುದೇ ಪ್ರಮಾಣಪತ್ರದ ವಿಧಿಮಾನ್ಯತೆಗೆ ಬಾಧಕವಾಗತಕ್ಕುದಲ್ಲ.

## ಅಧ್ಯಾಯ - VII

## ಕ್ರಿಮಿನಲ್ ಅಪರಾಧಗಳು ಮತ್ತು ಪ್ರಕ್ರಿಯೆ

**62. ಯುಕ್ತವಾಗಿ ಸ್ಟಾಂಪು ಹಚ್ಚದಿರುವ ಲಿಖಿತವನ್ನು ಬರೆದುಕೊಡುವುದು ಇತ್ಯಾದಿಗಳಿಗೆ ದಂಡ.-** (1) (ಎ) ತಗಾದೆಯ ಮೇಲಲ್ಲದೆ ಅನ್ಯಥಾ ಸಂದಾಯವಾಗತಕ್ಕ ಯುಕ್ತ ಸ್ಟಾಂಪು ಹಚ್ಚಿಲ್ಲದ ಯಾವುದೇ ವಿನಿಮಯ ಪತ್ರವನ್ನು ಅಥವಾ ಪ್ರಾಮಿಸರಿ ನೋಟನ್ನು ಬರೆದುಕೊಡುವ, ರಚಿಸುವ, ನೀಡುವ, ಹಿಂಬರಹ ಮಾಡುವ ಅಥವಾ ವರ್ಗಾಯಿಸುವ ಅಥವಾ ಸಾಕ್ಷಿದಾರನಾಗಿ ಅಲ್ಲದೆ ಸಹಿ ಮಾಡುವ ಅಥವಾ ಅಂಗೀಕಾರಕ್ಕಾಗಿ ಅಥವಾ ಸಂದಾಯಕ್ಕಾಗಿ ಹಾಜರುಪಡಿಸುವ ಅಥವಾ ಸ್ವೀಕರಿಸುವ, ಸಂದಾಯ ಮಾಡುವ ಅಥವಾ ಸಂದಾಯವನ್ನು ಸ್ವೀಕರಿಸುವ ಅಥವಾ ಯಾವುದೇ ರೀತಿಯಲ್ಲಿ ವ್ಯವಹರಿಸುವ; ಅಥವಾ

(ಬಿ) ಶುಲ್ಕ ವಿಧಿಸಬಹುದಾದ ಆದರೆ ಯುಕ್ತವಾಗಿ ಸ್ಟಾಂಪು ಹಚ್ಚಿಲ್ಲದ ಇತರ ಯಾವುದೇ ಲಿಖಿತವನ್ನು ಬರೆದುಕೊಡುವ ಅಥವಾ ಸಾಕ್ಷಿದಾರನಾಗಿ ಅಲ್ಲದೆ ಸಹಿ ಮಾಡುವ; ಅಥವಾ

(ಸಿ) ಯುಕ್ತವಾಗಿ ಸ್ಟಾಂಪು ಹಚ್ಚಿಲ್ಲದ ಯಾವುದೇ ಪ್ರಾಕ್ಸಿಯ ಮೇರೆಗೆ ಮತನೀಡುವ ಅಥವಾ ಮತ ನೀಡಲು ಪ್ರಯತ್ನಿಸುವ

- ಯಾವನೇ ವ್ಯಕ್ತಿಯು, ಅಂಥ ಪ್ರತಿಯೊಂದು ಅಪರಾಧಕ್ಕಾಗಿ ಐದುನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕುದು:

ಪರಂತು, 35ನೇ ಪ್ರಕರಣದ, 40ನೇ ಪ್ರಕರಣದ ಅಥವಾ 61ನೇ ಪ್ರಕರಣದ ಮೇರೆಗೆ ಯಾವುದೇ ಲಿಖಿತದ ಸಂಬಂಧದಲ್ಲಿ ಯಾವುದೇ ದಂಡವನ್ನು ಸಂದಾಯ ಮಾಡಿದಾಗ, ಅಂಥ ದಂಡದ ಮೊಬಲಗಿನಲ್ಲಿ, ಅಂಥ ದಂಡವನ್ನು ಸಂದಾಯ ಮಾಡಿದ ವ್ಯಕ್ತಿಯ ಮೇಲೆ ಅದೇ ಲಿಖಿತದ ಸಂಬಂಧದಲ್ಲಿ ಈ ಪ್ರಕರಣದ ಮೇರೆಗೆ ಆ ತರುವಾಯ ವಿಧಿಸಲಾದಂಥ ಜುಲ್ಮಾನೆ (ಯಾವುವಾದರೂ ಇದ್ದರೆ)ಯನ್ನು ವಜಾ ಮಾಡಿಕೊಳ್ಳಲು ಅವಕಾಶವಿರತಕ್ಕುದು.

(2) ಒಂದು ಷೇರು ವಾರೆಂಟನ್ನು, ಯುಕ್ತವಾಗಿ ಸ್ಟಾಂಪು ಹಚ್ಚದೆ ನೀಡಿದ್ದರೆ, ಅದನ್ನು ನೀಡುವ ಕಂಪನಿಯು ಮತ್ತು ಅದನ್ನು ನೀಡುವ ಸಮಯದಲ್ಲಿದ್ದ ವ್ಯವಸ್ಥಾಪಕ ನಿರ್ದೇಶಕನು, ಅಥವಾ ಕಾರ್ಯದರ್ಶಿಯು ಅಥವಾ ಕಂಪನಿಯ ಇತರ ಪ್ರಧಾನ ಅಧಿಕಾರಿಯಾಗಿದ್ದ ಪ್ರತಿಯೊಬ್ಬ ವ್ಯಕ್ತಿಯು ಸಹ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕುದು.

**63. ಅಂಟಿಕೊಳ್ಳುವ ಸ್ಟಾಂಪನ್ನು ರದ್ದುಗೊಳಿಸಲು ತಪ್ಪಿದ್ದಕ್ಕಾಗಿ ದಂಡ.**- ಅಂಟಿಕೊಳ್ಳುವ ಸ್ಟಾಂಪನ್ನು ರದ್ದುಗೊಳಿಸಲು 12ನೇ ಪ್ರಕರಣದ ಮೂಲಕ ಅಗತ್ಯಪಡಿಸಲಾಗಿದ್ದು, ಆ ಪ್ರಕರಣದಿಂದ ನಿಯಮಿಸಲಾದ ರೀತಿಯಲ್ಲಿ ಅಂಥ ಸ್ಟಾಂಪನ್ನು ರದ್ದುಗೊಳಿಸಲು ತಪ್ಪುವ ಯಾವನೇ ವ್ಯಕ್ತಿಯು, ಒಂದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕುದು.

**64. 27ನೇ ಪ್ರಕರಣದ ಉಪಬಂಧಗಳನ್ನು ಪಾಲಿಸಲು ತಪ್ಪಿದ್ದಕ್ಕಾಗಿ ದಂಡ.**- ಸರ್ಕಾರವನ್ನು ವಂಚಿಸುವ ದೃಷ್ಟಿಯಿಂದ,-

(ಎ) ಅಂಥ ಲಿಖಿತದಲ್ಲಿ ನಿರೂಪಿಸಬೇಕೆಂದು 27ನೇ ಪ್ರಕರಣದ ಮೂಲಕ ಅಗತ್ಯಪಡಿಸಲಾದ ಎಲ್ಲಾ ಸಂಗತಿಗಳನ್ನು ಮತ್ತು ಸಂದರ್ಭಗಳನ್ನು ಪೂರ್ಣವಾಗಿ ಮತ್ತು ಯಥಾರ್ಥವಾಗಿ ನಿರೂಪಿಸದಿರುವ ಯಾವುದೇ ಲಿಖಿತವನ್ನು ಬರೆದುಕೊಡುವ; ಅಥವಾ

(ಬಿ) ಯಾವುದೇ ಲಿಖಿತವನ್ನು ತಯಾರಿಸುವಲ್ಲಿ ಅಥವಾ ಆ ಸಂಬಂಧದಲ್ಲಿ ನಿಯೋಜಿತನಾಗಿದ್ದ ಅಥವಾ ಸಂಬಂಧಪಟ್ಟಿದ್ದು ಅಂಥ ಎಲ್ಲಾ ಸಂಗತಿಗಳನ್ನು ಮತ್ತು ಸಂದರ್ಭಗಳನ್ನು ಪೂರ್ಣವಾಗಿ ಮತ್ತು ಯಥಾರ್ಥ ರೀತಿಯಲ್ಲಿ ನಿರೂಪಿಸಲು ನಿರಾಕರಿಸುವ ಅಥವಾ ಬಿಟ್ಟುಬಿಡುವ; ಅಥವಾ

(ಸಿ) ಈ ಅಧಿನಿಯಮದ ಮೇರೆಗೆ ಸರ್ಕಾರಕ್ಕೆ ಸಲ್ಲತಕ್ಕ ಯಾವುದೇ ಶುಲ್ಕವನ್ನು ಅಥವಾ ದಂಡವನ್ನು ತಪ್ಪಿಸುವ ಹಂಚಿಕೆಯಿಂದ ಯಾವುದೇ ಇತರ ಕೃತ್ಯವನ್ನು ಮಾಡಿದ

- ಯಾವನೇ ವ್ಯಕ್ತಿಯು, ಐದು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕುದು.

**65. ರಸೀದಿಯನ್ನು ಕೊಡಲು ನಿರಾಕರಿಸಿದ್ದಕ್ಕಾಗಿ ಮತ್ತು ರಸೀದಿಗಳ ಮೇಲಿನ ಶುಲ್ಕವನ್ನು ತಪ್ಪಿಸುವ ತಂತ್ರಗಳಿಗಾಗಿ ದಂಡ.**- (ಎ) 30ನೇ ಪ್ರಕರಣದ ಮೇರೆಗೆ ರಸೀದಿಯನ್ನು ಕೊಡಲು ಅಗತ್ಯಪಡಿಸಲಾಗಿದ್ದು, ಅದನ್ನು ಕೊಡಲು ನಿರಾಕರಿಸುವ ಅಥವಾ ಉಪೇಕ್ಷಿಸುವ; ಅಥವಾ

(ಬಿ) ಮೊಬಲಗಿನಲ್ಲಿ ಅಥವಾ ಮೌಲ್ಯದಲ್ಲಿ ಇಪ್ಪತ್ತು ರೂಪಾಯಿಗಳನ್ನು ಮೀರುವ ಹಣ ಸಂದಾಯದ ಅಥವಾ ಸ್ವತ್ತನ್ನು ಒಪ್ಪಿಸಿ ಕೊಡುವುದರ ಮೇಲೆ ಸರ್ಕಾರಕ್ಕೆ ಸಲ್ಲತಕ್ಕ ಯಾವುದೇ ಶುಲ್ಕವನ್ನು ವಂಚಿಸುವ ಉದ್ದೇಶದಿಂದ, ಇಪ್ಪತ್ತು ರೂಪಾಯಿಗಳನ್ನು ಮೀರದ ಮೊಬಲಗಿಗಾಗಿ ಅಥವಾ ಮೌಲ್ಯಕ್ಕಾಗಿ ರಸೀದಿಯನ್ನು ಕೊಡುವ ಅಥವಾ ಸಂದಾಯ ಮಾಡಿದ ಅಥವಾ ಒಪ್ಪಿಸಿಕೊಟ್ಟ ಹಣವನ್ನು ಅಥವಾ ಸ್ವತ್ತನ್ನು ಪ್ರತ್ಯೇಕಿಸುವ ಅಥವಾ ವಿಭಜಿಸುವ

- ಯಾವನೇ ವ್ಯಕ್ತಿಯು ಎರಡುನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕುದು.

**66. ಪಾಲಿಸಿಯನ್ನು ತಯಾರಿಸದಿರುವುದಕ್ಕಾಗಿ ಅಥವಾ ಯುಕ್ತವಾಗಿ ಸ್ಟಾಂಪು ಹಚ್ಚದ ಪಾಲಿಸಿಯನ್ನು ತಯಾರಿಸುವುದಕ್ಕಾಗಿ ದಂಡ.-** (ಎ) ವಿಮೆಯ ಯಾವುದೇ ಕರಾರಿನ ಬಗ್ಗೆ ಯಾವುದೇ ವಿಮಾ ಕಂತನ್ನು ಅಥವಾ ಪ್ರತಿಫಲವನ್ನು ಸ್ವೀಕರಿಸಿದ್ದು ಅಥವಾ ಆ ಬಗ್ಗೆ ಜಮೆ ತೆಗೆದುಕೊಂಡಿದ್ದು ಅಂಥ ವಿಮಾ ಕಂತನ್ನು ಅಥವಾ ಪ್ರತಿಫಲವನ್ನು ಸ್ವೀಕರಿಸಿದ ಅಥವಾ ಆ ಬಗ್ಗೆ ಜಮೆ ತೆಗೆದುಕೊಂಡ ತರುವಾಯ ಒಂದು ತಿಂಗಳೊಳಗೆ ಅಂಥ ವಿಮೆಯ ಯುಕ್ತವಾಗಿ ಸ್ಟಾಂಪು ಹಚ್ಚಿದ ಪಾಲಿಸಿಯನ್ನು ತಯಾರಿಸಿ ಬರೆದುಕೊಡದಿರುವ; ಅಥವಾ

(ಬಿ) ಯುಕ್ತವಾಗಿ ಸ್ಟಾಂಪು ಹಚ್ಚಿಲ್ಲದ ಯಾವುದೇ ಪಾಲಿಸಿಯನ್ನು ತಯಾರಿಸುವ, ಬರೆದುಕೊಡುವ ಅಥವಾ ಒಪ್ಪಿಸಿಕೊಡುವ ಅಥವಾ ಅಂಥ ಯಾವುದೇ ಪಾಲಿಸಿಯ ಮೇಲೆ ಅಥವಾ ಅದರ ಸಂಬಂಧದಲ್ಲಿ ಸಂದಾಯ ಮಾಡುವ ಅಥವಾ ಲೆಕ್ಕಕ್ಕೆ ಹಾಕುವ ಅಥವಾ ಸಂದಾಯ ಮಾಡಲು ಅಥವಾ ಲೆಕ್ಕಕ್ಕೆ ಹಾಕಲು ಒಪ್ಪಿಕೊಳ್ಳುವ

- ಯಾವನೇ ವ್ಯಕ್ತಿಯು ಎರಡುನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕುದು.

**67. ಸೆಟ್ಟುಗಳಲ್ಲಿವೆಯೆಂದು ತಾತ್ಪರ್ಯವಾಗುವ ಪೂರ್ಣಸಂಖ್ಯೆಯ ಬಿಲ್ಲುಗಳನ್ನು ಅಥವಾ ಸಮುದ್ರ ವಿಮಾ ಪಾಲಿಸಿಗಳನ್ನು ಬರೆಯದಿರುವುದಕ್ಕಾಗಿ ದಂಡ.-** ಎರಡು ಅಥವಾ ಹೆಚ್ಚಿನ ಸೆಟ್ಟುಗಳಲ್ಲಿ ಬರೆಯಲಾದ ಅಥವಾ ಬರೆದುಕೊಡಲಾಗಿದೆಯೆಂದು ತಾತ್ಪರ್ಯವಾಗುವ ಮತ್ತು ತಗಾದೆಯ ಮೇಲಲ್ಲದೆ ಅನ್ಯಥಾ ಸಂದಾಯವಾಗತಕ್ಕ ವಿನಿಮಯ ಪತ್ರವನ್ನು ಅಥವಾ ಸಮುದ್ರ ವಿಮಾ ಪಾಲಿಸಿಯನ್ನು ಬರೆಯುವ ಅಥವಾ ಬರೆದುಕೊಡುವ ಮತ್ತು ಅದೇ ಸಮಯಕ್ಕೆ ಅಂಥ ಬಿಲ್ಲು ಅಥವಾ ಪಾಲಿಸಿಯು ಯಾವ ಸೆಟ್ಟನ್ನು ಒಳಗೊಂಡಿದೆ ಎಂದು ತಾತ್ಪರ್ಯವಾಗುವುದೋ ಆ ಒಟ್ಟು ಬಿಲ್ಲುಗಳಿಗೆ ಅಥವಾ ಪಾಲಿಸಿಗಳಿಗೆ ಯುಕ್ತವಾಗಿ ಸ್ಟಾಂಪು ಹಚ್ಚಿದ ಕಾಗದದ ಮೇಲೆ ಬರೆಯದಿರುವ ಅಥವಾ ಬರೆದುಕೊಡದಿರುವ

- ಯಾವನೇ ವ್ಯಕ್ತಿಯು, ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕುದು.

**68. ಮುಂದಿನ ದಿನಾಂಕದ ಬಿಲ್ಲುಗಳಿಗಾಗಿ ಮತ್ತು ರಾಜಸ್ವವನ್ನು ವಂಚಿಸುವ ಇತರ ತಂತ್ರಗಳಿಗಾಗಿ ದಂಡ.-** (ಎ) ಸರ್ಕಾರಕ್ಕೆ ಸಲ್ಲತಕ್ಕ ಶುಲ್ಕವನ್ನು ವಂಚಿಸುವ ಉದ್ದೇಶದಿಂದ, ವಿನಿಮಯ ಪತ್ರವನ್ನು ಅಥವಾ ಪ್ರಾಮಿಸರಿ ನೋಟನ್ನು ವಾಸ್ತವವಾಗಿ ಯಾವ ದಿನಾಂಕದಂದು ಬರೆಯಲಾಯಿತೋ ಅಥವಾ ಮಾಡಲಾಯಿತೋ ಆ ದಿನಾಂಕಕ್ಕೆ ತರುವಾಯದ ದಿನಾಂಕವನ್ನು ಹೊಂದಿರುವ ಯಾವುದೇ ಅಂಥ ವಿನಿಮಯ ಪತ್ರವನ್ನು ಅಥವಾ ಪ್ರಾಮಿಸರಿ ನೋಟನ್ನು ಬರೆಯುವ, ಮಾಡುವ ಅಥವಾ ಹೊರಡಿಸುವ; ಅಥವಾ

(ಬಿ) ಅಂಥ ಪತ್ರಕ್ಕೆ ಅಥವಾ ನೋಟಿಗೆ ಹಾಗೆ ಮುಂದಿನ ದಿನಾಂಕವನ್ನು ಹಾಕಿದೆ ಎಂದು ಗೊತ್ತಿದ್ದೂ, ಅಂಥ ಪತ್ರವನ್ನು ಅಥವಾ ನೋಟನ್ನು ಅಂಗೀಕಾರಕ್ಕೆ ಅಥವಾ ಸಂದಾಯಕ್ಕೆ ಹಿಂಬರಹ ಮಾಡುವ, ವರ್ಗಾಯಿಸುವ, ಹಾಜರುಪಡಿಸುವ ಅಥವಾ ಅದರ ಸಂದಾಯವನ್ನು ಮಾಡುವ, ಸ್ವೀಕರಿಸುವ ಅಥವಾ ಅದನ್ನು ಯಾವುದೇ ರೀತಿಯಲ್ಲಿ ಮುರಿಸುವ; ಅಥವಾ

(ಸಿ) ಅದೇ ಬಗೆಯ ಉದ್ದೇಶದಿಂದ, ಈ ಅಧಿನಿಯಮದಿಂದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಿಂದ ವಿಶೇಷವಾಗಿ ಉಪಬಂಧಿಸಿಲ್ಲದ ಯಾವುದೇ ಕೃತ್ಯವನ್ನು , ಉಪಾಯವನ್ನು ಅಥವಾ ತಂತ್ರವನ್ನು ನಡೆಸುವ ಅಥವಾ ಅದಕ್ಕೆ ಸಂಬಂಧಪಡುವ

– ಯಾವನೇ ವ್ಯಕ್ತಿಯು ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕುದು.

**69. ಸ್ಟಾಂಪುಗಳ ಮಾರಾಟಕ್ಕೆ ಸಂಬಂಧಿಸಿದ ನಿಯಮಗಳ ಉಲ್ಲಂಘನೆಗಾಗಿ ಮತ್ತು ಅನಧಿಕೃತ ಮಾರಾಟಕ್ಕಾಗಿ ದಂಡ.–** (ಎ) ಸ್ಟಾಂಪುಗಳನ್ನು ಮಾರಾಟ ಮಾಡಲು ನೇಮಿಸಲ್ಪಟ್ಟಿದ್ದು, 74ನೇ ಪ್ರಕರಣದ ಮೇರೆಗೆ ರಚಿಸಲಾದ ಯಾವುದೇ ನಿಯಮವನ್ನು ಪಾಲಿಸದಿರುವ ಯಾವನೇ ವ್ಯಕ್ತಿಯು, ಮತ್ತು

(ಬಿ) ಹಾಗೆ ನೇಮಿಸಲ್ಪಡದೆ (ಹತ್ತು ನಯೆ ಪೈಸೆ ಅಥವಾ ಐದು ನಯೆ ಪೈಸೆಯ ಅಂಟಿಕೊಳ್ಳುವ ಸ್ಟಾಂಪಿನ ಹೊರತಾದ) ಯಾವುದೇ ಸ್ಟಾಂಪನ್ನು ಮಾರಾಟ ಮಾಡುವ ಅಥವಾ ಮಾರಾಟಕ್ಕಿಡುವ, ಯಾವನೇ ವ್ಯಕ್ತಿಯು;

– ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಐದುನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು.

**70. ಪ್ರಾಸಿಕ್ಯೂಷನನ್ನು ಹೂಡುವುದು ಮತ್ತು ನಡೆಸುವುದು.–** (1) ಈ ಅಧಿನಿಯಮದ ಅಥವಾ ಈ ಮೂಲಕ ನಿರಸನಗೊಳಿಸಲಾದ ಯಾವುದೇ ಅಧಿನಿಯಮದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧದ ಸಂಬಂಧದಲ್ಲಿ ಯಾವುದೇ ಪ್ರಾಸಿಕ್ಯೂಷನನ್ನು, ಕಲೆಕ್ಟರನ ಅಥವಾ ರಾಜ್ಯ ಸರ್ಕಾರವು, ಈ ಬಗ್ಗೆ ಸಾಮಾನ್ಯವಾಗಿ ಅಥವಾ ಕಲೆಕ್ಟರನು ವಿಶೇಷವಾಗಿ ಅಧಿಕೃತಗೊಳಿಸುವ ಇತರ ಅಧಿಕಾರಿಯ ಮಂಜೂರಾತಿಯಿಲ್ಲದೆ ಹೂಡತಕ್ಕುದಲ್ಲ.

(2) ಮುಖ್ಯ ನಿಯಂತ್ರಕ ರೆವಿನ್ಯೂ ಪ್ರಾಧಿಕಾರಿಯು, ಅಥವಾ ಅವನು ಈ ಬಗ್ಗೆ ಸಾಮಾನ್ಯವಾಗಿ ಅಥವಾ ವಿಶೇಷವಾಗಿ ಅಧಿಕೃತಗೊಳಿಸಿದ ಯಾವನೇ ಅಧಿಕಾರಿಯು ಅಂಥ ಯಾವುದೇ ಪ್ರಾಸಿಕ್ಯೂಷನನ್ನು ತಡೆಹಿಡಿಯಬಹುದು ಅಥವಾ ಅಂಥ ಯಾವುದೇ ಅಪರಾಧದ ಬಗ್ಗೆ ರಾಜಿ ಮಾಡಿಸಬಹುದು;

(3) ಅಂಥ ಯಾವುದೇ ರಾಜಿಯ ಮೊಬಲಗು, 48ನೇ ಪ್ರಕರಣದ ಮೂಲಕ ಉಪಬಂಧಿಸಿದ ರೀತಿಯಲ್ಲಿ ವಸೂಲೀಯವಾಗತಕ್ಕುದು.

**71. ಮ್ಯಾಜಿಸ್ಟ್ರೇಟರ ಅಧಿಕಾರ ವ್ಯಾಪ್ತಿ.–** ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟ್‌ನ ಹೊರತಾದ ಮ್ಯಾಜಿಸ್ಟ್ರೇಟನು ಅಥವಾ ಎರಡನೇ ವರ್ಗದ ಮ್ಯಾಜಿಸ್ಟ್ರೇಟ್‌ನ ಅಧಿಕಾರಗಳಿಗಿಂತ ಕಡಿಮೆ ಇಲ್ಲದ ಅಧಿಕಾರಗಳನ್ನು ಹೊಂದಿರುವ ಮ್ಯಾಜಿಸ್ಟ್ರೇಟನು, ಈ ಅಧಿನಿಯಮದ ಮೇರೆಗೆ ಯಾವುದೇ ಅಪರಾಧವನ್ನು ಅಧಿವಿಚಾರಣೆ ಮಾಡತಕ್ಕುದಲ್ಲ.

**72. ಅಧಿವಿಚಾರಣೆಯ ಸ್ಥಳ.–** ಯಾವುದೇ ಲಿಖಿತದ ಸಂಬಂಧದಲ್ಲಿ ಎಸಗಲಾದ ಅಂಥ ಪ್ರತಿಯೊಂದು ಅಪರಾಧವನ್ನು, ಅಂಥ ಲಿಖಿತವು ಕಂಡುಬಂದ ಯಾವುದೇ ಜಿಲ್ಲೆಯಲ್ಲಿ ಅಥವಾ ಪ್ರೆಸಿಡೆನ್ಸಿ ಟೌನಿನಲ್ಲಿ ಹಾಗೆಯೇ ತತ್ಕಾಲದಲ್ಲಿ ಜಾರಿಯಲ್ಲಿರುವ ದಂಡ ಪ್ರಕ್ರಿಯಾ ಸಂಹಿತೆಯ ಮೇರೆಗೆ ಅಂಥ ಅಪರಾಧವನ್ನು ಅಧಿವಿಚಾರಣೆ ಮಾಡಬಹುದಾದ ಯಾವುದೇ ಜಿಲ್ಲೆಯಲ್ಲಿ ಅಥವಾ ಪ್ರೆಸಿಡೆನ್ಸಿ ಟೌನಿನಲ್ಲಿ ಸಹ ಅಧಿವಿಚಾರಣೆ ಮಾಡಬಹುದು.

## ಅಧ್ಯಾಯ - VIII

### ಪೂರಕ ಉಪಬಂಧಗಳು

**73. ಪುಸ್ತಕಗಳು, ಇತ್ಯಾದಿಗಳು ಪರಿಶೀಲನೆಗೆ ತೆರೆದಿರುವುದು.-** ಯಾವ ರಿಜಿಸ್ಟರುಗಳ, ಪುಸ್ತಕಗಳ, ದಾಖಲೆಗಳ, ಪತ್ರಗಳ, ದಸ್ತಾವೇಜುಗಳ ಅಥವಾ ವ್ಯವಹರಣೆಗಳ ಪರಿಶೀಲನೆಯು ಯಾವುದೇ ಶುಲ್ಕವು ಪ್ರಾಪ್ತವಾಗುವುದಕ್ಕೆ ಆಸ್ಪದ ಕೊಡಬಹುದೋ ಅಥವಾ ಯಾವುದೇ ಶುಲ್ಕಕ್ಕೆ ಸಂಬಂಧಿಸಿದ ಯಾವುದೇ ವಂಚನೆಯನ್ನು ಅಥವಾ ಲೋಪವನ್ನು ರುಜುವಾತುಪಡಿಸಬಹುದೋ ಅಥವಾ ಅದರ ಶೋಧನೆಗೆ ಅವಕಾಶವಾಗಬಹುದೋ ಅಂಥ ರಿಜಿಸ್ಟರುಗಳ, ಪುಸ್ತಕಗಳ, ದಾಖಲೆಗಳ, ಪತ್ರಗಳ, ದಸ್ತಾವೇಜುಗಳ ಅಥವಾ ವ್ಯವಹರಣೆಗಳ ಅಭಿರಕ್ಷೆಯನ್ನು ಹೊಂದಿರುವ ಪ್ರತಿಯೊಬ್ಬ ಸರ್ಕಾರಿ ಅಧಿಕಾರಿಯು ಎಲ್ಲಾ ಯುಕ್ತ ಸಮಯಗಳಲ್ಲಿ ಅಂಥ ಉದ್ದೇಶಕ್ಕಾಗಿ ಆ ರಿಜಿಸ್ಟರುಗಳನ್ನು, ಪುಸ್ತಕಗಳನ್ನು, ಪತ್ರಗಳನ್ನು, ದಸ್ತಾವೇಜುಗಳನ್ನು ಮತ್ತು ವ್ಯವಹರಣೆಗಳನ್ನು ಕಲೆಕ್ಟರ್‌ನಿಂದ ಲಿಖಿತದಲ್ಲಿ ಅಧಿಕೃತನಾದ ಯಾವನೇ ವ್ಯಕ್ತಿಗೆ ಪರಿಶೀಲಿಸಲು ಮತ್ತು ಅವನು ಅವಶ್ಯವೆಂದು ಭಾವಿಸಬಹುದಾದಂಥ ಟಿಪ್ಪಣಿಗಳನ್ನು ಮತ್ತು ಉದ್ಧರಣೆಗಳನ್ನು ಯಾವುದೇ ಫೀಜು ಅಥವಾ ಚಾರ್ಜು ಇಲ್ಲದೆಯೇ ತೆಗೆದುಕೊಳ್ಳಲು ಅನುಮತಿಸತಕ್ಕುದು.

**74. ಸ್ಟಾಂಪುಗಳ ಮಾರಾಟಕ್ಕೆ ಸಂಬಂಧಿಸಿ ನಿಯಮ ರಚನಾಧಿಕಾರ.-** ರಾಜ್ಯ ಸರ್ಕಾರವು,-

(ಎ) ಸ್ಟಾಂಪುಗಳ ಮತ್ತು ಸ್ಟಾಂಪು ಕಾಗದಗಳ ಪೂರೈಕೆ ಮತ್ತು ಮಾರಾಟವನ್ನು,

(ಬಿ) ಅಂಥ ಮಾರಾಟವನ್ನು ಯಾವ ವ್ಯಕ್ತಿಗಳು ಮಾತ್ರವೇ ಮಾಡಬಹುದೋ ಅಂಥವರನ್ನು, ಮತ್ತು

(ಸಿ) ಅಂಥ ವ್ಯಕ್ತಿಗಳ ಕರ್ತವ್ಯಗಳನ್ನು ಮತ್ತು ಸಂಭಾವನೆಯನ್ನು

- ವಿನಿಯಮಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು:

ಪರಂತು, ಅಂಥ ನಿಯಮಗಳು ಹತ್ತು ನಯೆ ಪೈಸೆಯ ಅಥವಾ ಐದು ಪೈಸೆಯ ಅಂಟಿಕೊಳ್ಳುವ ಸ್ಟಾಂಪುಗಳ ಮಾರಾಟವನ್ನು ನಿರ್ಬಂಧಿಸತಕ್ಕುದಲ್ಲ.

**75. ಈ ಅಧಿನಿಯಮವನ್ನು ಸಾಮಾನ್ಯವಾಗಿ ಕಾರ್ಯಗತಗೊಳಿಸುವ ಬಗ್ಗೆ ನಿಯಮಗಳ ರಚನಾಧಿಕಾರ.-** ರಾಜ್ಯ ಸರ್ಕಾರವು, ಈ ಅಧಿನಿಯಮದ ಉದ್ದೇಶಗಳನ್ನು ಸಾಮಾನ್ಯವಾಗಿ ಕಾರ್ಯಗತಗೊಳಿಸಲು ನಿಯಮಗಳನ್ನು ರಚಿಸಬಹುದು, ಮತ್ತು ಅಂಥ ನಿಯಮಗಳ ಉಲ್ಲಂಘನೆಗೆ ವಿಧಿಸತಕ್ಕ, ಯಾವುದೇ ಸಂದರ್ಭದಲ್ಲಿ ಐದುನೂರು ರೂಪಾಯಿಗಳನ್ನು ಮೀರತಕ್ಕುದಲ್ಲದ ಜುಲ್ಮಾನೆಯನ್ನು ವಿಧಿಸಬಹುದು.

**76. ನಿಯಮಗಳ ಪ್ರಕಟಣೆ.-** (1) ಈ ಅಧಿನಿಯಮದ ಮೇರೆಗೆ ರಚಿಸಲಾದ ಎಲ್ಲಾ ನಿಯಮಗಳನ್ನು ರಾಜಪತ್ರದಲ್ಲಿ ಪ್ರಕಟಿಸತಕ್ಕುದು.

(2) ಈ ಪ್ರಕರಣದ ಮೂಲಕ ಅಗತ್ಯಪಡಿಸಲಾದಂತೆ ಪ್ರಕಟಿಸಲಾದ ಎಲ್ಲಾ ನಿಯಮಗಳು ಅಂಥ ಪ್ರಕಟಣೆಯ ತರುವಾಯ, ಈ ಅಧಿನಿಯಮದಿಂದ ಅವುಗಳನ್ನು ಅಧಿನಿಯಮಿಸಲಾಗಿದ್ದರೆ ಹೇಗೋ ಹಾಗೆ ಪರಿಣಾಮಕಾರಿಯಾಗಿರತಕ್ಕುದು.

**76ಎ.ಕೆಲವು ಅಧಿಕಾರಗಳ ಪ್ರತ್ಯಾಯೋಜನೆ.–** ರಾಜ್ಯ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆ ಮೂಲಕ,–

(ಎ) 2(9ನೇ), 33 (3) (ಬಿ)ಯ, 70(1),74ನೇ ಮತ್ತು 78ನೇ ಪ್ರಕರಣಗಳ ಮೂಲಕ ಅದಕ್ಕೆ ಪ್ರದತ್ತವಾದ ಎಲ್ಲಾ ಅಧಿಕಾರಗಳನ್ನು ಅಥವಾ ಅವುಗಳಲ್ಲಿ ಯಾವುವನ್ನಾದರೂ ಮುಖ್ಯ ನಿಯಂತ್ರಕ ರೆವಿನ್ಯೂ ಪ್ರಾಧಿಕಾರಿಗೆ, ಮತ್ತು

(ಬಿ) 45(1) (2)ನೇ, 56(1)ನೇ ಮತ್ತು 70(2)ನೇ ಪ್ರಕರಣಗಳ ಮೂಲಕ ಮುಖ್ಯ ನಿಯಂತ್ರಕ ರೆವಿನ್ಯೂ ಪ್ರಾಧಿಕಾರಿಗೆ ಪ್ರದತ್ತವಾದ ಎಲ್ಲಾ ಅಧಿಕಾರಗಳನ್ನು ಅಥವಾ ಅವುಗಳಲ್ಲಿ ಯಾವುವನ್ನಾದರೂ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅಧೀನ ರೆವಿನ್ಯೂ ಪ್ರಾಧಿಕಾರಿಗೆ

– ಪ್ರತ್ಯಾಯೋಜಿಸಬಹುದು.

**77. ನ್ಯಾಯಾಲಯ ಫೀಜುಗಳಿಗೆ ಸಂಬಂಧಿಸಿದಂತೆ ಉಳಿಸುವಿಕೆ.–** ಈ ಅಧಿನಿಯಮದಲ್ಲಿರುವುದು ಯಾವುದೂ, ನ್ಯಾಯಾಲಯದ ಫೀಜುಗಳಿಗೆ ಸಂಬಂಧಿಸಿ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಅಧಿನಿಯಮಿತಿಯ ಮೇರೆಗೆ ವಿಧಿಸಬಹುದಾದ ಶುಲ್ಕಗಳಿಗೆ ಬಾಧಕವಾಗುವುದೆಂದು ಭಾವಿಸತಕ್ಕುದಲ್ಲ.

**77ಎ. ಕೆಲವು ಸ್ಟಾಂಪುಗಳಿಗೆ ಸಂಬಂಧಿಸಿದಂತೆ ಉಳಿಸುವಿಕೆ.–** ನಾಲ್ಕು ಆಣೆಗಳ ವರ್ಗಗಳಲ್ಲಿರುವ ಅಥವಾ ಅವುಗಳ ಗುಣಕಗಳಲ್ಲಿರುವ ಎಲ್ಲಾ ಸ್ಟಾಂಪುಗಳು, ಇಪ್ಪತ್ತೈದು ನಯೆ ಪೈಸೆಯ ಮೌಲ್ಯದ ಅಥವಾ ಸಂದರ್ಭಾನುಸಾರವಾಗಿ, ಅವುಗಳ ಗುಣಕಗಳ ಮೌಲ್ಯದ ಸ್ಟಾಂಪುಗಳೆಂದು ಭಾವಿಸತಕ್ಕುದು ಮತ್ತು ತದನುಸಾರ ಈ ಅಧಿನಿಯಮದ ಎಲ್ಲಾ ಉದ್ದೇಶಗಳಿಗಾಗಿ ವಿಧಿಮಾನ್ಯವಾಗಿರತಕ್ಕುದು.

**78. ಅಧಿನಿಯಮವನ್ನು ಭಾಷಾಂತರಿಸಿ ಸುಲಭ ಬೆಲೆಗೆ ಮಾರಾಟ ಮಾಡುವುದು.–** ಪ್ರತಿಯೊಂದು ರಾಜ್ಯ ಸರ್ಕಾರವು, ತನ್ನ ಆಡಳಿತಕ್ಕೆ ಒಳಪಟ್ಟ ರಾಜ್ಯಕ್ಷೇತ್ರಗಳ ಪ್ರಧಾನ ದೇಶಭಾಷೆಗಳಲ್ಲಿ ಈ ಅಧಿನಿಯಮದ ಭಾಷಾಂತರಗಳನ್ನು ಪ್ರತಿ ಒಂದಕ್ಕೆ ಇಪ್ಪತ್ತೈದು ಪೈಸೆಗೆ ಮೀರದಷ್ಟು ಬೆಲೆಗೆ ಮಾರಾಟ ಮಾಡುವ ವ್ಯವಸ್ಥೆ ಮಾಡತಕ್ಕುದು.

**79. ನಿರಸನ.–** ನಿರಸನ ಮತ್ತು ತಿದ್ದುಪಡಿ ಅಧಿನಿಯಮ, 1914ರ (1914ರ 10) 3ನೇ ಪ್ರಕರಣದ ಮತ್ತು IIನೇ ಅನುಸೂಚಿಯ ಮೂಲಕ ನಿರಸನಗೊಳಿಸಲಾಗಿದೆ.

## ಅನುಸೂಚಿ – I

## ಲಿಖಿತಗಳ ಮೇಲಿನ ಸ್ಟಾಂಪು ಶುಲ್ಕ

**(3ನೇ ಪ್ರಕರಣವನ್ನು ನೋಡಿ)**

| | ಲಿಖಿತದ ವಿವರಣೆ | ಯುಕ್ತ ಸ್ಟಾಂಪು ಶುಲ್ಕ |
|---|---|---|
| | (1) | (2) |
| 1. | ಮೊಬಲಗಿನಲ್ಲಿ ಅಥವಾ ಮೌಲ್ಯದಲ್ಲಿ ಇಪ್ಪತ್ತು ರೂಪಾಯಿಗಳಿಗೆ ಮೀರಿದ ಋಣದ, ಎಂದರೆ ಯಾವುದೇ ಪುಸ್ತಕದಲ್ಲಿರುವ (ಬ್ಯಾಂಕರನ ಪಾಸ್‌ಬುಕ್ಕಿನ ಹೊರತಾದ) ಅಥವಾ ಅಂಥ ಪುಸ್ತಕವನ್ನು ಅಥವಾ ಕಾಗದವನ್ನು ಲೇಣೆದಾರನ ಸ್ವಾಧೀನದಲ್ಲಿ ಬಿಟ್ಟಿರುವಾಗ ಪ್ರತ್ಯೇಕ ಕಾಗದದ ಭಾಗದ ಮೇಲಿರುವ ಅಂಥ ಋಣದಸಾಕ್ಷ್ಯವನ್ನು ಒದಗಿಸುವ ದೃಷ್ಟಿಯಿಂದ ಋಣಿಯು ಅಥವಾ ಅವನ ಪರವಾಗಿ ಬರೆದಿರುವ ಅಥವಾ ಸಹಿಮಾಡಿದ ತಲುಪೊಪ್ಪಿಗೆ, ಪರಂತು, ಅಂಥ ತಲುಪೊಪ್ಪಿಗೆಯು, ಋಣ ಸಂದಾಯ ಮಾಡಲು ಯಾವುದೇ ವಾಗ್ದಾನವನ್ನು ಮಾಡುವ ಅಥವಾ ಬಡ್ಡಿಯನ್ನು ಸಂದಾಯ ಮಾಡುವ ಅಥವಾ ಯಾವುವೇ ಸರಕುಗಳನ್ನು ಅಥವಾ ಇತರ ಸ್ವತ್ತನ್ನು ಒಪ್ಪಿಸಿ ಕೊಡುವ ಯಾವುದೇ ಷರತ್ತನ್ನು ಒಳಗೊಂಡಿರಬಾರದು. | ಒಂದು ಆಣೆ |
| 2. | **ಆಡಳಿತ ಬಂಧಪತ್ರ** – ಭಾರತ ಉತ್ತರಾಧಿಕಾರ ಅಧಿನಿಯಮ, 1865ರ 256ನೇ ಪ್ರಕರಣದ, ಸರ್ಕಾರಿ ಉಳಿತಾಯ ಬ್ಯಾಂಕುಗಳ ಅಧಿನಿಯಮ, 1873ರ 6ನೇ ಪ್ರಕರಣದ, ಪ್ರೊಬೇಟ್ ಮತ್ತು ಆಡಳಿತ ಅಧಿನಿಯಮ, 1881ರ 78ನೇ ಪ್ರಕರಣದ ಅಥವಾ ಉತ್ತರಾಧಿಕಾರ ಪ್ರಮಾಣ ಪತ್ರ ಅಧಿನಿಯಮ, 1889ರ 9ನೇ ಪ್ರಕರಣದ ಅಥವಾ 10ನೇ ಪ್ರಕರಣದ ಅಡಿಯಲ್ಲಿ ಕೊಡಲಾದ ಬಂಧಪತ್ರವೂ ಸೇರಿ – | |
| (ಎ) | ಮೊಬಲಗು 1,000 ರೂಪಾಯಿಗಳನ್ನು ಮೀರದಿದ್ದಲ್ಲಿ; | ಅಂಥ ಮೊಬಲಗಿನ ಬಂಧಪತ್ರದ (ಸಂಖ್ಯೆ15) ಸುಂಕದಷ್ಟೇ ಶುಲ್ಕ. ಐದು ರೂಪಾಯಿಗಳು |

| (1) | | (2) |
|---|---|---|
| (ಬಿ) | ಇತರ ಯಾವುದೇ ಸಂದರ್ಭದಲ್ಲಿ | ಐದು ರೂಪಾಯಿಗಳು |
| 3. | **ದತ್ತಕಪತ್ರ,** ಎಂದರೆ ದತ್ತಕವನ್ನು ದಾಖಲಿಸುವ ಅಥವಾ ದತ್ತಕವನ್ನು ತೆಗೆದುಕೊಳ್ಳುವ ಅಧಿಕಾರವನ್ನು ನೀಡುವ ಅಥವಾ ನೀಡುವುದೆಂದು ತಾತ್ಪರ್ಯವಾಗುವ ವಿಲ್ಲಿನ ಹೊರತಾದ ಯಾವುದೇ ಲಿಖಿತ<br>**ಅಡ್ವೋಕೇಟ್,** ಅಡ್ವೋಕೇಟ್(ಸಂ.30) ಎಂಬಲ್ಲಿನ ನಮೂದನ್ನು ನೋಡಿ. | ಹತ್ತು ರೂಪಾಯಿಗಳು |
| 4. | **ಶಪಥಪತ್ರ**- ಪ್ರಮಾಣ ಮಾಡುವುದಕ್ಕೆ ಬದಲಾಗಿ ದೃಢೀಕರಿಸಲು ಅಥವಾ ಘೋಷಿಸಲು ಕಾನೂನಿನ ಮೂಲಕ ಅನುಮತಿಸಲಾದ ವ್ಯಕ್ತಿಗಳ ಸಂದರ್ಭದಲ್ಲಿ ದೃಢೀಕರಣ ಅಥವಾ ಘೋಷಣೆ ಇವೂ ಸೇರಿ. | ಒಂದು ರೂಪಾಯಿ. |
| | **ವಿನಾಯತಿಗಳು** | |
| | ಶಪಥಪತ್ರವನ್ನು ಅಥವಾ ಲಿಖಿತ ಘೋಷಣೆಯನ್ನು - | |
| (ಎ) | ಭಾರತ ಸೇನಾ ಅಧಿನಿಯಮ, 1911ರ ಅಥವಾ ಭಾರತ ವಾಯು ಬಲ ಅಧಿನಿಯಮ, 1932ರ ಮೇರೆಗೆ ಬಂದು ಷರತ್ತಾಗಿ ಮಾಡಿದಾಗ; | |
| (ಬಿ) | ಯಾವುದೇ ನ್ಯಾಯಾಲಯದಲ್ಲಿ ಅಥವಾ ಯಾವುದೇ ನ್ಯಾಯಾಲಯದ ಅಧಿಕಾರಿಯ ಮುಂದೆ ಸಲ್ಲಿಸುವ ಅಥವಾ ಉಪಯೋಗಿಸುವ ತಕ್ಷಣದ ಉದ್ದೇಶಕ್ಕಾಗಿ ಮಾಡಿದಾಗ; ಅಥವಾ | |
| (ಸಿ) | ಯಾವನೇ ವ್ಯಕ್ತಿಗೆ ಯಾವುದೇ ನಿವೃತ್ತಿ ವೇತನವನ್ನು ಅಥವಾ ಧರ್ಮಾರ್ಥ ಭತ್ಯವನ್ನು ಸ್ವೀಕರಿಸಲು ಸಾಧ್ಯಗೊಳಿಸುವ ಏಕಮಾತ್ರ ಉದ್ದೇಶಕ್ಕಾಗಿ ಮಾಡಿದಾಗ; | |
| 5. | **ಒಪ್ಪಂದವು ಅಥವಾ ಒಪ್ಪಂದದ ವಿವರಣ ಪತ್ರವು-** | |

| (1) | | (2) |
|---|---|---|
| (ಎ) | ವಿನಿಮಯ ಪತ್ರದ ಮಾರಾಟಕ್ಕೆ ಸಂಬಂಧಿಸಿದ್ದರೆ; | ಎರಡು ಆಣೆಗಳು |
| (ಬಿ) | ಸರ್ಕಾರಿ ಭದ್ರತಾ ಪತ್ರದ ಅಥವಾ ನಿಗಮಿತ ಕಂಪನಿಯ ಅಥವಾ ಇತರ ನಿಗಮಿತ ನಿಕಾಯದ ಷೇರಿನ ಮಾರಾಟಕ್ಕೆ ಸಂಬಂಧಿಸಿದ್ದರೆ; | ಗರಿಷ್ಠ ಹತ್ತು ರೂಪಾಯಿಗಳಿಗೆ ಒಳಪಟ್ಟು, ಭದ್ರತೆಯ ಅಥವಾ ಷೇರಿನ ಮೌಲ್ಯದ ಪ್ರತಿ 10,000 ರೂಪಾಯಿಗಳಿಗೆ ಅಥವಾ ಅದರ ಭಾಗಕ್ಕೆ ಒಂದು ಆಣೆ |
| (ಸಿ) | ಅನ್ಯಥಾ ಉಪಬಂಧಿಸಿರದಿದ್ದರೆ | ಎಂಟು ಆಣೆಗಳು |
| | **ವಿನಾಯಿತಿಗಳು** | |
| | ಒಪ್ಪಂದವು ಅಥವಾ ಒಪ್ಪಂದ ವಿವರಣಪತ್ರವು- | |
| (ಎ) | ಸಂಖ್ಯೆ 43ರ ಮೇರೆಗೆ ಶುಲ್ಕ ವಿಧಿಸತಕ್ಕ ನೋಟು ಅಥವಾ ವಿವರಣ ಪತ್ರವಾಗಿಲ್ಲದ ಅನ್ಯಾಯವಾಗಿ ಸರಕುಗಳ ಅಥವಾ ವಾಣಿಜ್ಯ ಸರಕುಗಳ ಮಾರಾಟದ ಸಲುವಾಗಿ ಮಾಡಿಕೊಂಡಿದ್ದರೆ ಅಥವಾ ಅದಕ್ಕೆ ಸಂಬಂಧಿಸಿದ್ದರೆ | |
| (ಬಿ) | ಕೇಂದ್ರ ಸರ್ಕಾರಕ್ಕೆ ಟೆಂಡರುಗಳ ರೂಪದಲ್ಲಿ ಮಾಡಲಾದ, ಯಾವುದೇ ಸಾಲಕ್ಕಾಗಿ ಅಥವಾ ಅದಕ್ಕೆ ಸಂಬಂಧಿಸಿದ ಒಪ್ಪಂದ ಅಥವಾ ಒಪ್ಪಂದದ ವಿವರಣ ಪತ್ರ. | |
| | **ಗುತ್ತಿಗೆ ಒಪ್ಪಂದ**: ಗುತ್ತಿಗೆ (ಸಂ. 35) ನೋಡಿ: | |
| **6.** | **ಸ್ವಾಮ್ಯ ಪತ್ರ, ಗಿರವಿ ಅಥವಾ ಒತ್ತೆಯ ಠೇವಣಿಗೆ ಸಂಬಂಧಿಸಿದ ಒಪ್ಪಂದ,** ಎಂದರೆ, | |
| (1) | (ಮಾರಾಟ ಮಾಡಬಹುದಾದ ಭದ್ರತೆಯನ್ನು ಹೊರತು ಪಡಿಸಿ) ಯಾವುದೇ ಸ್ವತ್ತಿನ ಸ್ವಾಮ್ಯವಾಗಿರತಕ್ಕ ಅಥವಾ ಅದರ ಸಾಕ್ಷ್ಯವಾಗಿರತಕ್ಕ ಸ್ವಾಮ್ಯ ಪತ್ರಗಳ ಅಥವಾ ಲಿಖಿತಗಳ ಠೇವಣಿ; ಅಥವಾ | |

| (1) | | (2) |
|---|---|---|
| (2) | ಚರಸ್ವತ್ತಿನ ಗಿರವಿ ಅಥವಾ ಒತ್ತೆ: ಇವುಗಳಿಗೆ ಸಂಬಂಧಿಸಿದ ಒಪ್ಪಂದದ ಸಾಕ್ಷ್ಯವಾಗಿರುವ ಯಾವುದೇ ಲಿಖಿತ.ಮುಂಗಡವಾಗಿ ಕೊಟ್ಟ ಅಥವಾ ಸಾಲವಾಗಿ ಕೊಡಲಿರುವ ಅಥವಾ ಈಗಿರುವ ಅಥವಾ ಮುಂದಿನ ಋಣದ ರೂಪದಲ್ಲಿ ಕೊಡಲಿರುವ ಹಣದ ಮರುಸಂದಾಯಕ್ಕೆ ಭದ್ರತೆಯ ರೂಪದಲ್ಲಿ ಅಂಥ ಠೇವಣಿಯನ್ನು, ಗಿರವಿ ಅಥವಾ ಒತ್ತೆಯನ್ನು ಇಟ್ಟಿರುವಲ್ಲಿ- | |
| (ಎ) | ಅಂಥ ಸಾಲವನ್ನು ಅಥವಾ ಋಣವನ್ನು ತಗಾದೆಯ ಮೇಲೆ ಅಥವಾ ಒಪ್ಪಂದದ ಸಾಕ್ಷ್ಯವಾಗಿರುವ ಲಿಖಿತದ ದಿನಾಂಕದಿಂದ ಮೂರು ತಿಂಗಳು ಆದ ಮೇಲೆ ಮರುಸಂದಾಯ ಮಾಡಬೇಕಾಗಿರುವಲ್ಲಿ | ಭದ್ರಗೊಳಿಸಿದ ಮೊಬಲಗಿಗಾಗಿ ವಿನಿಮಯ ಪತ್ರದಮೇಲೆ ಸಂದಾಯವಾಗತಕ್ಕ [(ನಂ 13(ಬಿ)] ಅಷ್ಟೇ ಶುಲ್ಕ |
| (ಬಿ) | ಅಂಥ ಸಾಲವನ್ನು ಅಥವಾ ಋಣವನ್ನು ಅಂಥ ಲಿಖಿತದದಿನಾಂಕದಿಂದ ಮೂರು ತಿಂಗಳು ಮೀರದ ಹಾಗೆ<br>ಮರುಸಂದಾಯ ಮಾಡಬೇಕಾಗಿರುವಲ್ಲಿ<br>**ವಿನಾಯತಿ:**<br>ಸರಕುಗಳ ಗಿರವಿ ಅಥವಾ ಒತ್ತೆಯ ಲಿಖಿತ ದೃಢೀಕರಣವಾಗಿರದಿದ್ದರೆ | ಭದ್ರಗೊಳಿಸಿದ ಮೊಬಲಗಿಗಾಗಿ ವಿನಿಮಯ ಪತ್ರದ ಮೇಲೆ ಸಂದಾಯವಾಗತಕ್ಕ [ನಂ. (ಬಿ)] ಶುಲ್ಕದ ಅರ್ಧದಷ್ಟು. |
| **7.** | **ಅಧಿಕಾರದ** ಅಮಲ್ಜಾರಿಯಲ್ಲಿ ನಿಯುಕ್ತಿ. ನ್ಯಾಸಧಾರಿಗಳ ಅಥವಾ ವಿಲ್ಲು ಆಗಿರದ ಯಾವುದೇ ಲಿಖಿತದ ಮೂಲಕ ಚರ ಅಥವಾ ಸ್ಥಿರ ಸ್ವತ್ತಿಗೆ ಸಂಬಂಧಿಸಿದಂತೆ ನಿಯುಕ್ತಿ ಮಾಡಲಾಗಿರುವಲ್ಲಿ | ಹದಿನೈದು ರೂಪಾಯಿ |
| **8.** | ದಾವೆಯ ಕ್ರಮದಲ್ಲಿ ನ್ಯಾಯಾಲಯದ ಆದೇಶದ ಮೇರೆಗೆ ಅಲ್ಲದೆ<br>ಮಾಡಲಾದ **ಮೌಲ್ಯ ನಿರ್ಣಯ ಅಥವಾ ಮೌಲ್ಯ ಮಾಪನವು-** | |
| (ಎ) | 1,000 ರೂಪಾಯಿಗೆ ಮೀರದ ಮೊಬಲಗು ಆಗಿರುವಲ್ಲಿ | ಅಂಥ ಮೊಬಲಗಿಗಾಗಿ ಬಂಧಪತ್ರಕ್ಕೆ ಸಂದಾಯವಾಗತಕ್ಕ (ನಂ. 15) ಅಷ್ಟೇ ಶುಲ್ಕ |

| (1) | | (2) |
|---|---|---|
| (ಬಿ) | ಇತರ ಯಾವುದೇ ಸಂದರ್ಭದಲ್ಲಿ | ಐದು ರೂಪಾಯಿ |
| | ***ವಿನಾಯಿತಿಗಳು:*** | |
| (ಎ) | ಒಬ್ಬ ಪಕ್ಷಕಾರನ ಮಾಹಿತಿಗಾಗಿ ಮಾತ್ರ ಮಾಡಿದ ಮತ್ತು ಒಪ್ಪಂದದ ಮೂಲಕ ಅಥವಾ ಕಾನೂನಿನ ಪ್ರವರ್ತನೆಯಿಂದ ಪಕ್ಷಕಾರರ ನಡುವೆ ಯಾವುದೇ ರೀತಿಯಲ್ಲಿ ಕಡ್ಡಾಯ ವಾಗಿಲ್ಲದ ಮೌಲ್ಯ ನಿರ್ಣಯ ಅಥವಾ ಮೌಲ್ಯಮಾಪನ. | |
| (ಬಿ) | ಭೂಮಾಲೀಕನಿಗೆ ಗೇಣಿಯಾಗಿ ಕೊಡಬೇಕಾದ ಮೊಬಲಗನ್ನು ಗೊತ್ತುಪಡಿಸುವ ಉದ್ದೇಶಕ್ಕಾಗಿ ಬೆಳೆಗಳ ಮೌಲ್ಯ ನಿರ್ಣಯ. | |
| **9**. | **ಅಪ್ರೆಂಟಿಶಿಪ್** – ಪತ್ರ ಯಾವನೇ ಒಡೆಯನಲ್ಲಿ ಯಾವುದೇ ವೃತ್ತಿಯನ್ನು, ಕಸಬನ್ನು ಅಥವಾ ಉದ್ಯೋಗವನ್ನು ಕಲಿಯಲು ನಿಯೋಜಿಸಿದ ಯಾವನೇ ಅಪ್ರೆಂಟೀಸ್, ಕಾರಕೂನ ಅಥವಾ ನೌಕರನ ಸೇವೆಗೆ ಅಥವಾ ತರಬೇತಿಗೆ ಸಂಬಂಧಿಸಿದ, ಅಭ್ಯಾಸಿಗೆ ಸಂಬಂಧಪಟ್ಟ ನಿಯಮಾವಳಿಯಾಗಿಲ್ಲದ, ಪ್ರತಿಯೊಂದು ಲಿಖಿತವೂ ಸೇರಿ. | ಐದು ರೂಪಾಯಿ. |
| | ***ವಿನಾಯಿತಿ:*** | |
| | ಅಪ್ರೆಂಟಿಶಿಪ್ ಅಧಿನಿಯಮ, 1850ರ (1850ರ 19) ಮೇರೆಗೆ ಮ್ಯಾಜಿಸ್ಟ್ರೇಟನು ಬರೆದುಕೊಟ್ಟ ಅಥವಾ ಯಾವುದರ ಮೂಲಕ ಒಬ್ಬ ವ್ಯಕ್ತಿಯನ್ನು ಯಾವುದೇ ಸಾರ್ವಜನಿಕ ದತ್ತಿಯಿಂದ ಅಥವಾ ಅದರ ಅಧೀನದಲ್ಲಿ ಅಪ್ರೆಂಟೀಸ್ ಆಗಿ ನೀಡಲಾಗಿದೆಯೋ ಆ ಯಾವುದೇ ಅಪ್ರೆಂಟಿಶಿಪ್ ಲಿಖಿತಗಳು. | |

| | (1) | (2) |
|---|---|---|
| **10**. | **ಕಂಪನಿಯ ಅಂತರ್ ನಿಯಮಾವಳಿ:**<br>***ವಿನಾಯಿತಿ:***<br>ಲಾಭಕ್ಕಾಗಿ ರಚಿತವಾಗಿಲ್ಲದ ಮತ್ತು ಭಾರತ ಕಂಪನಿಗಳ ಅಧಿನಿಯಮ, 882ರ (1882ರ 6) 26ನೇ ಪ್ರಕರಣದ ಮೇರೆಗೆ ನೋಂದಾಯಿತ ವಾದ ಯಾವುದೇ ಅಂತರ್ ನಿಯಮಾವಳಿ ಕಂಪನಿಯ ಸ್ಥಾಪನಾ ಜ್ಞಾಪನಪತ್ರವನ್ನು ಸಹ ನೋಡಿ (ನಂ 39) | ಇಪ್ಪತ್ತೈದು ರೂಪಾಯಿ |
| **11**. | **ಅಭ್ಯಾಸಿಗೆ ಸಂಬಂಧಿಸಿದ ನಿಯಮಾವಳಿಗಳು** ಅಥವಾ ಯಾವುದೇ ಉಚ್ಚ ನ್ಯಾಯಾಲಯದಲ್ಲಿ ಒಬ್ಬ ಅಟಾರ್ನಿಯಾಗಿ ಪ್ರವೇಶ ಪಡೆಯಲು, ಕಾರಕೂನನಾಗಿ ಸೇವೆ ಸಲ್ಲಿಸಲು ಯಾವನೇ ವ್ಯಕ್ತಿಯು ಯಾವ ಕರಾರಿನ ಮೂಲಕ ಮೊದಲು ಬದ್ಧನಾಗುವನೋ ಆ ಕರಾರು.<br>ವಹಿಸಿಕೊಡುವಿಕೆ: ಸಂದರ್ಭಾನುಸಾರ ಹಸ್ತಾಂತರಣ (ಸಂ. 23), ವರ್ಗಾವಣೆ (ಸಂ. 62) ಮತ್ತು ಗುತ್ತಿಗೆಯ ವರ್ಗಾವಣೆ (ಸಂ. 63) ಇವುಗಳನ್ನು ನೋಡಿ<br><br>**ಅಟಾರ್ನಿ:** ಅಟಾರ್ನಿಯಾಗಿ ಪ್ರವೇಶ (ಸಂ. 30) ಮತ್ತು **ಪವರ್‌ಆಫ್ ಅಟಾರ್ನಿ** (ಸಂ. 48) ಇವುಗಳನ್ನು ನೋಡಿ.<br>**ದತ್ತು ಸ್ವೀಕಾರದ ಅಧಿಕಾರ ದತ್ತಕ ಪತ್ರ** (ಸಂ. 3) ನೋಡಿ | ಇನ್ನೂರ ಐವತ್ತು ರೂಪಾಯಿ |
